This is one point. Secondly, the Hon.Minister has said that the calender of events has not been published by the Election Commission and therefore no cause of action arise so far as making a request in some form or the other which is suitable or proper under the law. Normally, the Election Commission will send the calender of events to the Government for approval because it is the Government which provides the entire machinery for conducting the elections and also it is the Government which fix the date convenient and suitable. This is the normal practice adopted when Election Commission approaches either the State Government or the Central Government. I would like to have an assurance from the Government that when the cause of action arises, the Government either by letter or by request or by any other means must see that the elections to the local authorities are postponed till the municipal elections are held.

SRI B. BASAVALINGAPPA.—That is understood.

(Sri Bhimanna Khandre rose)

MR. CHAIRMAN.—If the Leader of the Opposition agrees that was the understanding, every body should be satisfied with that. We have discussed this matter enough and more so an assurance to the effect has been given by the Revenue Minister and the Leader of the Opposition has accepted it. We shall therefore proceed with the next item,

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಮಂತ್ರಿಗಳಿಂದ ಸೂಕ್ತವಾದ ಭರವಸೆ ನಮಗೆ ಬರಲಿಲ್ಲ. ವಿಧಾನ ಪರಿಷತ್ತಿನ ಚುನಾವಣೆ ಆದ ಮೇಲೆ ಸ್ಥಳೀಯ ಸಂಸ್ಥೆಗಳ ಚುನಾವಣೆ ಆಗಬೇಕಾಗಿತ್ತು, ಇದನ್ನು ಮೊದಲು ಮಾಡಲಿ, ಅನಂತರ ಎರಡನೇ ಪ್ರಶ್ನೆ.

MR. CHAIRMAN.—I will not allow further discussion on this issue because the matter is treated as closed. I would therefore request the Hon. the Leader of the Opposition to commence the discussion on the budget.

Budget Estimates for 1978-79 General Discussion

†ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸಭಾಧ್ಯಕ್ಷರೇ, ಅರ್ಥ ಮಂತ್ರಿಗಳು ಮಂಡಿಸಿದ ಈ ಆಯವ್ಯಯದ ಮೇಲೆ ಕೆಲವು ವಿಚಾರಗಳನ್ನು ಈ ಮೊದಲೇ ಹಿಂದಿನ ಅಧಿವೇಶನದಲ್ಲಿ ನಾನು ಹೇಳಿದ್ದೇನೆ, ಅನಂತರ ಎರಡು ತಿಂಗಳು ಕಳೆದಿದೆ, ಈಗ ಪುನಃ ವಿವರವಾದ ವಿಚಾರಗಳನ್ನು ಹೇಳಬಯಸುತ್ತಿದ್ದೇನೆ. ಮೊಟ್ಟಮೊದಲನೆಯದಾಗಿ ಈ ಎರಡು ತಿಂಗಳ ಅವಧಿಯಲ್ಲಿ ಸರ್ಕಾರ ನಡೆದಂತಹ ರೀತಿನೀತಿ ಕೈಕೊಂಡಂತಹ ಕಾರ್ಯಕ್ರಮದ ಮುನ್ಸೂಚನೆಯೆಂದು ನಾನು ತಿಳಿದುಕೊಂಡಿದ್ದೇನೆ. ಕಳೆದ ಆರು ವರ್ಷಗಳವರೆಗೆ ಈ ಪಕ್ಷ ಆಡಳಿತ ನಡೆಸಿದೆ, ಪುನಃ ಜನರು ಇವರನ್ನು ಅಧಿಕಾರಕ್ಕೆ ಚುನಾಯಿಸಿದ್ದಾರೆ. ಈ ಚುನಾವಣೆಗಳಾದ ಮೇಲೆ ಎರಡು ತಿಂಗಳಲ್ಲಿ ಯಾವ ರೀತಿ ನಡೆದುಕೊಂಡಿದ್ದಾರೆನ್ನುವುದು ಬಹಳ ಮಹತ್ವದ್ದು. ನಾನು ವಿರೋಧಪಕ್ಷದ ನಾಯಕನಾಗಿಯಾಗಲೀ ಸದಸ್ಯನಾಗಿಯಾಗಲೀ ಈ ಮಾತುಗಳನ್ನು ಹೇಳುತ್ತಿಲ್ಲ. ಈ ಮನೆಯ ಪ್ರತಿಯೊಬ್ಬ ಸದಸ್ಯರೂ ಕೂಡ ಸರ್ಕಾರದ ನೀತಿ ನಿಯಮಗಳನ ಎಚ್ಚರಿಕೆಯಿಂದ ಕಣ್ತೆರೆದು ನೋಡಿ ಹೇಳಬೇಕಾಗಿದೆ. ಮೊದಲನೆಯದಾಗಿ ಈ ರಾಜ್ಯದಲ್ಲಿ ಮಂತ್ರಿಮಂಡ

ಲದ ಸರ್ಕಾರ ಇಲ್ಲವೆಂದು ಹೇಳಬಯಸುತ್ತೇನೆ. ಇಲ್ಲಿ ಇರತಕ್ಕಂಥಾದ್ದು ಒಬ್ಬ ವ್ಯಕ್ತಿಯ ಸರ್ಕಾರ. ಈ ಮಾತನ್ನು ನಾನು ಬಹಳ ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ನಾನು ಮಂತ್ರಿಮಂಡಲದ ಸದಸ್ಯ ಮಿತ್ರರ ಮನಸ ನ್ನು ನೋಯಿಸಬೇಕೆಂಬ ದೃಷ್ಟಿಯಿಂದ ಹೇಳುತ್ತಿಲ್ಲ.

ಶ್ರೀ ಎಸ್. ಎಂ. ಯಾಹ್ಯಾ.—ಇಲ್ಲಿ ಒಬ್ಬರು ಮುಖ್ಯಮಂತ್ರಿ ಇದ್ದಾರೆ, ಬೇರೆ ಕಡೆ ಬೇಕಾದಷ್ಟು ಜನ ಪ್ರಧಾನ ಮಂತ್ರಿಗಳು ಇದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಪ್ರಧಾನ ಮಂತ್ರಿಗಳು ಒಬ್ಬರು ಇದ್ದಾರೋ ಅನೇಕ ಜನ ಇದ್ದಾರೋ ಎನು ವುದು ಜನತೆಗೆ ಗೊತ್ತಿದೆ. ಈ ರಾಜ್ಯದಲ್ಲಿ ಒಬ್ಬರದೇ ಮಂತ್ರಿಮಂಡಲ ಇದೆ ಎನ್ನುವ ಮಾತನ್ನು ತಮ್ಮ ನಡವಳಿಕೆಗಳಿಂದ ತೋರಿಸುತ್ತಿದ್ದೇನೆ. ಇವತ್ತು ಮಂತ್ರಿಗಳಿಗೆ ವಹಿಸಿಕೊಟ್ಟಿರುವ ಖಾತೆಗಳ ಪಟ್ಟಿಯನ್ನು ನೋಡಿ, ಮುಖ್ಯಮಂತ್ರಿಗಳಿಗೆ ಇರತಕ್ಕ ಖಾತೆಗಳ ಪಟ್ಟಿಯನ್ನು ನೋಡಿ, ಎಲ್ಲಾ ಮಂತ್ರಿಗಳ ಖಾತೆಗಳನ್ನು ಕೂಡಿದರೂ ಕೂಡ ಮುಖ್ಯಮಂತ್ರಿಗಳ ಖಾತೆಗಳಷ್ಟಾಗುವುದಿಲ್ಲ. ಡ್ಮಿನಿಸ್ಟ್ರೇಷನ್, ಹೋಂ, ಮೇಜರ್ ಇರಿಗೇಷನ್, ಫಿಷರೀಸ್ ಎಲ್ಲಾ ಅವರಲ್ಲಿಯೇ ಇದೆ. Almost all the important portfolios are held by Chief Minister.

Mr. Chairman.—It is the prerogative of the Chief Minister and his party to decide it. If the work of any department has not been done, then any member has a right to point it out.

Sri S. R. Bommai.—Let the Chair permit me and I shall show how the work has suffered. There is no shortage of talents in the ruling party. There are brilliant people on that side. It is therefore the duty of the members on that side to see that portfolios are distributed properly, that proper persons are installed as Ministers, and that Ministers are given work to their full capacity. ಸ್ವಾಮಿ, ನಾನು ಇದರಲ್ಲಿ ಏನೋ ರಾಜಕೀಯ ಮಾಡುವ ಉದ್ದೇಶದಿಂದ ಹೇಳುತ್ತಿಲ್ಲ. ತಾವು ಹರಿಜನರ ಗಿರಿಜನರ ಹಾಗೂ ಹಿಂದುಳಿದವರ ಕೈವಾರಿಗಳು ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿಕೊಳ್ಳುತ್ತಿದ್ದಾರೆ, ಹರಿಜನ ಗಿರಿಜನರಿಗೆ ಕೊಟ್ಟಂತಹ ಖಾತೆಗಳನ್ನು ಇವತ್ತು ನೋಡಿದರೆ ಎಂತಹ ಕೈವಾರಿಗಳು ಎನ್ನುವುದು ಗೊತ್ತಾಗುತ್ತದೆ. ಹರಿಜನರಲ್ಲಿ ಇವತ್ತು ಮೇಧಾವಿಗಳು ಇದ್ದಾರೆ, ಸಮರ್ಥರು ಇದ್ದಾರೆ ಅನುಭವಿಗಳು ಇದ್ದಾರೆ. ಇವತ್ತು ಅವರಿಗೆ ಉತ್ತಮವಾದಂತ ಪೋರ್ಟ್ ಫೋಲಿಯೋ ಕೊಡಬಹುದಾಗಿತ್ತು.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಭೂ ಕಂದಾಯದಂತಹ ಮುಖ್ಯವಾದ ಖಾತೆಯನ್ನು ಕೊಟ್ಟಿದ್ದಾರೆ. ಸ್ಪೀಕರ್ ಮಾಡಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ರೆವಿನ್ಯೂ ಬಗೆ ಹೇಳುತ್ತೇನೆ. ಇವತ್ತು ವಿಲೇಜ್ ಅಕೌಂಟೆಂಟ್ ಇದ್ದಾರೆ, ನಮ್ಮ ಕಡೆ ತಲಾಟಿಗಳೆಂದು ಹೇಳುತ್ತೇವೆ. ಇವತ್ತು ಮಾನ್ಯ ಮಂತ್ರಿಗಳು ದೊಡ್ಡ ಶ್ಯಾನುಭೋಗರು ಇದ್ದ ಹಾಗೆ. ಇವತ್ತು ಜಿಲ್ಲಾಧಿಕಾರಿಗಳನ್ನು ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ವರ್ಗ ಮಾಡುವಂತಹ ಅಧಿಕಾರ ಇವತ್ತು ಅವರಿಗೆ ಇಲ್ಲ.

2-30 P. M.

ಶ್ರೀ ಬಿ. ಬಸವಲಿಂಗಪ್ಪ.—ಇಲ್ಲಿ ಐ.ಎ.ಎಸ್. ಆಫೀಸರ್‌ಗಳಿದ್ದಾರೆ ಮತ್ತು ಕೆಲವು ಅಧಿಕಾರ ವರ್ಗ ಇದೆ. ಅದು ಮುಖ್ಯಮಂತ್ರಿಗಳ ವ್ಯಾಪ್ತಿಗೆ ಒಳಪಡತಕ್ಕದ್ದು. ನಾವು ರೂಲ್ಸ್ ಪ್ರಕಾರ ಯಾವುದು ಮಾಡಬೇಕೋ ಅದನ್ನು ಮಾಡುತ್ತೇವೆ. ನಾವು ಯಾರ ಅಧೀನದಲ್ಲೋ ಇದ್ದು ಅವರು ಹೇಳಿದಹಾಗೆ ಕೇಳುತ್ತಿದ್ದೇವೆ. ನಮಗೆ ಸ್ವಾತಂತ್ರ್ಯ ಇಲ್ಲ ಎಂದು ನೀವು ಹೇಳುವುದು ಸರಿಯಲ್ಲ. ನಾವು ಮಾಡುವ ಕೆಲಸ ಮಾಡೇ ಮಾಡುತ್ತೇವೆ. ಮುಖ್ಯಮಂತ್ರಿಗಳು ಕಂಟ್ರೋಲ್ ಮಾಡುತ್ತಾರೆ, ಅಧಿಕಾರ ಇಲ್ಲ ಎಂದು ಏನು ಹೇಳುತ್ತೀರಿ ಅದು ತಪ್ಪು, ನಮಗೆ ಎಲ್ಲ ಅಧಿಕಾರ ಇದೆ. ಇಲ್ಲಿ ಎಷ್ಟು ಜನ ಮಂತ್ರಿಗಳಿದ್ದಾರೋ ಅಷ್ಟು ಜನಕ್ಕೂ ಸ್ವಾತಂತ್ರ್ಯ ಉಂಟು. ನನಗಂತೂ ಹೀಗೆ ಮಾಡಿ ಅಂತ ಇವತ್ತಿನವರೆಗೂ ಏನೂ ಹೇಳಿಲ್ಲ. ಬೇರೆ ಮಂತ್ರಿಗಳಿಗೂ ಹೇಳಿಲ್ಲ. ಇಷ್ಟು ಸ್ವಾತಂತ್ರ್ಯ ಇದ್ದಾಗ್ಯೂ ಇಲ್ಲಿ ಮಂತ್ರಿಮಂಡಲ ಇಲ್ಲ, ಒಬ್ಬರದೇ ಮಂತ್ರಿಮಂಡಲ ಇಲ್ಲಿ ಇರುವುದು ಎಂದು ಹೇಳಿದರೆ ಅದು ನ್ಯಾಯವಲ್ಲ.

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಬಸವಲಿಂಗಪ್ಪನವರು ಹಾಗೆ ಹೇಳದೇ ಇದ್ದರೆ ಹಿಂದೆ ತೆಗೆದ ಹಾಗೆ ಮತ್ತೆ ತೆಗೆಯುತ್ತಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗ ಬಸವಲಿಂಗಪ್ಪನವರನ್ನು ತೆಗೆಯುವುದಿಲ್ಲ ನನಗೆ ಗೊತ್ತು. ಈಗ ತೆಗೆಯುವುದಕ್ಕೆ ಸಾಧ್ಯವಿಲ್ಲ ಬಸವಲಿಂಗಪ್ಪನವರು ಈಗ ಆ ರೀತಿ ಹೇಳುವುದು ಸೌಜನ್ಯ ನಾನು ಬೇರೆ ರಾಜ್ಯಗಳಲ್ಲಿ ನೋಡಿದ್ದೇನೆ. ಅಲ್ಲೆಲ್ಲಾ ಯಾವ ಯಾವ ಇಲಾಖೆ ಮಂತ್ರಿಗಳಿರುತ್ತಾರೆ ಅವರು ಆ ಇಲಾಖೆಯ ಅಧಿಕಾರಿಗಳನ್ನು ಸೂಕ್ತವಾದ ರೀತಿಯಲ್ಲಿ ಟ್ರಾನ್ಸ್‌ಫರ್ ಮಾಡತಕ್ಕ ಅಧಿಕಾರ ವನ್ನು ಪಡೆದಿರುತ್ತಾರೆ. ಮಹಾರಾಷ್ಟ್ರದಲ್ಲಿ, ಆಂಧ್ರದಲ್ಲಿ, ತಮಿಳುನಾಡಿನಲ್ಲಿ ಮತ್ತಿತರ ರಾಜ್ಯಗಳಲ್ಲಿ ಹಾಗಿದೆ. ಆದರೆ ಈ ರಾಜ್ಯದಲ್ಲಿ ಮಾತ್ರ ಒಬ್ಬ ವ್ಯಕ್ತಿಯ ಅಧಿಕಾರದ ಹಿಡಿತ ಯಾವರೀತಿ ಇದೆ ಎಂದು ಹೇಳುತ್ತಿದ್ದೇನೆ. ಇಲ್ಲಿ ಜಿ.ಓ. ಇದೆ ಮುಖ್ಯಮಂತ್ರಿಗಳೇ ಮಾಡಬೇಕು ಎಂದು. ಮಾನ್ಯ ಬಸವಲಿಂಗಪ್ಪ ನವರು ಸೌಜನ್ಯಕ್ಕಾಗಿ ನಮಗೂ ಅಧಿಕಾರ ಇದೆ ಎಂದು ಹೇಳಬಹುದು. ಐ.ಎ.ಎಸ್. ಅಧಿಕಾರಿಗಳನು ಟ್ರಾನ್ಸ್‌ಫರ್ ಮಾಡುವ ಸಾಮರ್ಥ್ಯ ಬಸವಲಿಂಗಪ್ಪನವರಿಗಿಲ್ಲವೇ? ಹಿಂದೆ ಇದ್ದ ರೆವಿನ್ಯೂ ಮಿನಿಸ್ಟರು ಆ ರೀತಿ ಮಾಡಿದ್ದಾರೆ.

ಶ್ರೀ ಎಸ್. ಎಂ. ಯಾಹ್ಯಾ.—ಜನರಲ್ ಅಡ್ಮಿನಿಸ್ಟ್ರೇಷನ್ ಎಂದು ಹೇಳಿದರೆ ಏನು? ಕೋ-ಆರ್ಡಿನೇಟ್ ಮಾಡಿಕೊಂಡು ಟ್ರಾನ್ಸ್‌ಫರ್ ಮಾಡುವುದು ಎಂದು. ಮಾನ್ಯ ವಿರೋಧ ಪಕ್ಷದ ನಾಯಕರು ದೊಡ್ಡ ಅನುಭವಶಾಲಿಗಳು ಅವರಿಗೆ ಗೊತ್ತಿದೆ. ಎಲ್ಲಾ ಕಡೆ ಇದೇ ರೀತಿ ಇದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಎಲ್ಲಾ ಕಡೆ ಈ ರೀತಿ ಇಲ್ಲ. ತಾವು ದಯವಿಟ್ಟು ಅದನ್ನು ತಿಳಿದುಕೊಳ್ಳಿ. ಉಳಿದ ರಾಜ್ಯಗಳಲ್ಲಿ ಆಯಾ ಮಂತ್ರಿಗಳು ಆಯಾ ಖಾತೆಯ ಅಧಿಕಾರಿಗಳನ್ನು ಸೂಕ್ತ ಕಂಡ ರೀತಿಯಲ್ಲಿ ಟ್ರಾನ್ಸ್‌ಫರ್ ಮಾಡುವ ಅಧಿಕಾರವನು ಪಡೆದಿರುತ್ತಾರೆ. ಉದಾಹರಣೆಗೆ ಟ್ರಾನ್ಸ್ ಪೋರ್ಟ್ ಮಿನಿಸ್ಟರ್ ಅವರು ಟ್ರಾನ್ಸ್‌ಪೋರ್ಟ್ ಇಲಾಖೆಯ ಅಧಿಕಾರಿಗಳನ್ನು ವರ್ಗ ಮಾಡುತ್ತಾರೆ. ಅದೇ ರೀತಿ ಪಿ.ಡಬ್ಲ್ಯು.ಡಿ. ಮಂತ್ರಿಗಳೂ ಮಾಡುತ್ತಾರೆ. ಇಲ್ಲಿ ಬಂಗಾರಪ್ಪನವರಿಲ್ಲ, ಅವರಿಗೂ ಅಷ್ಟೇ ಇವತ್ತು ಅಧಿಕಾರ ಇಲ್ಲ. ಎಕ್ಸಿಕ್ಯೂಟೀವ್ ಇಂಜಿನಿಯರುಗಳನ್ನು, ಸೂಪರಿಂಟೆಂಡೆಂಟಿಂಗ್ ಇಂಜಿನಿಯರು ಗಳನ್ನು......

ಒಬ್ಬ ಮಾನ್ಯ ಸದಸ್ಯರು.—ಇಲ್ಲಿ ವರ್ಗಾವರ್ಗಿ ಮಾಡುವುದು ಮುಖ್ಯ ಅಲ್ಲ. ಕೆಲಸ ಮುಖ್ಯ. ಯಾರು ಯಾರು ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲಾ ಅದನ್ನು ಹೇಳಬೇಕೇ ಹೊರತು ವರ್ಗಾವರ್ಗಿ ವಿಷಯ ಯಾಕೆ?

ಶ್ರೀಮತಿ ಎಸ್. ಪ್ರಮೀಳ.—ನಮ್ಮ ನಾಯಕರು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡು ತ್ತೀರೋ ಇಲ್ಲವೋ?

MR. CHAIRMAN.—Instead of generating heat over the powers of officials or ministers regarding transfer of employees, I request the Leader of the Opposition to come to the subject proper. It is not a zero hour.

SRI S. R. BOMMAI.—I am sorry. I protest at the suggestion from the Chair. I know what to speak and what not to speak.

MR. CHAIRMAN.—I am not trying to say anything. What I said was that this is an issue where the concerned minister will take up with the concerned persons.

SRI S. R. BOMMAI.—I strongly protest at the remark.

MR. CHAIRMAN.—I never meant anything. On an issue like this let us not take so much time.

Sri Govinda P. Vadeyaraj.—We do respect the Chair. We are second to none in respecting the Chair. But, I submit that the Chair should not use its power to denigrate the Leader of the Opposition. We strongly protest. Your remarks have cast aspersions on the Leader of the Opposition. What does the Chair mean by saying that this is not a zero hour. I protest very strongly. I submit that the Chair should withdraw the remark. It has hurt our feelings.

(*Interruptions*)

Mr. Chairman.—What I said was that the Leader of the Opposition may come to the subject proper on the budget. Incidentally the subject was taken up about the powers of the ministers to transfer employees What I said was the Leader of the Opposition can talk on various aspects and let not much time be taken to talk on this aspect. I never meant any disrespect to any member. I will not do it.

Some Hon. Members.—No, no. You said that this is not the zero hour. We request the Chair to verify from the record.

Mr. Chairman.- I will admit what I said.

Hon. Members.—No, no. Let it be verified.

Mr. Chairman.—What I said was the Leader of the Opposition has taken the subject to speak on budget. On the issue of powers of transfer of employees or officers, let not the time of the House be devoted on that issue. Then several members started speaking and then I did say let not the important time of the House be taken as zero hour.

Hon. Members.—No, no. You did say "Mr. Bommai, this is not zero hour". You have cast aspersions on the Leader of the Opposition.

Mr. Chairman.—Never, it is not my intention. If the Leader of the Opposition says that I have cast any aspersions I will be the first person to apologise.

Sri Govind P. Vadeyaraj.—If that is the case, let it be verified. We have heard you saying "Mr. Bommai this is not zero hour". That is what you have said. We are prepared to withdraw our protest if we are wrong. Let it be verified.

Sri B. Basavalingappa.—Mr. Chairman, as you have admitted many new things will come up. Let us be guided by our own experience. Since the Chair has said that he never meant it, may I say one word? In this budget discussion the Leader of the Opposition

has a right and competency to touch on all aspects ef administration, and branches of administration in his own way. I request that this may be closed.

MR. CHAIRMAN.—It is admitted.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸಭಾಧ್ಯಕ್ಷರು ರೀತಿ ಹೇಳಿದ್ದರೆ ಎಂದು ಹೇಳಿದ್ದಾರೆ. ಆದ್ದರಿಂದ ಅಷ್ಟಕ್ಕೆ ಬಿಟ್ಟುಬಿಡೋಣ.

ಶ್ರೀ ಎಸ್. ಪ್ರಮೀಳ.—ಅವರು ಹೇಳಿಲ್ಲ.

(*Interruptions*)

SRI K. BHASKAR NAIDU.—Let not the hon. member show his finger and gesticulate at me.

SRI GOVIND P. VADEYARAJ.—Yesterday I have told Sri Bhaskar Naidu that if he wishes I am prepared to take him for a ride. He wants to interfere at every stage. If he wants to become a minister, let him .... * * * *

(*Interruptions*)

MR. CHIRMAN.—Don't record.

SRI K. BHASKAR NAIDU.—Sir, you said the matter was closed. Let not the opposition members go on speaking about it.

SRI GOVINDA P. VADEYARAJ.—I have been observing certain members rising and speaking often. I know very well that they want to show their expertise before the Chief Minister. If the Chief Minister were to be here many members rise often and often.

SRI S. M. YAHYA —Let not the member make such aspersions. It affects our representatives. We cannot allow such things.

Sri B. B. SAYANAK.—Sir, I rise on a Point of Order. When one hon. member is speaking, three or four other members stand up and begin to speak. Is this permitted?

MR. CHAIRMAN.—It is definitely not permitted. When one member is on his legs, others should not get up and speak.

ಶ್ರೀ ಗೋವಿಂದ ಪಿ. ಒಡೆಯರಾಜ್.—ನಾನು ಇಂಗ್ಲೀಷ್ ಭಾಷೆಯ ಬಗ್ಗೆ ಹೇಳುತ್ತಿದ್ದೆ. ಅದು ಎಷ್ಟು ಮಧುರವಾದ ಭಾಷೆ ಎಂದರೆ, ಏನು ಬೇಕಾದರೂ ಹೇಳಿ, ಮನಸ್ಸು ನೋಯುವಂ ಹೇಳಿ, ತೊಂದರೆಯಾಗುವಂತೆ ಹೇಳಿ, ಅವಮಾನವಾಗುವಂತೆ ಹೇಳಿ ಕೊನೆಗೆ 'ಸಾರಿ' ಎಂದು ಹೇಳಿಬಿಟ್ಟರೆ ಎಲ್ಲವೂ ಸಮಾಧಾನವಾಗುತ್ತದೆ. ಇವತ್ತು ನಿಜವಾಗಿಯೂ ಅದೇ ರೀತಿ ನಡೆಯಿತು. ಮಾನ್ಯ ವಿರೋಧ ಪಕ್ಷದ ನಾಯಕರು, ಅಧ್ಯಕ್ಷರು ಆ ರೀತಿ ಹೇಳಿದರೆಂದು ಹೇಳಿದರೂ ಇಲ್ಲವೆಂದು ಹೇಳುತ್ತೀರಿ. The Chair casting aspersions on the Opposition Leader has gone on record. If the Chair were to say that he has not said like that, I am prepared to withdraw what I have said. But I heard the Chair saying like that. Therefore, we want that it should be expunged from the record.

---

* * * * Matter not recorded as ordered by the Chair.

ಶ್ರೀ ಸಿ. ಎಂ. ಇಬ್ರಾಹಿಂ.—ಮೊನ್ನೆ ನಾನು ಮಾತನಾಡುವಾಗಲೂ ಅದೇ ಉತ್ತರ ಅಧ್ಯಕ್ಷರಿಂದ ಬಂದಿತ್ತು. ನಾವು ಪ್ರಜೆಗಳಿಂದ ಆರಿಸಿಬಂದಿರುವ ಸದಸ್ಯರೇ ವಿನಹ ಶಾಲಾ ವಿದ್ಯಾರ್ಥಿಗಳಲ್ಲ, ಆದರಿಂದ ನಮ್ಮ ಮನಸ್ಸಿಗೆ ಬಹಳ ನೋವಾಗುತ್ತದೆ, ಅಧ್ಯಕ್ಷರಿಗಾಗಲೀ, ಮಂತ್ರಿಗಳಿಗಾಗಲೀ, ಸದಸ್ಯರುಗಳಿಗಾಗಲೀ ಎಲ್ಲರಿಗೂ ಒಂದು ನಿಯಮ ಇದೆ. ಆ ಪ್ರಕಾರ ನಡೆದುಕೊಳ್ಳಬೇಕು. ಅದನ್ನು ಬಿಟ್ಟು ಅವರು ಈ ರೀತಿ ಎಲ್ಲ ವರ್ತಿಸಿದರೆ ನಮಗೆ ಬಹಳ ಕಷ್ಟವಾಗುತ್ತದೆ. ಇದಕ್ಕೆಲ್ಲ ಒಂದು ನಿಯಮಾವಳಿಯನ್ನು ಹಾಕಬೇಕು. ಸಭೆಯು ನಿಯಮಾವಳಿಯನ್ನು ಅನುಸರಿಸಬೇಕಾಗುತ್ತದೆ. ಶಾಲಾ ಮಕ್ಕಳೊಡನೆ ವರ್ತಿಸುವಂತೆ ವರ್ತಿಸಿದರೆ ನಾವು ಆರಿಸಿ ಬಂದಿರುವ ಸದಸ್ಯರೇ ಅಥವಾ ನಾಮಿನೇಟೆಡ್ ಸದಸ್ಯರೇ ಎಂಬುದು ಅರ್ಥವಾಗುತ್ತಿಲ್ಲ. ಇದರಿಂದ ನಮ್ಮ ಮನಸ್ಸಿಗೆ ತುಂಬ ನೋವಾಗಂತ ದೆ.

MR. CHAIRMAN.—I have already said that I never meant anything to the Leader of the Opposition. I only said that let not the time of the House be wasted. I have already stated that I have not cast any aspersion on the Leader of the Opposition. and neither I have any thing of the type from this Chair. I request the hon. the Leader of the Opposition to resume his speech.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಹೇಳಿದ ಮೇಲೆ ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಇನ್ನು ಮುಂದೆ ಯಾವುದೇ ಸದಸ್ಯರಿಗೂ ಆ ರೀತಿ ಆಗಬಾರದೆಂಬುದೇ ನನ್ನ ಉದ್ದೇಶ. ಇದರ ಮಹತ್ವ ಎಷ್ಟಿದೆ ಎಂಬುವರ ಬಗ್ಗೆ ಹೇಳುತ್ತಿದ್ದೆ, ನಾನು ಇದನ್ನು ಹೇಳುವಾಗ ಲಘು ವಿಚಾರವೆಂದು ಹೇಳುತ್ತಿಲ್ಲ. ಮಂತ್ರಿ ಮಂಡಲದಲ್ಲಿರತಕ್ಕ ಮಂತ್ರಿಗಳಿಗೆ ಸಂಪೂರ್ಣ ಸ್ವಾತಂತ್ರ ಇರಬೇಕೆಂಬುದು ನನ್ನ ಅಭಿಪ್ರಾಯ. ಪದೇ ಪದೇ ಅವರು ಮುಖ್ಯಮಂತ್ರಿಗಳ ಮುಖ ನೋಡಿ ಅವರ ಆದೇಶದಂತೆ ನಡೆಯುತಕ್ಕ ವ್ಯವಸೆ ಈ ಪ್ರಜಾಪ್ರಭುತ್ವದಲ್ಲಿ ಇರಕೂಡದು. ಹುಕುಂ ತೆಗೆದುಕೊಂಡು ಮುಂದೆ ಹೋಗಬೇಕು. ಎಲ್ಲ ಜವಾಬ್ದಾರಿ ಕ್ಯಾಬಿನೆಟ್ಟಿಗೆ ಇರುತ್ತದೆ. ಮುಖ್ಯ ಮಂತ್ರಿಗಳಿಗೆ ಏನು ಇರಬೇಕೋ ಅದು ಇರಬೇಕು, ಆದರೆ ಮಂತ್ರಿಗಳಿಗೂ ಕೂಡ ಇರಬೇಕಾದ ಜವಾಬ್ದಾರಿ ಇರಬೇಕು, ಆ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಈ ಬಗ್ಗೆ ನನಗೆ ಅನೇಕ ಕಡೆಯಿಂದ ಗೊತ್ತಾಗಿದೆ, ಆದರೂ ಕೂಡ ಮಂತ್ರಿಗಳು ಬಹಿರಂಗವಾಗಿ ಒಪ್ಪಿಕೊಳ್ಳುವುದಿಲ್ಲ. ಇವತ್ತು ಆರೋಗ್ಯ ಮಂತ್ರಿಗಳು ಈ ತರಹದ ಒಂದು ಟ್ರಾನ್ಸ್‌ಫರ್ ಮಾಡಬೇಕಾದರೆ ಮುಖ್ಯ ಮಂತ್ರಿಗಳ ಇನಿಷಿಯಲ್ ಪಡೆಯಬೇಕು. ಆದ್ದರಿಂದ ಈ ರೀತಿ ಆಗುವುದು ನಿಲ್ಲಬೇಕೆಂದು ಹೇಳುತ್ತೇನೆ. ಯಾವುದೇ ಪೋರ್ಟ್‌ಫೋಲಿಯೋವಲ್ಲಾಗಲೀ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳೇ ಸ್ವತಂತ್ರವಾಗಿ ಅಧಿಕಾರವನ್ನು ಚಲಾಯಿಸುವ ವ್ಯವಸ್ಥೆ ಆಗಬೇಕು.

ಶ್ರೀ ಬಿ. ಭಾಸ್ಕರಶೆಟ್ಟಿ.—ಮಾನ್ಯ ವಿರೋಧ ಪಕ್ಷದ ನಾಯಕರು ಏತಕ್ಕಾಗಿ ವಿಚಾರವನ್ನು ಎತ್ತಿಕೊಂಡಿದ್ದಾರೆಂಬುದು ಅರ್ಥವಾಗುತ್ತಿಲ್ಲ. ಯಾರಾದರೂ ಮಂತ್ರಿಗಳು ದೂರು ಕೊಟ್ಟಿದ್ದಾರೆಯೆ?

(ಈ ಸಂದರ್ಭದಲ್ಲಿ ಉಭಯ ಕಡೆಯ ೪–೫ ಮಂದಿ ಮಾನ್ಯ ಸದಸ್ಯರುಗಳು ಒಟ್ಟಿಗೆ ಎದ್ದು ನಿಂತ ಮಾತನಾಡತೊಡಗಿದರು)

(MR. SPEAKER in the Chair)

SRI C. M. ARUMUGHAM.—After all the hon. the Leader of the Opposition was making a suggestion that the orders on the file should be made by the concerned Minister himself. If there are any objectionable remarks the hon. members may raise an objection. It was rightly pointed out by our Chairman that we should not waste the precious time of the House. I have been seeing many hon. members rising on Points of Orders. Can we not adjust ourselves at least on the general discussion on the Budget? I would like to inform the Chief Whip Sri Bhaskara Shetty, through you, Sir, that anything can

be discussed under the sun during general discussion on the Budget. The Treasury Benches should tolerate it because they are the Government. I know Sri Bhaskara Shetty is a senior member and he is not aspiring to be a Minister. He should have been a Minister instead of the Chief Whip. Let him have some patience. He will have a chance of getting into the Cabinet.

SRI A. LAKSHMISAGAR.—Sir, I just referred to the scope of discussion when the Budget is being discussed on the floor of the House from the book "Practice and Procedure of Parliament by Kaul and Shakdar" and I will read only line from the Book. It says:

> "The debate on an Appropriation Bill is restricted to matters of public importance and the administrative policy implied therein. But when the general discussion takes place on the Budget, everything conceivable, a subject which has a bearing on the administration can be discussed and can be a matter of discussion on the floor of the House."

There cannot be any restriction or limitation on the scope of the discussion that is to take place. This is a general discussion. Every conceivable matter concerning or touching with the administration of the State can be a matter upon which the Member who happens to speak can speak. I do not understand why my hon. friend Sri Bhaskara Shetty, forgetting his duties as Chief Whip, should interfere in a matter in which the Hon'ble Minister directly responsible to answer to the points raised by any Member while eplying to the Debate on general discussion. This is my submission. Let us have an understanding on this matter and let us have a smooth sailing with the discussion.

MR. SPEAKER.—The hon. the Leader of the Opposition may please continue his speech.

ಶ್ರೀ ಎಸ್.ಆರ್.ಬೊಮ್ಮಾಯಿ.-ನಾನು ಏನು ಹೇಳುತ್ತೇನೆ ಎಂದರೆ ಮಂತ್ರಿಗಳಿಗೆ ತಮ್ಮ ಖಾತೆಯ ಮೇಲೆ ಸಂಪೂರ್ಣವಾದ ಸ್ವಾತಂತ್ರ್ಯ ಇರಬೇಕು. ಹಾಗಿದ್ದರೆ ಅವರವರ ಆಡಳಿತದಲ್ಲಿ ಚುರುಕತನದಿಂದ ಮತ್ತು ಯೋಗ್ಯರೀತಿಯಿಂದ ಕೆಲಸ ಚೆನ್ನಾಗಿ ನಡೆಯುತ್ತದೆ. ಈವೊತ್ತಿನ ನಮ್ಮ ರಾಜ್ಯದಲ್ಲಿ ಆ ರೀತಿ ಇಲ್ಲ. ಮಾನ್ಯ ಭಾಸ್ಕರ ಶೆಟ್ಟಿಯವರು ಕೇಳಿದರು ಏನೆಂದರೆ ಯಾರಾದರೂ ಮಂತ್ರಿಗಳು ಈ ಬಗ್ಗೆ ಏನಾದರೂ ದೂರು ಕೊಟ್ಟಿದ್ದಾರೆಯೇ ಎಂದು. ಸ್ವಾಮಿ, ನಾನು ಹೇಳುತ್ತೇನೆ ಅವರಿಗೆ ದೂರು ಕೊಡುವ ಶಕ್ತಿ ಇಲ್ಲ ಎಂದು. ಅವರು ಈ ವಿಚಾರದಲ್ಲಿ ದೂರು ಕೊಟ್ಟೂ ಇಲ್ಲ. ಕೊಡುವುದೂ ಇಲ್ಲ, ಏತಕ್ಕೆಂದರೆ ದೂರು ಕೊಟ್ಟರೆ ನಡೆಯುವುದೂ ಇಲ್ಲ ಎನ್ನುವುದು ಅವರಿಗೆ ಸ್ಪಷ್ಟವಾಗಿ ಗೊತ್ತಿದೆ. ಈವೊತ್ತಿನ ದಿವಸ ನಮ್ಮ ರಾಜ್ಯದಲ್ಲಿ ಒಬ್ಬ ಸರ್ವಾಧಿಕಾರಿಯಿಂದ ಆಡಳಿತ ನಡೆಯುತ್ತಾ ಇದೆ, ಎಂದು ನಾನು ಒತ್ತೊತ್ತಿ ಹೇಳಬೇಕಾಗಿದೆ. ಅನೇಕ ಗೌರ್ನ್ಮೆಂಟ್ ಆರ್ಡರ್‌ಗಳನ್ನು ಮಾಡಬೇಕಾದರೆ ಮುಖ್ಯ ಮಂತ್ರಿಗಳ ಇನ್‌ಷಿಯಲ್ಸ್ ಆಗಬೇಕು. ಈ ಸಂದರ್ಭದಲ್ಲಿ ನಾನು ಇನ್ನೊಂದು ವಿಚಾರವನ್ನು ಹೇಳುತ್ತೇನೆ, ಮಾನ್ಯ ಬಸವಲಿಂಗಪ್ಪನವರು ತಪ್ಪು ತಿಳಿದುಕೊಳ್ಳಬಾರದು. ಅದೇನೆಂದರೆ ಲ್ಯಾಂಡ್ ಟ್ರಿಬ್ಯೂನಲ್ಲಿಗೆ ಸದಸ್ಯರುಗಳನ್ನು ಅಪಾಯಿಂಟ್ ಮಾಡತಕ್ಕಂಥ ಅಧಿಕಾರ ಕಂದಾಯ ಮಂತ್ರಿಗಳಿಗೆ ಇರಬೇಕು.

ಈವೊತ್ತಿನ ದಿವಸ ಹಾಗೆ ಇಲ್ಲ. ಇದಕ್ಕೆ ಮುಖ್ಯಮಂತ್ರಿಗಳ ಇನ್‌ಷಿಯಲ್ಸ್ ಆದರೇನೇ ಅದು ಪಬ್ಲಿಕೇಷನ್ ಆಗಬೇಕು ಎಂದರೆ ಇದು ನಾಚಿಕೆಗೇಡುತನ. ಒಬ್ಬ ಮಂತ್ರಿಗೆ ತನ್ನ ಖಾತೆ ಬಗ್ಗೆ ಸ್ವಾತಂತ್ರ್ಯ ಇಲ್ಲದೇ ಹೋದರೆ ಇದನ್ನು ನಾವೇನು ತಿಳಿಯಬೇಕು. ಈ ರೀತಿಯಾಗಿ ಅನೇಕ ಗೌರ್ನಮೆಂಟ್ ಆರ್ಡರ್‌ಗಳು ಆಗಿವೆ. ಮುಖ್ಯಮಂತ್ರಿಗಳ ಕೃಪಾದೃಷ್ಟಿ ಇಲ್ಲದೆ ಯಾವ ಗೌರ್ನಮೆಂಟ್ ಆರ್ಡರ್‌ಗಳೂ ಆಗುವ ಹಾಗಿಲ್ಲ. ಈ ಒಂದು ವ್ಯವಸ್ಥೆ ಈ ರಾಜ್ಯದಲ್ಲಿ ಹೋಗಬೇಕು. ಹಾಗಾದರೆ ಆಡಳಿತ ಚುರುಕಾಗಿ ನಡೆಯುತ್ತದೆ. ಈ ಅಧಿಕಾರ ವಿಕೇಂದ್ರೀಕರಣದಬಗ್ಗೆ ನಾನು ತಮಗೆ ಒಂದು ಸ್ಪಷ್ಟ ಚಿತ್ರೀಕರಣವನ್ನು ಕೊಡುತ್ತೇನೆ. ಅದು ಮುಖ್ಯಮಂತ್ರಿಗಳ ಪೋರ್ಟ್‌ಫೋಲಿಯೋ ಬಗ್ಗೆ. ಇದನ್ನು ಓದಬಾರದು ಅಂತ ಇದೆ, ಆದರೂ ಅದನ್ನು ಓದುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಇಟ್ಟುಕೊಂಡಿರುವ ಖಾತೆಗಳು ಈ ರೀತಿ ಇವೆ.

> "SRI D. DEVARAJ URS:—Department of Personnel and Administrative Reforms and Cabinet Affairs, Home Department, Planning Department, Major and Minor Irrigation, power of posting from the PWD and Elec. Fisheries from Labour Dept, BDA from Housing and Urban Urban Department. Mines & Geology Sericulture from C.I. Horticulture from Agriculture and Animal Husbandary Department. Muzrai from Revenue Department."

ನಾನು ಈ ಮಾತನ್ನು ಒತ್ತೊತ್ತಿ ಹೇಳಬೇಕಾಗಿದೆ. ಏತಕ್ಕೆಂದರೆ ಪ್ರತಿಯೊಂದು ಡಿಪಾರ್ಟ್‌ಮೆಂಟಿನಲ್ಲೂ ಕೂಡ ಏನು ಮಹತ್ವದ ವಿಚಾರಗಳು ಇವೆ ಅವುಗಳು ಮುಖ್ಯಮಂತ್ರಿಗಳ ಹತೋಟಿಯಲ್ಲಿ ಇವೆ, ಬೇರೆ ಖಾತೆಗಳನ್ನು ಬೇರೆ ಬೇರೆಯವರಿಗೆ ಕೊಟ್ಟಿದ್ದಾರೆ. ಈಗ ಮಾನ್ಯ ಬಸವಲಿಂಗಪ್ಪನವರನ್ನು ತೆಗೆದುಕೊಂಡರೆ ಅವರಿಗೆ ಕಂದಾಯ ಇಲಾಖೆಯನ್ನು ಕೊಟ್ಟಿದ್ದಾರೆ, ಹಾಗೆಯೇ ಮಾನ್ಯ ಪ್ರಭಾಕರ್‌ರವರಿಗೆ ಪಂಚಾಯತ್ ರಾಜ್ ಇಲಾಖೆಯನ್ನು ಕೊಟ್ಟಿದ್ದಾರೆ. ಹಾಗೆಯೇ ಮಾನ್ಯ ರಂಗನಾಥರವರನ್ನು ತೆಗೆದುಕೊಂಡರೆ ಅವರಿಗೆ ಅಗ್ರಿಕಲ್ಚರ್ ಇಲಾಖೆಯನ್ನು ಕೊಟ್ಟಿದ್ದಾರೆ. ರಾಜ್ಯದಲ್ಲಿ ಅಭಿವೃದ್ಧಿಯಾಗತಕ್ಕಂಥಾ ಖಾತೆಗಳು ಏನು ಇವೆ ಮತ್ತು ಬಡವರಿಗೆ ಮತ್ತು ಹಿಂದುಳಿದವರಿಗೆ ಉದ್ಯೋಗವನ್ನು ಒದಗಿಸತಕ್ಕಂಥಾ ಘಟಕಗಳು ಏನು ಇವೆ, ಹೆಚ್ಚು ಹೆಚ್ಚು ಹಣವನ್ನು ಖರ್ಚು ಮಾಡತಕ್ಕಂಥಾ ಮಹತ್ವದ ಖಾತೆಗಳು ಏನು ಇವೆ ಅಂಥಾದ್ದನ್ನು ಹರಿಜನರೊಬ್ಬರಿಗೆ ಕೊಟ್ಟಿದ್ದರೆ ಆಗುತ್ತಿರಲಿಲ್ಲವೇ? ಅವರಿಗೆ ಇದನ್ನು ಚೆನ್ನಾಗಿ ನಡೆಸಿಕೊಂಡು ಹೋಗುವುದಕ್ಕೆ ಸಾಮರ್ಥ್ಯ ಇದೆ. ಅವರಲ್ಲಿ ಸಾಕಷ್ಟು ಬುದ್ಧಿ ಇದೆ, ಅವರಿಗೆ ಸಾಕಷ್ಟು ಅನುಭವ ಇದೆ, ಅವರು ಇದನ್ನು ಚೆನ್ನಾಗಿ ಅಭಿವೃದ್ಧಿ ಮಾಡಬಲ್ಲರು, ಅವರಿಗೆ ಇಂಥಾ ಅಭಿವೃದ್ಧಿ ಖಾತೆಗಳನ್ನು ಕೊಡುವುದಕ್ಕೆ ತಯಾರಾಗಿಲ್ಲ. ಮೇಜರ್ ಇರ್ರಿಗೇಷನ್ ಮತ್ತು ಮೈನರ್ ಇರ್ರಿಗೇಷನ್ ಬಹಳ ಮುಖ್ಯವಾದಂಥಾ ಖಾತೆ. ಅದನ್ನು ಬೇರೆ ಮಂತ್ರಿಗಳಿಗೆ ಏತಕ್ಕೆ ಕೊಡಬಾರದು? ಮಾನ್ಯ ಮುಖ್ಯಮಂತ್ರಿಗಳ ಪೋರ್ಟ್‌ಫೋಲಿಯೋ ನೋಡಿದರೆ ರಾಜ್ಯದ ಬಡ್ಜೆಟ್ಟಿನ ಮುಕ್ಕಾಲು ಭಾಗ ಹಣವನ್ನು ಇವರೇ ಖರ್ಚು ಮಾಡುವ ಹಾಗೆ ಕಾಣುತ್ತಾ ಇದೆ. ಅಷ್ಟು ಅಧಿಕಾರ ಇವರ ಒಂದು ಪೋರ್ಟ್‌ಫೋಲಿಯೋದಲ್ಲಿ ಇದೆ. ತಮಗೆ ಹೇಳಬೇಕಾದರೆ ಈ ಮೇಜರ್ ಇರ್ರಿಗೇಷನ್‌ಗೆ ಎಷ್ಟು ಖರ್ಚು ಮಾಡುತ್ತಿದ್ದಾರೆ ಎಂದರೆ ಬಹಳಷ್ಟು ಖರ್ಚು ಮಾಡುವ ಅಧಿಕಾರ ಇವರಿಗೆ ಇದೆ.

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಮಾನ್ಯ ಶ್ರೀ ಬೊಮ್ಮಾಯಿಯವರು ಮಾನ್ಯ ಮುಖ್ಯಮಂತ್ರಿಗಳು ಬಹಳ ಮಹತ್ವದ ಖಾತೆಗಳನ್ನು ಇಟ್ಟುಕೊಂಡಿದ್ದಾರೆ ಮತ್ತು ಸಂಪೂರ್ಣವಾದ ಅಧಿಕಾರ ಹೊಂದಿದ್ದಾರೆ ಅಂತ ಹೇಳಿದರು. ಅದಕ್ಕೆ ನಾವು ಕೇಳುವುದು ಏನೆಂದರೆ ತಮ್ಮ ಒಂದು ಅಧಿಕಾರವನ್ನು ಮಾನ್ಯ ರಾಮಕೃಷ್ಣ ಅವರಿಗೆ ಏತಕ್ಕೆ ಕೊಡಲಿಲ್ಲ ಎಂದು.

ಶ್ರೀ ಎಸ್.ಆರ್. ಬೊಮ್ಮಾಯಿ.—ಪ್ರಜಾಪ್ರಭುತ್ವದ ರೀತಿಯಲ್ಲಿ ಯಾರನ್ನು ಆರಿಸುತ್ತಾರೆ ಅವರು ಆ ಅಧಿಕಾರವನ್ನು ಹೊಂದುತ್ತಾರೆ. ಹಾಗಾದರೆ ಮುಖ್ಯಮಂತ್ರಿಗಳನ್ನಾಗಿ ಹರಿಜನರೊಬ್ಬರನ್ನು ಏತಕ್ಕೆ ಆರಿಸಲಿಲ್ಲ ಎಂದು. ನಾನು ಸಹ ಕೇಳಬೇಕಾಗಿದೆ. ಪ್ರಜಾಪ್ರಭುತ್ವರೀತಿಯಲ್ಲಿ ಶ್ರೀಮಾನ್ ದೇವರಾಜ ಅರಸ್‌ರವರನ್ನು ಯಾವರೀತಿಯಾಗಿ ಆರಿಸಿದ್ದೀರೋ ಆರೀತಿಯಲ್ಲಿ ನಮ್ಮನ್ನೂ ಆರಿಸಿದ್ದಾರೆ. ನನ್ನ ಪ್ರಶ್ನೆ ಏನೆಂದರೆ ಮಾನ್ಯ ಮುಖ್ಯಮಂತ್ರಿಗಳು ಇಂತಹ ಮಹತ್ವದ ಖಾತೆಗಳನ್ನು ಬೇರೆಯವರಿಗೆ ಕೊಡದೆ ಅವರೇ ಇಟ್ಟುಕೊಂಡಿದ್ದಾರಲ್ಲಾ ಅದಕ್ಕೆ ತಮ್ಮಿಂದ ಉತ್ತರಬೇಕು ಎಂದರೆ ಅದಕ್ಕೆ ಉತ್ತ

ಇಲ್ಲ. ಹರಿಜನರಿಗೆ ಈ ರಾಜ್ಯದಲ್ಲಿ ಒಂದು ಮಹತ್ವದ ಸ್ಥಾನ ಇಲ್ಲ. ಹರಿಜನರಿಗೆ ಸಹಾಯ ಮಾಡುತ್ತೇವೆ ಎಂದು ಹೇಳಿ, ಹೆಚ್ಚು ಹಣ ಅಭಿವೃದ್ಧಿ ಖಾತೆಗೆ ಹೋಗುವಂಥಾ ಹಣದ ಖಾತೆಗಳನ್ನು ಬೇರೆಯವರಿಗೆ ಏತಕ್ಕೆ ಕೊಟ್ಟಿಲ್ಲಾ ಎಂದು ಕೇಳಿದರೆ ಅದಕ್ಕೆ ಉತ್ತರ ಇಲ್ಲ. ಅಥವಾ ಅವರಲ್ಲಿ ಮುಖ್ಯಮಂತ್ರಿಗಳಿಗೆ ವಿಶ್ವಾಸ ಇಲ್ಲವೇ ? ಮಹಾರಾಷ್ಟ್ರದಲ್ಲಿ ಶ್ರೀಮಾನ್ ತೀರ್ಪುಡೆಯವರು ಕಾಂಗ್ರೆಸ್ (ಐ) ಅಧ್ಯಕ್ಷರಾಗಿದ್ದಾರೆ. ಹರಿಜನರೊಬ್ಬರನ್ನು ೪ ದಿವಸದಲ್ಲಿ ಮನಗೆ ಕಳುಹಿಸಿದ್ದಾರೆ. ಅದೇ ರೀತಿ ಈ ರಾಜ್ಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಪಕ್ಷದ ಅಧ್ಯಕ್ಷ ಸ್ಥಾನವನ್ನು ಬೇರೆಯವರಿಗೆ ಬಿಟ್ಟುಕೊಡುವುದಿಲ್ಲ.ಸರ್ವಾಧಿಕಾರವನ್ನೂ ಕೂಡ ಅವರೇ ಹೊಂದಿರುತ್ತಾರೆ. ಅವರು ಹರಿಜನರೊಬ್ಬರನ್ನು ಅಧ್ಯಕ್ಷ ಸ್ಥಾನಕ್ಕೆ ಬಿಟ್ಟುಕೊಟ್ಟಿಲ್ಲ.

ಒಬ್ಬ ಸದಸ್ಯರು: ರಾಜನಾರಾಯಣ್ ಏನು ಮಾಡುತ್ತಾ ಇದ್ದಾರೆ ಹೇಳಿ ?

ಶ್ರೀ ಸಿ. ಎಂ. ಇಬ್ರಾಹಿಂ.—Point of order ಅಧ್ಯಕ್ಷರೇ, ಕೇಂದ್ರಸರ್ಕಾರದ ಮಂತ್ರಿಗಳೊಬ್ಬರ ಬಗ್ಗೆ ಅವರು ಈಗ ಏನು ಒಂದು ಮಾತು ಹೇಳಿದ್ದಾರೆ ಅದು ರಿಕಾರ್ಡ್‌ನಲ್ಲಿ ಇದೆ, ಅದನ್ನು ತೆಗೆಸಬೇಕು, ಆ ಸದಸ್ಯರು ಇದಕ್ಕೆ ಅಪಾಲಜಿ ಮಾಡಿಕೊಳ್ಳಬೇಕು ಎಂದು ಹೇಳುತ್ತೇನೆ.

MR. SPEAKER.—I will look into it.

ಶ್ರೀ ಎಸ್. ಆರ್. ಬೊಮ್ಮಾಯಿ,—ಈವೊತ್ತು ಪ್ರಜಾಪ್ರಭುತ್ವದಲ್ಲಿ ಅವರ ಒಂದು ತತ್ವದ ಪ್ರಣಾಳಿಕೆಯನ್ನು ನೋಡಿದರೆ ಗೊತ್ತಾಗುತ್ತದೆ. ಅದನ್ನು ಕೂಡಲೇ ತೆಗೆದು ಹಾಕಬೇಕು. ಮಾನ್ಯ ಮುಖ್ಯಮಂತ್ರಿಗಳು ಈ ಮಂತ್ರಿಗಳ ಮೇಲೆ ಏನು ಒಂದು ನಿರ್ಬಂಧಗಳು ಹಾಕಿದ್ದಾರೆ, ಈ ಬಗ್ಗೆ ಏನು ಗೌರ್ನಮೆಂಟ್ ಆರ್ಡರ್‌ಗಳು ಆಗಿವೆ ಅದನ್ನು ಕೂಡಲೇ ತೆಗೆದು ಹಾಕಬೇಕು. ಪ್ರತಿಯೊಬ್ಬ ಮಂತ್ರಿಗೂ ಸ್ವತಂತ್ರ ರೀತಿಯಲ್ಲಿ ತನ್ನ ಕಾರ್ಯ ಮಾಡುವುದಕ್ಕೆ ಅವಕಾಶ ಕೊಡಬೇಕು. ನಾನು ಈ ಮಾತನ್ನು ಹೇಳುವುದರಲ್ಲಿ ಏನಾದರೂ ತಪ್ಪು ಉಂಟೇ? ಆ ಕಡೆಯ ಸದಸ್ಯರನ್ನು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಮಂತ್ರಿಗಳ ಕೈ ಬಲಪಡಿಸುವುದಕ್ಕೆ ಇಂಥ ಒಂದು ಅನುಕೂಲತೆಗಳನ್ನು ಒದಗಿಸಿಕೊಡುವುದಕ್ಕೆ ಅವಕಾಶ ಕೊಡಿ ಎಂದು ಹೇಳುವುದರಲ್ಲಿ ಏನಾದರೂ ತಪ್ಪು ಉಂಟೇ?

ಇನ್ನೊಂದು ವಿಚಾರ ಏನೆಂದರೆ ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಸಾಮರ್ಥ್ಯವನ್ನೂ ಹೊಂದಿದ್ದಾರೆ ಅನ್ನುವ ಪ್ರಶ್ನೆ ಅಲ್ಲ, ಅವರು ತುಂಬಾ ಬುದ್ಧಿವಂತರಾಗಿದ್ದಾರೆ, ಅಲ್ಲದೆ ತುಂಬಾ ಸಾಮರ್ಥ್ಯ ಉಳ್ಳವರೂ ಸಹ ಆಗಿದ್ದಾರೆ, ಅಲ್ಲದೆ ಅವರು ಅಖಿಲ ಭಾರತ ಮಟ್ಟದಲ್ಲಿ ನಾಯಕರೂ ಸಹ ಆಗಿದ್ದಾರೆ. ಆದರೆ ಅವರು ಇಂಟರ್‌ನ್ಯಾಷನಲ್ ಲೀಡರ್‌ಷಿಪ್ ತೆಗೆದುಕೊಳ್ಳುವುದಕ್ಕೆ ಏನು ಪ್ರಯತ್ನ ಮಾಡುತ್ತಿದ್ದಾರೆ ಅದನ್ನು ತೆಗೆದುಕೊಳ್ಳಲಿ ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಆದರೆ ಅವರು ಮುಖ್ಯಮಂತ್ರಿಗಳಾದ ಮೇಲೆ ಹೋದವರ್ಷ ಮತ್ತು ಈ ವರ್ಷ ಈ ರಾಜ್ಯದಲ್ಲಿ ಸರಿಯಾಗಿ ಇದ್ದುದ್ದೇ ಇಲ್ಲ, ಅವರು ಈ ರಾಜ್ಯದಲ್ಲಿ ಇದ್ದುದ್ದೇ ಕಡಿಮೆ, ಈವೊತ್ತು ರಾಜ್ಯದಲ್ಲಿ ಮುಖ್ಯಮಂತ್ರಿಗಳಾದವರು ರಾಜ್ಯದ ಹಿತದೃಷ್ಟಿಯಿಂದ ಮಂತ್ರಿಗಳೊಂದಿಗೆ ಸದಸ್ಯರೊಂದಿಗೆ ಮತ್ತು ಸಾರ್ವಜನಿಕರೊಂದಿಗೆ ದೇಶದ ಸಮಸ್ಯೆಗಳನ್ನು ವಿಚಾರ ವಿನಿಮಯ ಮಾಡಲಿಕ್ಕೆ ಮತ್ತು ಅದನ್ನು ಕಾರ್ಯ ರೂಪಕ್ಕೆ ತರಲಿಕ್ಕೆ ಹೆಚ್ಚು ಸಮಯ ರಾಜ್ಯದಲ್ಲಿ ಕಳೆಯಬೇಕು, ಈ ಬಗ್ಗೆ ಹೇಳುವುದಾದರೆ ಹೋದವರ್ಷ ನೋಡಿದರೆ ಇಡೀ ವರ್ಷವೇ ಕಾಂಗ್ರೆಸ್ಸನ್ನು ಒಡೆಯುವುದಕ್ಕೆ ಡೆಲ್ಲಿ, ಮದ್ರಾಸ್ ಬಾಂಬೆ, ಕಲ್ಕತ್ತಾ ಮುಂತಾದ ಕಡೆ ಹೋಗಿ ಹೆಚ್ಚು ಸಮಯ ಕಳೆದರು, ಮತ್ತು ಈ ವರ್ಷ ಮುಖ್ಯಮಂತ್ರಿಗಳಾದ ಮೇಲೆ ಕಾಂಗ್ರೆಸ್ಸನ್ನು ಒಗ್ಗೂಡಿಸುವುದಕ್ಕೋಸ್ಕರ ಡೆಲ್ಲಿ, ಮದ್ರಾಸ್, ಹೈದ್ರಾಬಾದ್ ಮುಂತಾದ ಕಡೆ ಹೋಗುತ್ತಾ ಇದ್ದಾರೆ. ಈ ಎರಡು ತಿಂಗಳ ಬಜೆಟ್ ಆದಮೇಲೆ ಅವರು ಎಷ್ಟು ದಿವಸ ಬೆಂಗಳೂರಿನಲ್ಲಿ ಇದ್ದಾರೆ ಅನ್ನುವುದನ್ನು ತಿಳಿಯಬೇಕು. ಅದು ಈಗ ಅವಶ್ಯಕ ಇದೆ. ಈವೊತ್ತು ಮುಖ್ಯ ಮಂತ್ರಿಗಳಿಗೆ ನಮ್ಮ ರಾಜ್ಯದ ಬಡ ಬೋರೆಗೌಡನ ಹಣದಿಂದ ಎಷ್ಟು ಖರ್ಚಾಗುತ್ತಿದೆ ಅನ್ನುವುದನ್ನು ತಿಳಿಯಬೇಕು. ಅವರು ತಮ್ಮ ಸ್ವಂತ ಹಣದಿಂದ ಹೊರಗಡೆ ಹೋಗುತ್ತಾ ಇಲ್ಲ. ಅವರು ಈ ಎರಡು ತಿಂಗಳ ಬಜೆಟ್ ಆದಮೇಲೆ ಎಷ್ಟು ಸಲ ಬಾಂಬೆಗೆ ಹೋಗಿದ್ದಾರೆ, ಎಷ್ಟು ಸಲ ಹೈದ್ರಾಬಾದ್‌ಗೆಹೋಗಿದ್ದಾರೆ, ಎಷ್ಟು ಸಲ ಬೇರೆ ಬೇರೆ ಕಡೆಗಳಿಗೆ ಹೋಗಿದ್ದಾರೆ ಅನ್ನುವುದನ್ನು ನೋಡಿದರೆ ಹೆಚ್ಚು ಸಮಯವನ್ನು ರಾಜ್ಯದ ಹೊರಗಡೆಯೇ ಕಳೆದಿದ್ದಾರೆ. ಅವರು ರಾಜ್ಯ ಸರ್ಕಾರದ ಒಂದು ಕಾರ್ಯಕಲಾಪಗಳಿಗೆ ಸರ್ಕಾರದ ಕೆಲಸಕ್ಕೆ ಹೊರಗಡೆ ಹೋಗಿದ್ದಾರೆಯೋ ಎಂದು ನೋಡಿದರೆ ಅದು ಇಲ್ಲ. ಈವೊತ್ತು ಮುಖ್ಯಮಂತ್ರಿಗಳು

ಹೊರಗಡೆ ಪ್ರವಾಸ ಹೋಗುತ್ತಾ ಇರುವುದು ಏತಕ್ಕೋಂದರೆ ಅವರ ಒಂದು ಪಕ್ಷದ ಕಾರ್ಯಕ್ಕಾಗಿ, ಮತ್ತು ಅವರ ಒಂದು ರಾಜಕೀಯಕ್ಕಾಗಿ ಹೆಚ್ಚು ಸಮಯವನ್ನು ಕಳೆಯುತ್ತಿದ್ದಾರೆ. ರಾಜ್ಯದ ಸರ್ಕಾರದ ಒಂದು ಹೆಚ್ಚು ಸಮಯವನ್ನು ಈ ರೀತಿ ಏತಕ್ಕೆ ಕಳೆಯುತ್ತಿದ್ದಾರೆ ಅನ್ನುವುದನ್ನು ನಾನು ಕೇಳುತ್ತೇನೆ.

3.00 P. M.

ಏನೂ ಮಾಡುವುದಕ್ಕೂ ಅವರಿಗೆ ಹಕ್ಕಿದೆ. ಹಾಗೆ ಮಾಡುವುದು ಇದ್ದರೆ ಒಂದು ಕೆಲಸ ಮಾಡಲಿ, ಪಕ್ಷದ ಸಂಪೂರ್ಣ ನಾಯಕತ್ವವನ್ನು ಅವರು ವಹಿಸಿಕೊಳ್ಳಲಿ ಇಲ್ಲದೆ ಹೋದರೆ ರಾಜ್ಯದ ಮುಖ್ಯ ಮಂತ್ರಿಗಳಾಗಿ ರಾಜ್ಯದಲ್ಲಿದ್ದುಕೊಂಡು ಸರಿಯಾದ ರೀತಿಯಲ್ಲಿ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗುವಂತೆ ಮಾಡಲಿ. ನನ್ನ ಇನ್ನೊಂದು ಸಲಹೆ ಏನೆಂದರೆ, ಈಗಿರುವ ರೀತಿಯಲ್ಲಿ ಸಂಪೂರ್ಣ ಅಧಿಕಾರವನ್ನು ಅವರು ಇಟ್ಟುಕೊಳ್ಳದೆ, ಅವರಲ್ಲಿರುವ ಖಾತೆಗಳನ್ನು ಬೇರೆ ಬೇರೆ ಸಮರ್ಥ ಯುವಕರಿಗೆ ಒಪ್ಪಿಸಿ ತಾವು ಬೇಕಾದರೆ ಒಂದು ಪೋರ್ಟ್‌ಫೋಲೀಯೋ ಇಟ್ಟುಕೊಳ್ಳಲಿ, ಈ ರೀತಿಯಾಗಿ ಮಾಡಿಕೊಂಡು, ತಾವೂ ಎಲ್ಲರ ಕೆಲಸವನ್ನು ಸೂಪರವೈಸ್ ಮಾಡಿಕೊಂಡು ಹೋಗಲಿ ನಾವು ಬೇಡ ಎಂದು ಹೇಳುವುದಿಲ್ಲ. ಇಲ್ಲದೇ ಹೋದರೆ ಅನೇಕ ಸಂದರ್ಭಗಳಲ್ಲಿ ಮುಖ್ಯವಾಗಿ ನಿರ್ಣಯಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಇದಕ್ಕೆ ಒಂದು ಉದಾಹರಣೆಯನ್ನು ಕೊಡಬೇಕು ಎಂದರೆ, ಮಾನ್ಯ ಕಂದಾಯ ಸಚಿವರು ಮೂರು ದಿವಸಗಳಲ್ಲಿ ಟ್ರಿಬ್ಯುನಲ್‌ಗೆ ಸದಸ್ಯರನ್ನು ನೇಮಿಸುತ್ತೇವೆಂದ ಹೇಳಿದ್ದರು. ಇದಕ್ಕೆ ವಿರೋಧ ಪಕ್ಷದವರೊಂದಿಗೂ ಸಮಾಲೋಚನೆ ಮಾಡುತ್ತೇನೆಂದು ಹೇಳಿದ್ದರು. ಇದರ ಬಗ್ಗೆ ನನಗೆ ಪತ್ರವನ್ನೂ ಸಹ ಬರೆದರು. ನಾನು ಹತ್ತು ದಿವಸದಲ್ಲಿ ನಮ್ಮ ಕಡೆಯಿಂದ ಒಂದು ಲಿಸ್ಟನ್ನು ಕೊಟ್ಟಿದ್ದೇನೆ. ನಾನು ನಮ್ಮ ಲಿಸ್ಟ ಕೊಟ್ಟು ಒಂದೂವರೆ ತಿಂಗಳಾಯಿತು ಇದುವರೆಗೂ ಟ್ರಿಬ್ಯುನಲ್‌ನಲ್ಲಿ ಸದಸ್ಯರನ್ನು ನೇಮಕ ಮಾಡಲಿಲ್ಲ. ಲ್ಯಾಂಡ್ ರಿಫಾರಮ್ಸ್ ಅತ್ಯಂತ ತ್ವರಿತಗತಿಯಲ್ಲಿ ನಮ್ಮ ರಾಜ್ಯದಲ್ಲಿ ಆಚರಣೆಯಲ್ಲಿ ತರಬೇಕು ಎನ್ನುವುದು ನಮ್ಮ ಉದ್ದೇಶ. ಸದಸ್ಯರನ್ನು ನೇಮಕ ಮಾಡುವುದಕ್ಕೆ ಮೂರು ತಿಂಗಳು ಕಾಲ ಬೇಕೆ?

ಶ್ರೀ ಬಿ. ಬಸವಲಿಂಗಪ್ಪ.—ನಿಮ್ಮನ್ನೆಲ್ಲಾ ಕರೆಯಬೇಕಾಗಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ನಿಮಗೆ ಹೇಳುತ್ತಿಲ್ಲ, ಮುಖ್ಯಮಂತ್ರಿಗಳು ತಮಗೆ ಅವರ ಸಲಹೆಯನ್ನು ಕೊಡಲಿಕ್ಕೆ ಸಿಕ್ಕುತ್ತಿಲ್ಲ. ಅವರು ಸಿಕ್ಕುವುದೇ ಬಹಳ ಕಷ್ಟವಾಗಿದೆ. ಅವರು ಅಂತರ ರಾಷ್ಟ್ರೀಯ ರಾಜಕಾರಣದಲ್ಲಿ ಮುಳುಗಿ ಬಿಟ್ಟಿದ್ದಾರೆ. ಹೀಗಾಗಿ ರಾಜ್ಯದ ಸಮಸ್ಯೆಗಳು ಅವರಿಗೆ ಕಾಣುತ್ತಿಲ್ಲ, ಅನೇಕ ಮಹತ್ವದ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾದರೆ ಅವರ ಹಾಜರಿ ಇಲ್ಲದೆ ನಿಂತು ಹೋಗಿವೆ. ಬಡ್ಜೆಟ್ಟೇನೋ ಪಾಸ್ ಆಗಿದೆ, ಆದರೆ ಅನೇಕ ಕಾರ್ಯಗಳು ನಿಂತು ಹೋಗಿವೆ. ನಿನ್ನೆಯ ದಿವಸ ಮಾನ್ಯ ಮಿತ್ರರಾದ ರಾಜಶೇಖರನ್ ಅವರು, ಮಾನ್ಯ ಮುಖ್ಯಮಂತ್ರಿಗಳು ಅನೇಕ ಕಾರ್ಪೊರೇಷನ್‌ಗಳ ಅಧ್ಯಕ್ಷರಾಗಿದ್ದಾರೆ. ಎಂದು. ಟೆಕ್ನಿಕಲ್ ಸೆಲ್‌ಗಳಲ್ಲಿ, ಮೇಜರ್ ಇರಿಗೇಷನ್ ವಿಚಾರದಲ್ಲಿ, ಪವರ್ ಕಾರ್ಪೊರೇಷನ್‌ನಲ್ಲಿ ಇವರು ಇಲ್ಲದೆ ಹೋದರೆ ಮಹತ್ವದ ನಿರ್ಣಯಗಳನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅನೇಕ ವೇಳೆ ಟೆಂಡರ್‌ಗಳನ್ನು ಫೈನಲೈಸ್ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು ಅಧಿಕಾರಿಗಳ ಕೈಗೆ ಸಿಕ್ಕುತ್ತಿಲ್ಲ. ರಾಜ್ಯದ ಹಿತದೃಷ್ಟಿಯಿಂದ ಅವರು ಹೆಚ್ಚು ಸಮಯವನ್ನು ರಾಜ್ಯದಲ್ಲಿಯೇ ಕಳೆಯಬೇಕು ಎಂದು ನಾನು ಹೇಳುತ್ತೇನೆ. ಅವರಿಗೆ ಇಷ್ಟು ಮಾಡುವುದಕ್ಕೆ ಸಾಧ್ಯವಿಲ್ಲದಿದ್ದರೆ, ತಮ್ಮಲ್ಲಿದ್ದಂಥ ಖಾತೆಗಳನ್ನು ಇತರರಿಗೆ ಕೊಟ್ಟು ರಾಜ್ಯದ ಕೆಲಸ ಕಾರ್ಯಗಳು ಸಂಲಲಿತವಾಗಿ ನಡೆದುಕೊಂಡು ಹೋಗುವಂತೆ ಮಾಡಬೇಕು ಎಂದು ನಾನು ಹೇಳುತ್ತೇನೆ. ಆಮೇಲೆ ಮಾನ್ಯ ಮಂತ್ರಿಗಳ ಮೇಲೆ ಇರತಕ್ಕ ರಿಸ್ಟ್ರಿಕ್ಷನ್ ಏನು ಇದೆ ಅದನ್ನು ತೆಗೆದು ಹಾಕಬೇಕು. ತಾವು ಈ ರೀತಿಯಾಗಿ ನೋಡಿಕೊಂಡು ಹೋಗುವುದರಿಂದ ಆಡ್ಮಿನಿಸ್ಟ್ರೇಷನ್ ಮೇಲೆ ಬಹಳ ದುಷ್ಪರಿಣಾಮವಾಗುತ್ತದೆ. ಸೆಕ್ರೆಟರಿಗಳು ಅನೇಕ ಸಲ ತಮಗೋಸ್ಕರ ವೇಟ್ ಮಾಡಿಕೊಂಡು ಅವರ ಕಾರ್ಯಗಳೂ ನಿಂತು ಹೋಗುತ್ತವೆ, ಈ ಮನೆಯ ಸದಸ್ಯರುಗಳಿಗೂ ಮುಖ್ಯ ಮಂತ್ರಿಗಳು ಸುಲಲಿತವಾಗಿ ಸಿಗುತ್ತಾರೆಯೇ ?

ಶ್ರೀ ಆರ್. ಗುಂಡೂರಾವ್.—ನಮಗೆ ಯಾವಾಗಲೂ ಸಿಕ್ಕುತ್ತಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ,—ಮಾನ್ಯ ಮಂತ್ರಿಗಳಾದ ಗುಂಡೂರಾಯರು ತಮಗೆ ಸಿಕ್ಕುತ್ತಾರೆಂದು ಹೇಳುತ್ತಾರೆ, ಅವರು ಇವರಿಗೆ ಎಲ್ಲಿ ಸಿಕ್ಕುತ್ತಾರೋ ಏನೋ ಅದು ನನಗೆ ಗೊತ್ತಿಲ್ಲ.

ಶ್ರೀ ಆರ್. ಗುಂಡೂರಾವ್.—ಯಾವಾಗಲೂ ನಾವು ಕಾಣಬೇಕು ಎಂದರೆ ಸಿಕ್ಕುತ್ತಾರೆ.

ಶ್ರೀ ಎಸ್, ಆರ್. ಬೊಮ್ಮಾಯಿ.—ಹಿಂದಿನ ನಮ್ಮ ರಾಷ್ಟ್ರದ ಪ್ರಧಾನಮಂತ್ರಿಗಳಾಗಿದ್ದ ಪಂಡಿತ್ ಜವಾಹರ್ ಲಾಲ್ ನೆಹ್ರೂ ಅವರು ಇದ್ದಾಗ, ಪಾರ್ಲಿಮೆಂಟ್ ಸದಸ್ಯರು ಯಾರಾದರೂ ಅವರಿಗೆ ಪತ್ರ ಬರೆದರೆ ಒಂದು ವಾರದೊಳಗಾಗಿ ಸದಸ್ಯರಿಗೆ ಉತ್ತರ ಬರುತ್ತಿತ್ತು, ಅವರಿಗೆ ರಾಷ್ಟ್ರದ ಸಮಸ್ಯೆಗಳಿದ್ದರೂ ಕೂಡ ಸದಸ್ಯರುಗಳಿಗೆ ಒಂದು ವಾರದಲ್ಲಿಯೇ ಉತ್ತರ ಕೊಡತಕ್ಕ ವ್ಯವಸ್ಥೆಯನ್ನು ಅವರು ಇಟ್ಟುಕೊಂಡಿದ್ದರು. ನಮ್ಮ ಮುಖ್ಯಮಂತ್ರಿಗಳಿಗೆ ನಾವು ಒಂದು ಪತ್ರ ಬರೆದು ಒಂದೆರಡು ತಿಂಗಳುಗಳು ಆದರೂ ಉತ್ತರವೂ ಇಲ್ಲ, ಮತ್ತು ಅದಕ್ಕೆ ಅಕ್ನಾಲೆಡ್ಜ್ಮೆಂಟ್ ಸಹ ಇಲ್ಲ. ವಿರೋಧಪಕ್ಷದ ನಾಯಕರುಗಳಿಗೂ ಅನೇಕ ಸಮಸ್ಯೆಗಳು ಇರುತ್ತವೆ. ನಮಗೂ ಸಹ ದಿವಸಕ್ಕೆ ಸುಮಾರು ೨೦೦ ರೆಪ್ರಸೆಂಟೇಷನ್ಸ್ ಬರುತ್ತವೆ, ಅದರಲ್ಲಿ ಮಹತ್ವವಾದವುಗಳನ್ನು ತಮಗೆ ಕಳುಹಿಸಿಕೊಟ್ಟರೆ ಕೂ ತಲೆ ಅದಕ್ಕೆ ನಮಗೆ ಉತ್ತರ ಬರದಿದ್ದರೆ ನಾವು ಜನರಿಗೆ ಏನು ಹೇಳಬೇಕು? ಅದೇ ರೀತಿಯಲ್ಲಿ ಮಾನ್ಯ ಸದಸ್ಯರೆಲ್ಲರೂ ಮುಖ್ಯಮಂತ್ರಿಗಳಿಗೆ ಪತ್ರ ಬರೆಯುತ್ತಾ ಇರಬಹುದು, ಎಲ್ಲರ ಸಮಸ್ಯೆಗಳಿಗೂ ಒಂದು ಪರಿಹಾರ ಕೊಡತಕ್ಕ ವ್ಯವಸ್ಥೆಯನ್ನು ಮುಖ್ಯಮಂತ್ರಿಗಳು ಇಟ್ಟುಕೊಳ್ಳಬೇಕು. ಮತ್ತು ಮಂತ್ರಿಗಳಿಗೆ ಸ್ವತಂತ್ರವಾಗಿ ಕೆಲಸ ಮಾಡುವಂಥ, ಅಧಿಕಾರಿಗಳು ಫೈಲ್‌ಗಳನ್ನು ಸುಲಭವಾಗಿ ಡಿಸ್ಪೋಸ್ ಮಾಡತಕ್ಕಂಥ ವ್ಯವಸ್ಥೆ ಆಗಬೇಕು ನಾವು ಈ ಮಾತನ್ನು ಹೇಳುವಾಗ ಮುಖ್ಯಮಂತ್ರಿಗಳು ತಮ್ಮ ಪದವಿಯನ್ನು ಬಿಟ್ಟು ಹೋಗಬೇಕು ಎಂದು ಹೇಳುತ್ತಿಲ್ಲ. ಸರಿಯಾದ ವ್ಯವಸ್ಥೆಯನ್ನು ಈ ಬಗ್ಗೆ ಮಾಡಬೇಕು ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಮತ್ತು ಈ ವಿಷಯವನ್ನು ಇಲ್ಲಿಗೆ ಮುಗಿಸುತ್ತೇನೆ.

ಬಡ್ಜೆಟ್ಟಿನಲ್ಲಿ ಮುಖ್ಯವಾಗಿ ಕೇವಲ ಕೆಲವು ವಿಚಾರಗಳ ಬಗ್ಗೆ ಮಾತ್ರ ಹೇಳುತ್ತೇನೆ. ಪ್ರೈಸ್‌ರೈಸ್ ಬಗ್ಗೆ ಒಂದು ವಿಚಾರ ಹೇಳಬೇಕು. ಪ್ರತಿಯೊಬ್ಬ ನಾಗರೀಕನ ಜೀವನಾವಶ್ಯಕ ವಸ್ತುಗಳ ಬಗ್ಗೆ ಬೆಲೆ ಹೇಗಿದೆ ಎನ್ನುವುದನ್ನು ನಾವು ವಿಚಾರ ಮಾಡಬೇಕು. ಇದೇ ಸಮಯದಲ್ಲಿ ರೈತನ ಒಕ್ಕಲುತನದ ಉತ್ಪಾದನೆಯ ಬಗ್ಗೆ ಹೇಳಬೇಕು ಎಂದರೆ ಅವನ ಸ್ಥಿತಿ ಗಂಡಾಂತರ ಸ್ಥಿತಿಯಲ್ಲಿದೆ. ರೈತ ಕಷ್ಟಪಟ್ಟು ಉತ್ತಮ ಬೀಜಗಳನ್ನು ತೆಗೆದುಕೊಂಡು ಬಂದು, ಸಾಲ ಮಾಡಿ ಗೊಬ್ಬರ ತೆಗೆದುಕೊಂಡುಬಂದು, ಹೊಸ ಹೊಸ ವಿಧಾನಗಳನ್ನು ಅಳವಡಿಸಿಕೊಂಡು ಹೆಚ್ಚು ಬೆಳೆಯನ್ನು ರೈತ ತೆಗೆಯುತ್ತಿದ್ದಾನೆ. ನಮ್ಮ ರಾಜ್ಯ ಮುಖ್ಯವಾಗಿ ಒಕ್ಕಲುತನ ಪ್ರಧಾನವಾಗಿರತಕ್ಕ ರಾಜ್ಯ, ವ್ಯವಸಾಯ ರ್‍ಯಾಷನಲೈಸ್, ಮಾಡರನೈಸ್, ಮತ್ತು ಮೆಕಾನೈಸ್ ಆಗಬೇಕು. ಇದರ ನವೀಕರಣ ಅತ್ಯಾವಶ್ಯಕ. ಇಲ್ಲದೇ ಹೋದರೆ ನಮ್ಮ ರಾಷ್ಟ್ರದ ಉದ್ಧಾರವೇ ಇಲ್ಲ, ಈ ಕಸುಬನ್ನು ಅವಲಂಬಿಸಿರತಕ್ಕ ಜನರಿಗೆ ಇದರಲ್ಲಿ ಹೆಚ್ಚಿನ ಉತ್ಪಾದನೆ ಬರತಕ್ಕ ವ್ಯವಸ್ಥೆಯನ್ನು ಮಾಡಬೇಕು. ಆದರೆ ಅವರು ಬೆಳೆದಂಥ ವಸ್ತುಗಳನ್ನು ಮಾರ್ಕೆಟ್ಟಿನಲ್ಲಿ ಕೊಂಡು ಕೊಳ್ಳುವವರೇ ಇಲ್ಲವಾಗಿದೆ. ಹೊಲದಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರಿಗೆ, ಕೆಲಸ ಇಲ್ಲ,. ಅವರು ಸರಿಯಾಗಿ ಕೆಲಸಮಾಡತಕ್ಕ ಒಂದು ನೀತಿಯನ್ನು ಸರ್ಕಾರದವರು ಹಾಕಿಕೊಳ್ಳಬೇಕು. ಈ ಮಾತನ್ನು ಸರ್ಕಾರಕ್ಕೆ ರೈತನ ಕಷ್ಟ ಗೊತ್ತಾಗಲಿ ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಭತ್ತದ ಬೆಳೆ ಹೋದ ವರ್ಷಕ್ಕಿಂತ ಈ ವರ್ಷ ೪೦ ಪರ್ಸೆಂಟ್ ಕಡಿಮೆಯಾಗಿದೆ. ಜೋಳದ ಬೆಳೆ, ಹತ್ತಿಯ ಬೆಳೆ ರಾಗಿ ಬೆಳೆ, ಕಡಿಮೆಯಾಗಿದೆ. ಹತ್ತಿಯನ್ನು, ಯಾರೂ ಕೊಂಡು ಕೊಳ್ಳುವವರಿಲ್ಲ. ಹೀಗಾಗಿ ರೈತ ವರ್ತಕರ ಬಂದಿಯಾಗಬೇಕಾಗಿದೆ. ಲೆವಿ ಕೊಡಬೇಕಾದ ಭತ್ತವನ್ನು ತೆಗೆದುಕೊಂಡು ಹೋಗಿ ತಹಸೀಲ್ದಾರರ್ ಆಫೀಸಿನಲ್ಲಿ ೮ ದಿವಸಗಳವರೆಗೆ ಕಾದು ಹಣ ಕೊಡುವವರು ಇಲ್ಲದೆ ತೊಂದರೆಗೊಳಗಾದ ಸನ್ನಿವೇಶಗಳೂ ಇವೆ. ಲೆವಿ ಕೊಡತಕ್ಕ ಭತ್ತಕ್ಕೆ ಹಣ ಕೊಡುವ ವ್ಯವಸ್ಥೆ ಇಲ್ಲ, ಮಾರ್ಕೆಟ್ಟಿನಲ್ಲಿ ಹೋದರೆ ಕೊಳ್ಳುವವರು ಇಲ್ಲ, ಕಬ್ಬನ್ನು ಕಾರ್ಖಾನೆಯವರು ಕೊಂಡು ಕೊಳ್ಳುತ್ತಿಲ್ಲ. ಕಬ್ಬಿನ ಬೆಲೆಯೂ ಕಡಿಮೆಯಾಗಿದೆ ಇದರ ಬಗ್ಗೆ ಸರ್ಕಾರದವರು ಏನಾದರೂ ಆಲೋಚನೆ ಮಾಡಬೇಕು. ಒಟ್ಟಿನಲ್ಲಿ ರೈತನು ಬೆಳೆಯುತಕ್ಕ ಬೆಳೆಗಳ ಬೆಲೆ ಸುಮಾರು ೪೦ ಪರ್ಸೆಂಟಿನಷ್ಟು ಕಡಿಮೆಯಾಗಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಈ ರೀತಿಯಾದರೆ ರೈತ ಎಲ್ಲಿಗೆ ಹೋಗಬೇಕು ? ಈ ರಾಷ್ಟ್ರದ ಬೆನ್ನೆಲಬು ಈ ರಾಷ್ಟ್ರದ ಆಧಾರಸ್ತಂಭ ರೈತ ಎಂದು ಹಾಡಿ ಹಾಡಿ ಹೊಗಳಿದರೆ ಸಾಲದು, ಕೂಡಲೇ ಇದರ ಬಗ್ಗೆ ಏನಾದರೂ ಒಂದು ವ್ಯವಸ್ಥೆ ಮಾಡಬೇಕು. ಮಹಾರಾಷ್ಟ್ರದಲ್ಲಿ ಹತ್ತಿ ಕೊಳ್ಳುವ ಬಗ್ಗೆ ಒಂದು ವ್ಯವಸ್ಥೆ ಇದೆ. ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾದವರು ಇಲ್ಲಿಯೂ ಹತ್ತಿಯನ್ನು ಕೊಳ್ಳುವಂತಹ ಒಂದು ವ್ಯವಸ್ಥೆಯನ್ನು ರಾಜ್ಯ ಸರ್ಕಾರದವರು ಮಾಡಬೇಕು.

ಶ್ರೀ ಮಳ್ಳೂರು ಆನಂದರಾವ್.—ನಮ್ಮ ವಿರೋಧ ಪಕ್ಷದ ನಾಯಕರ ಭಾಷಣವನ್ನು ಯಾರೂ ಬರೆದುಕೊಳ್ಳುತ್ತಿಲ್ಲ. ಮಂತ್ರಿಗಳು ಅವರವರಲ್ಲಿಯೇ ಚರ್ಚೆಯಲ್ಲಿ ತೊಡಗಿದ್ದಾರೆ, ಅಂದರೆ ನೀವು ಏನಾದರೂ ಮಾತನಾಡಿಕೊಂಡು ಹೋಗಿ ಎಂದು ಅರ್ಥವೇ?

ಶ್ರೀ ಆರ್. ಗುಂಡೂರಾವ್.—ನಾವು ಮಾತನಾಡಿಕೊಂಡರೆ ನಿಮಗೇಕೆ ಹೊಟ್ಟೆಯುರಿ?

ಶ್ರೀ ಮಳ್ಳೂರು ಆನಂದರಾವ್.—ವರದಿಗಾರರು ಮಾತ್ರ ಬರೆದುಕೊಳ್ಳುತ್ತಿದ್ದಾರೆ, ಮಂತ್ರಿಗಳು ಯಾರೂ ಬರೆದುಕೊಳ್ಳುತ್ತಿಲ್ಲ. ಮಾನ್ಯ ಆರ್ಥಿಕ ಮಂತ್ರಿಗಳು ನಿದ್ರೆ ಮಾಡುತ್ತಿರುವಂತೆ ಕಾಣುತ್ತಿದೆ;

ಶ್ರೀ ಎಸ್.ಎಂ. ಯಾಹ್ಯಾ.—ವಿರೋಧಪಕ್ಷದ ನಾಯಕರು ಪ್ರಸ್ತಾಪ ಮಾಡುವ ಎಲ್ಲ ವಿಚಾರ ಗಳಿಗೂ ನಾನು ಉತ್ತರ ಕೊಡುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಂತ್ರಿಗಳು ಒಬ್ಬರಿಗೊಬ್ಬರು ಮಾತನಾಡುವುದಿದ್ದರೆ ಅವರ ಛೇಂಬರಿನಲ್ಲಿ ಹೋಗಿ ಮಾತನಾಡಿಕೊಳ್ಳಲಿ, ಇಲ್ಲಿ ಬೇಡ.

ರೈತನ ಕಷ್ಟವನ್ನು ಸರ್ಕಾರದವರು ಕೂಡಲೇ ಪರಿಹಾರ ಮಾಡಬೇಕು. ಇಲ್ಲದಿದ್ದರೆ ರೈತ ಮುಳುಗಿ ಹೋಗುತ್ತಾನೆ. ನಮ್ಮ ರಾಜ್ಯದ ಕೆಲವು ಕಡೆಗಳಲ್ಲಿ ಕಳೆದ ಎರಡು ವರ್ಷಗಳಿಂದ ಬೆಳೆ ಬರಲಿಲ್ಲ. ಮೂರನೇ ವರ್ಷ ಕಷ್ಟ ಪಟ್ಟು ಬೆಳೆದಿರತಕ್ಕಂಥ ಬೆಳೆಯನ್ನು ಕೊಳ್ಳಲು ಸರ್ಕಾರದವರು ಏನಾದರು ವ್ಯವಸ್ಥೆ ಮಾಡಬೇಕು. ಏನಾದರು ಪರಿಹಾರ ಒದಗಿಸಬೇಕು. ಈ ಮಾತನ್ನು ಕೇಂದ್ರ ಸರ್ಕಾರಕ್ಕೂ ಹೇಳಿ ಎಂದು ತಾವು ಹೇಳಬಹುದು. ನಾನು ಕೇಂದ್ರ ಸರ್ಕಾರಕ್ಕೂ ಈ ಮೂಲಕ ಒತ್ತಾಯ ಮಾಡು ತ್ತಿದ್ದೇನೆ. ಆದರೆ ರಾಜ್ಯ ಸರ್ಕಾರ ಈ ದಿಕ್ಕಿನಲ್ಲಿ ಏನು ಪ್ರಯತ್ನ ಮಾಡಿದೆ ಎಂದು ಕೇಳುತ್ತಿದ್ದೇನೆ. ಹತ್ತಿ ಕೊಳ್ಳುವ ಬಗ್ಗೆ ಏನು ವ್ಯವಸ್ಥೆ ಮಾಡಲಾಗಿದೆ ಎಂದು ಕೇಳುತ್ತಿದ್ದೇನೆ. ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾದವರ ಹತ್ತಿರ ನೂರಾರು ಕೋಟಿ ರೂಪಾಯಿಗಳ ಬಂಡವಾಳವಿದೆ. ಈ ಕಾರ್ಪೊರೇಷನ್ ಅವರ ಮೇಲೆ ಯಾವ ಯಾವ ರಾಜ್ಯ ಸರ್ಕಾರಗಳು ಪರಿಣಾಮಕಾರಿಯಾದಂಥ ರೀತಿಯಲ್ಲಿ ಒತ್ತಾಯ ತರುತ್ತವೋ ಅಂತಹ ರಾಜ್ಯಗಳಲ್ಲಿ ಈ ಕಾರ್ಪೊರೇಷನ್ ಅವರು ಹತ್ತಿಯನ್ನು ಖರೀದಿ ಮಾಡುತ್ತಿದ್ದಾರೆ. ಮಹಾರಾಷ್ಟ್ರದಲ್ಲಿ ೬೦ ಕೋಟಿ ರೂ.ಗಳಷ್ಟು ಹತ್ತಿಯನ್ನು ಖರೀದಿ ಮಾಡಿದ್ದಾರೆ. ಆದರೆ ಇಲ್ಲಿ ಏತಕ್ಕೆ ಮಾಡುತ್ತಿಲ್ಲ. ಈ ಬಗ್ಗೆ ವ್ಯವಸಾಯ ಮಂತ್ರಿಯವರು ಏನು ಪ್ರಯತ್ನ ಮಾಡಿದ್ದಾರೆಂಬುದನ್ನು ನಾನು ಕೇಳುತ್ತಿದ್ದೇನೆ. ೧೯೭೩ರಲ್ಲಿ ಇಂತಹ ಪ್ರಸಂಗ ಬಂದಾಗ ಆಗಿನ ವ್ಯವಸಾಯ ಮಂತ್ರಿಗಳು ದೆಹಲಿ ಮತ್ತು ಮುಂಬೈಗೆ ಹೋಗಿ ಸಂಬಂಧಪಟ್ಟವರೊಡನೆ ಮಾತನಾಡಿ ಬಂದರು. ನಂತರ ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾದವರು ನಮ್ಮ ರಾಜ್ಯದಲ್ಲಿ ೧೦ ಕೋಟಿ ರೂ.ಗಳಷ್ಟು ಹತ್ತಿಯನ್ನು ಖರೀದಿ ಮಾಡಿದರು. ಆಗ ರೈತರಿಗೆ ಪರಿಹಾರ ಸಿಕ್ಕಿತು. ಆದರೆ ಇಂದು ನಮ್ಮ ವ್ಯವಸಾಯ ಮಂತ್ರಿಗಳು ಏನು ಮಾಡುತ್ತಿದ್ದಾರೆ? ನಿದ್ದೆ ಹೊಡೆಯುತ್ತಿದ್ದಾರೆಯೋ? ಹತ್ತಿ, ಭತ್ತ, ಕಬ್ಬು ಬೆಳೆದ ರೈತರ ಕಷ್ಟಗಳ ಬಗ್ಗೆ ಪತ್ರಿಕೆಯವರು ಚಿತ್ರಗಳನ್ನು ಕೊಟ್ಟು ಪ್ರಕಟಿಸಿದ್ದಾರೆ. ಈ ದಿಶೆಯಲ್ಲಿ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾದವರು, ಮಾರ್ಕೆಟಿಂಗ್ ಫೆಡರೇಷನ್ ಅವರು, ಕೋ-ಆಪರೇಟಿವ್ ಸಂಸ್ಥೆಗಳವರು ಮತ್ತು ಸಂಬಂಧಪಟ್ಟ ಇಲಾಖೆಯವರು ಏನು ಪ್ರಯತ್ನ ಮಾಡಿದ್ದಾರೆಂದು ನಾನು ಕೇಳು ತ್ತಿದ್ದೇನೆ? ರೈತ ಇಂದು ಕಷ್ಟದಲ್ಲಿದ್ದಾನೆ. ತಾನು ಬೆಳೆದಿದ್ದನ್ನು ತನ್ನಲ್ಲಿಯೇ ಸ್ಟೋರ್ ಮಾಡಿಕೊಳ್ಳಲು ಆತನಿಗೆ ಸಾಧ್ಯವಿಲ್ಲ. ಆದಕಾರಣ ಆತನು ಕೈಗೆ ಬಂದ ಧಾರಣೆಗೆ ಮಾರಾಟ ಮಾಡಿ ಇಂದು ದಿವಾಳಿ ಯಾಗಿದ್ದಾನೆ. ಇದನ್ನೆಲ್ಲಾ ವಿಚಾರ ಮಾಡಲು ಸರ್ಕಾರಕ್ಕೆ ಸಮಯವಿಲ್ಲವೆಂದು ಕಾಣುತ್ತಿದೆ? ರೈತರ ಈ ಸಮಸ್ಯೆಗಳನ್ನು ಬಿಡಿಸುವ ಬಗ್ಗೆ ರಾಜ್ಯ ಮಟ್ಟದಲ್ಲಿ ಸರ್ಕಾರ ಯಾವಯಾವ ಕ್ರಮಗಳನ್ನು ಕೈಕೊಂಡಿದೆ ಮತ್ತು ಕೇಂದ್ರ ಸರ್ಕಾರದ ಮೇಲೆ ಯಾವ ರೀತಿ ಪ್ರಭಾವ ಬೀರಿದೆ ಎಂಬುದನ್ನು ನಾನು ಕೇಳಬಯಸು ತ್ತೇನೆ. ನಮ್ಮ ರೈತರು ಬಹಳ ಒಳ್ಳೆಯವರು ಮತ್ತು ಅವರು ಸೌಮ್ಯ ಜನರು. ಅದೇ ತಮಿಳುನಾಡಿ ನಲ್ಲಿ ರೈತರ ಚಳುವಳಿ ಇಂದು ಉಗ್ರ ಸ್ವರೂಪ ತಳೆದಿದೆ. ಆದರೆ ನಮ್ಮಲ್ಲಿ ಕಾರ್ಮಿಕರಂತೆ ರೈತರು ಇನ್ನೂ ಸಂಘಟಿತರಾಗಿಲ್ಲ. ಕಾರ್ಮಿಕರೇನಾದರು ಸಂಪು ಮಾಡಿದರೆ ಅವರ ಸಮಸ್ಯೆಗಳನ್ನು ಬಿಡಿಸುವುದಕ್ಕೆ ಸರ್ಕಾರ ಕೂಡಲೇ ಪ್ರಯತ್ನ ಮಾಡುತ್ತದೆ. ಅವರು ಒಂದು ದಿನ ಸತ್ಯಾಗ್ರಹ ಮಾಡಿದರೆ ಸಾಕು, ೨೦ ಕೋಟಿ ಅಲ್ಲ, ೩೦ ಕೋಟಿ ರೂಪಾಯಿ ಆದರೂ ಸರಿಯೇ ತುಟ್ಟಿಭತ್ಯವನ್ನು ಜಾಸ್ತಿ ಮಾಡಲಾಗುತ್ತದೆ. ಆದರೆ ರೈತರ ಕಷ್ಟಗಳನ್ನು ಕೇಳುವವರೇ ಇಲ್ಲ. ಇದಕ್ಕೆ ಕಾರಣ ಅವರು ಸಂಘಟಿತರಾಗಿಲ್ಲ. ಅವರು ಮೂಕ ಪ್ರಾಣಿಗಳಂತಿದ್ದಾರೆ. ಇಂತಹವರಿಗೆ ಸಹಾಯ ಮಾಡುವ ಮನಸ್ಸು ಸರ್ಕಾರಕ್ಕೆ ಇಲ್ಲ. ರೈತರ ಬಗ್ಗೆ

ಸರ್ಕಾರಕ್ಕೆ ಕಿಂಚಿತ್ ಏನಾದರು ಕಳಕಳಿ ಇದ್ದರೆ ಕೂಡಲೇ ಈ ಬಗ್ಗೆ ಏನಾದರು ಕ್ರಮ ಕೈಕೊಳ್ಳಬೇಕು. ಇಲ್ಲದಿದ್ದರೆ ರೈತ ಉಳಿಯುವುದಿಲ್ಲ, ಮುಂದಿನ ವರ್ಷದೊಳಗೆ ಆತನ ಎತ್ತುಗಳೂ ಸಹ ಇರುವುದಿಲ್ಲ, ಟ್ರಾಕ್ಟರ್ ಸಹ ಇರುವುದಿಲ್ಲ. ರೈತರು ದಿವಾಳಿಯಾದರೆ ನಂತರ ಏನು ಮಾಡುತ್ತಾರೋ ಗೊತ್ತಿಲ್ಲ. ರೈತರು ಬೆಳೆ ಬೆಳೆಯದಿದ್ದರೆ ನಾವು ಆಕಾಶ ನೋಡಬೇಕಾಗುತ್ತದೆ. ಅದೇ ರೀತಿ ರೈತರು ಏನಾದರು ಸಂಪು ಹೂಡಿದರೆ ಅವರೂ ಸಹ ಆಕಾಶ ನೋಡಬೇಕಾಗುತ್ತದೆಯೇ ಹೊರತು ಪರಿಹಾರವೇನೂ ಸಿಗುವುದಿಲ್ಲ. ಇಂತಹ ರೈತರ ಕಷ್ಟವನ್ನು ಬಿಡಿಸಲು ಸರ್ಕಾರ ಗಂಭೀರವಾಗಿ ಆಲೋಚನೆ ಮಾಡಬೇಕು, ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಈ ಬಗ್ಗೆ ಏನೇನು ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ ಎಂಬುದನ್ನು ಹೇಳಬೇಕು. ರೈತರನ್ನು ಉಳಿಸದಿದ್ದರೆ ಒಕ್ಕಲುತನ ಈ ರಾಜ್ಯದಲ್ಲಿ ಸಂಪೂರ್ಣವಾಗಿ ಕೆಳ ಮಟ್ಟಕ್ಕೆ ಹೋಗಿಬಿಡುತ್ತದೆ. ಆ ರೀತಿ ಆಗುವುದಕ್ಕೆ ಅವಕಾಶ ಕೊಡಬಾರದೆಂದು ಹೇಳುತ್ತೇನೆ.

ಮತ್ತೊಂದು ಮೋಜಿನ ಸಂಗತಿಯೆಂದರೆ, ಜನತಾ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ದೇಶದಲ್ಲಿ ಆಹಾರ ಪದಾರ್ಥಗಳ ಬೆಲೆಗಳು ಇಳಿಯಲಿಲ್ಲ ಎಂದು ಹೇಳುತ್ತಿರುವವರು ಭಾರತದ ಮಟ್ಟದಲ್ಲಿದ್ದಾರೆ. ಬೆಲೆಗಳನ್ನು ಇಳಿಸಬೇಕೆಂದು ಒಂದು ಕಡೆ ಪ್ರಚಾರ ಮಾಡುತ್ತಿದ್ದಾರೆ. ಆದರೆ ಮತ್ತೊಂದು ಕಡೆ ರೈತರು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ರೈತರು ಹೋಲ್‌ಸೇಲ್ ದರದಲ್ಲಿ ಮಾರಾಟ ಮಾಡುವಾಗ ಬೆಲೆಗಳು ಕಡಿಮೆಯೇ ಇದೆ. ಆದರೆ ಆ ಪದಾರ್ಥಗಳು ಗ್ರಾಹಕರಿಗೆ ಮುಟ್ಟುವಾಗ ಅದರ ಬೆಲೆ ಜಾಸ್ತಿಯಾಗಿರುತ್ತದೆ. ಬೆಂಗಳೂರು, ಹುಬ್ಬಳ್ಳಿ, ಮೈಸೂರು ಮುಂತಾದ ನಗರಗಳಲ್ಲಿ ಇದೇ ರೀತಿ ಬೆಲೆಗಳು ಗ್ರಾಹಕರ ಮಟ್ಟದಲ್ಲಿ ಜಾಸ್ತಿಯಾಗಿರುವುದಕ್ಕೆ ಕಾರಣವೇನು? ಇದನ್ನು ಸರ್ಕಾರ ಆಲೋಚನೆ ಮಾಡಬೇಕು? ರೈತರು ಕಡಿಮೆ ದರದಲ್ಲಿ ಮಾರಾಟ ಮಾಡಿದರೂ ಸಹ ಗ್ರಾಹಕರಿಗೆ ಅದು ಕಡಿಮೆಯ ದರದಲ್ಲಿ ಸಿಗದಿರುವುದಕ್ಕೆ ಕಾರಣ ಸರ್ಕಾರದ ಪಾಲಿಸಿ ಆಫ್ ಟ್ಯಾಕ್ಸೇಷನ್; ಮಲ್ಟಿ ಪಾಯಿಂಟ್ ಸೇಲ್ಸ್‌ಟ್ಯಾಕ್ಸ್ ಇದೆ. ರೈತರು ಒಂದು ಸಲ ತಮ್ಮ ಮಾಲನ್ನು ಮಾರಾಟ ಮಾಡಿದಮೇಲೆ ಅದು ವ್ಯಾಪಾರಿಗಳ ಮಟ್ಟದಲ್ಲಿ ೩–೪ ಕೈ ದಾಟಿದರೆ ಅಷ್ಟು ಸಲವೂ ತೆರಿಗೆ ಕೊಡಬೇಕಾಗುತ್ತದೆ. ಇದರ ಜೊತೆಗೆ ಅಗ್ರಿಕಲ್ಚರಲ್ ಪ್ರೊಡ್ಯೂಸ್ ಮಾರ್ಕೆಟ್‌ನವರು ಸಹ ಸೆಸ್ ಹಾಕುತ್ತಾರೆ. ಒಂದೇ ಮಾಲನ್ನು ಹುಬ್ಬಳ್ಳಿ, ಹಾವೇರಿ, ಧಾರವಾಡ, ಬೆಂಗಳೂರು ಹೀಗೆ ನಾನಾ ಕಡೆಗಳಲ್ಲಿ ಮಾರಾಟ ಮಾಡಿದಾಗಲೆಲ್ಲಾ ಇವರು ಸೆಸ್ ಹಾಕುತ್ತಾರೆ. ಇದು ನನಗೆ ಅರ್ಥವಾಗುವುದಿಲ್ಲ. ಮಾರ್ಕೆಟಿಂಗ್ ಕಮಿಟಿಯನ್ನು ಡೆವಲಪ್ ಮಾಡುವುದಕ್ಕಾಗಿ ಮತ್ತು ವರ್ಲ್ಡ್ ಬ್ಯಾಂಕಿನವರು ಕೊಟ್ಟ ಸಾಲವನ್ನು ತುಂಬುವುದಕ್ಕಾಗಿ ಈ ಸೆಸ್‌ನ್ನು ಹಾಕುತ್ತಿದ್ದಾರೆ. ಮೊದಲು ಹತ್ತು–ಇಪ್ಪತ್ತು ಪೈಸೆ ಸೆಸ್ ಇತ್ತು; ಅದನ್ನು ಈಗ ಒಂದು ರೂಪಾಯಿ ಮಾಡಿದ್ದಾರೆ. ಅಂದರೆ ಒಂದೇ ಸಲ ಇದನ್ನು ೫–೬ ಪಟ್ಟು ಹೆಚ್ಚು ಮಾಡಿದರು ಇದರ ಜೊತೆಗೆ ಮಲ್ಟಿ ಪಾಯಿಂಟ್ ಟ್ಯಾಕ್ಸ್ ಬೇರೆ ಕೊಡಬೇಕು. ಹುಬ್ಬಳ್ಳಿಯಲ್ಲಿ ರೈತ ಕಲ್ಲಪ್ಪನಿಗೆ ತನ್ನ ಮಾಲನ್ನು ಮಾರಾಟ ಮಾಡಿದಾಗ ಒಂದು ಸಲ, ಕಲ್ಲಪ್ಪ ಮಲ್ಲಪ್ಪನಿಗೆ ಅದೇ ಮಾಲನ್ನು ಮಾರಾಟ ಮಾಡಿದಾಗ ಒಂದು ಸಲ ಮಲ್ಲಪ್ಪ ಚೆನ್ನಪ್ಪನಿಗೆ ಅದೇ ಮಾಲನ್ನು ಮಾರಾಟ ಮಾಡಿದಾಗ ಇನ್ನೊಂದು ಸಲ ಹೀಗೆ ೩ ಸಲ ಟ್ಯಾಕ್ಸ್ ಕೊಡಬೇಕು. ಇದರ ಜೊತೆಗೆ ಕಮಿಷನ್ ಏಜೆಂಟ್ಸ್ ಎಂಬುದಾಗಿ ಇರುತ್ತಾರೆ. ಇವರೆಲ್ಲರ ಕೈದಾಟಿ ಗ್ರಾಹಕರಿಗೆ ಅದು ಮುಟ್ಟುವಾಗ ಅದರ ಬೆಲೆ ಜಾಸ್ತಿಯಾಗಿರುತ್ತದೆ. ರೈತ ತನ್ನಲ್ಲಿರುವ ಭತ್ತವನ್ನು ಕ್ವಿಂಟಾಲಿಗೆ ೮೦–೯೦ ರಂತೆ ಮಾರಾಟ ಮಾಡುತ್ತಾನೆ; ಅಕ್ಕಿಯಾದರೆ ಕ್ವಿಂಟಾಲ್ ಒಂದಕ್ಕೆ ೧೩೦ ರಿಂದ ೧೪೦ ರೂಪಾಯಿಗಳ ಪ್ರಕಾರ ಮಾರಾಟ ಮಾಡುತ್ತಾನೆ. ಆದರೆ ಅದು ಗ್ರಾಹಕನಿಗೆ ಮುಟ್ಟುವಾಗ ಅದರ ಬೆಲೆ ೨೦೦ ರೂಪಾಯಿಗಳಾಗಿರುತ್ತದೆ. ಒಟ್ಟಿನಲ್ಲಿ ಗ್ರಾಹಕನಿಗೆ ಏನು ಅನುಕೂಲವಾಗುತ್ತಿಲ್ಲ. Retail prices have not been reduced. The consumer is not benefited because of the fall of prices. It is because of maladministration and wrong taxation policy. ಇದು ನಿಲ್ಲಬೇಕು. ಒಂದೇ ಹಂತದಲ್ಲಿ ತೆರಿಗೆ ಹಾಕಬೇಕು. ಈಗಿನ ಒಂದು ವ್ಯವಸ್ಥೆಯಿಂದ ಕಳ್ಳ ವ್ಯಾಪಾರಿಗಳಿಗೆ ಅನುಕೂಲವಾಗಿದೆ.

(ಶ್ರೀಮಂತಿ ಸುಮತಿ ಬಿ. ಮಡಿಮನ್ ಅವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಅನೇಕ ಜನ ಕಳ್ಳ ವ್ಯಾಪಾರ ಮಾಡುತ್ತಿದ್ದಾರೆ. ಅದನ್ನು ಯಾವ ರೀತಿ ಮಾಡುತ್ತಾರೆ ಎಂದು ನಾನು ಹೇಳುವುದಿಲ್ಲ. ಇದರಿಂದ ಸರ್ಕಾರಕ್ಕೂ ಟ್ಯಾಕ್ಸ್ ಸರಿಯಾಗಿ ಬರುತ್ತಾ ಇಲ್ಲ. ಗ್ರಾಹಕನಿಗೂ ಲಾಭವಿಲ್ಲ, ರೈತನಿಗೂ ಲಾಭವಿಲ್ಲ. ಗ್ರಾಹಕನಿಗೆ ಯೋಗ್ಯ ಬೆಲೆಯಲ್ಲಿ ಪದಾರ್ಥಗಳು ಸಿಕ್ಕುವಂತೆ ವ್ಯವಸ್ಥೆ

ಮಾಡಬೇಕು. ಮಾನ್ಯ ಅರ್ಥ ಮಂತ್ರಿಗಳು ತಮ್ಮ ಭಾಷಣದಲ್ಲಿ ೧೫,೦೦೦ ಫೇರ್ ಪ್ರೈಸ್ ಷಾಪ್ಸ್ ರಾಜ್ಯದ ಸೂಕ್ತ ಸ್ಥಳಗಳಲ್ಲಿವೆ, ನಮ್ಮಲ್ಲಿ ೧.೭೨ ಲಕ್ಷ ಟನ್ನುಗಳನ್ನು ಭತ್ತ ದಾಸ್ತಾನು ಇದೆ ಎನ್ನುವ ಮಾತನ್ನು ಹೇಳಿದ್ದಾರೆ. ಈ ಮಾತನ್ನು ನಾನು ಒಪ್ಪುತ್ತೇನೆ. ಈ ಅಂಗಡಿಗಳು ಇನ್ನೂ ಹೆಚ್ಚಾಗಬೇಕು ಮತ್ತು ಸರಿಯಾದ ರೀತಿಯಲ್ಲಿ ನಡೆಯಬೇಕು ಎಂದು ನಾನು ಹೇಳುತ್ತೇನೆ. ಸರ್ಕಾರದವರು ಏನು ಆಹಾರ ಧಾನ್ಯಗಳನ್ನು ಸಂಗ್ರಹಣೆ ಮಾಡಿದ್ದಾರೆ ಅದರ ಬಗ್ಗೆ ನಾನು ಒಂದು ಮಾತನ್ನು ಹೇಳುತ್ತೇನೆ. ಈ ೩ ವರ್ಷಗಳಲ್ಲಿ ಆಹಾರ ಧಾನ್ಯಗಳನ್ನು ರೈತರ ತಲೆ ಬಡಿದು ತೆಗೆದುಕೊಂಡಿದ್ದೀರಿ. ಭತ್ತ ೭೦೦ ರೂಪಾಯಿ ಇದ್ದಾಗ ೭೦ ರೂಪಾಯಿಯಂತೆ ರೈತನಿಂದ ತೆಗೆದುಕೊಂಡಿದ್ದೀರಿ, ಅದನ್ನು ಏನು ಮಾಡಿದ್ದೀರಿ. ಅದರಲ್ಲಿ ಕೆಲವೊಂದು ಭಾಗವನ್ನು ಗ್ರಾಹಕರಿಗೆ ಹಂಚಿದ್ದೀರಿ, ಅದನ್ನು ನಾನು ಒಪ್ಪುತ್ತೇನೆ. ಅದರಲ್ಲಿ ಬಹುಭಾಗ ಎಲ್ಲೆಲ್ಲಿ ಇತ್ತೋ ಅಲ್ಲಲ್ಲೇ ಹಾಳಾಗಿಹೋಗಿದೆ. ನಾನು ತೋರಿಸುತ್ತೇನೆ, ಧಾರವಾಡ ಜಿಲ್ಲೆಯಲ್ಲಿ ತಮಗೆ ಗೊತ್ತಿದ್ದ ಹಾಗೆ ಅಲ್ಲಿ ಗೋಡೌನ್‌ನಲ್ಲಿದ್ದಂಥ ಆಹಾರ ಧಾನ್ಯ ಹಾಳಾಗಿ ಹೋಗಿತ್ತು. ಅದಕ್ಕೆ ರೂಲ್ಸ್ ಮಾಡಿ ಹೋದಸಲ ಮಾರಾಟ ಮಾಡಿದ್ದೀರಿ. ಮಾರಾಟ ಮಾಡುವಾಗ ಯಾವ ಸ್ಥಿತಿಯಲ್ಲಿತ್ತು ಎಂದರೆ, ಅದನ್ನು ಜನ ತಿನ್ನುವುದಂತೂ ಬಿಡಿ, ದನ ತಿನ್ನುವ ಮಟ್ಟದಲ್ಲಿತ್ತು. ಅದನ್ನು ಷಾಪ್ಸ್‌ಗೆ ಹಂಚಿದರು. ಕಡೆಗೆ ಷಾಪ್ಸ್‌ನಲ್ಲಿ ಮಾರಾಟವಾಗಲಿಲ್ಲ. ಈ ರೀತಿ ಅನೇಕ ಗೋಡೌನ್‌ಗಳಲ್ಲಿರತಕ್ಕಂಥ ಭತ್ತವಾಗಲೀ, ಜೋಳವಾಗಲೀ, ಅಕ್ಕಿಯಾಗಲೀ ಎಲ್ಲವೂ ಹಾಳಾಗಿ ಹೋಗಿದೆ. ಆದಕ್ಕೋಸ್ಕರ ನಾನು ಮಾನ್ಯ ಅರ್ಥ ಮಂತ್ರಿಗಳ ಅವಗಾಹನೆಗೆ ತರುವುದೇನೆಂದರೆ, ತಾವು ಹಣವನ್ನು ಕೊಡುತ್ತೀರಿ. ಅಧಿಕಾರಿಗಳು ಕಂಡೆಮ್ಡ್ ಸ್ಟಾಕ್ ಎಂದು ಹೇಳಿ ಮಿಲ್‌ನವರಿಗೆ, ವ್ಯಾಪಾರಸ್ಥರಿಗೆ ಅದನ್ನು ಡಿಸ್ಪೋಸ್ ಮಾಡುತ್ತಿದ್ದಾರೆ. ಧಾರವಾಡ ಜಿಲ್ಲೆಯಲ್ಲಿ ನಾನು ಪರೀಕ್ಷೆ ಮಾಡಿದ್ದೇನೆ. ಅವಲಕ್ಕಿ ಮುಂತಾದುವನ್ನು ಗ್ರಾಹಕರಿಗೆ ಕೊಡುವುದಕ್ಕಿಂತ ಕಡಿಮೆ ಬೆಲೆಗೆ ಪ್ರೈವೇಟ್ ಮರ್ಚೆಂಟ್ಸ್‌ಗೆ ಹೆಚ್ಚು ಭಾಗ ಮಾರುತ್ತಾ ಇದ್ದಾರೆ. Everyday it is being sold. The then Food Minister went from place to place and in the Travellers' Bungalow itself called the merchants and disposed off without calling for the tenders. ಅಲ್ಲಿ ಅಧಿಕಾರಿಗಳು ಪ್ರತಿಯೊಂದು ಬ್ಯಾಗ್ ಪ್ಯಾಡಿಯನ್ನು ಮಾರಲು ೫ ರೂಪಾಯಿ ನಿಗದಿ ಮಾಡಿಕೊಂಡಿರುತ್ತಾರೆ. ಪ್ರತಿ ದಿನ ಐದಾರು ಬ್ಯಾಗುಗಳನ್ನು ಮಾರಾಟ ಮಾಡತಕ್ಕಂಥ ವ್ಯವಸ್ಥೆ ನಡೆಯುತ್ತಾ ಇದೆ. ರೈತನ ತಲೆ ಬಡಿದು ತೆಗೆದುಕೊಂಡಂಥ ಭತ್ತವನ್ನು ಈ ರೀತಿ ವ್ಯಾಪಾರಸ್ಥರಿಗೆ ಮಾರುತ್ತಾ ಇದ್ದಾರೆ. ಫುಡ್ ಡಿಪಾರ್ಟ್‌ಮೆಂಟಿನಲ್ಲಿನ ಅಂಕಿ ಸಂಖ್ಯೆಗಳನ್ನು ತೆಗೆದುಕೊಂಡರೆ, ಅಲ್ಲಿ ನಡೆಯುತಕ್ಕಂಥ ಅವ್ಯವಹಾರಗಳು ಗೊತ್ತಾಗುತ್ತದೆ. ಸಂಗ್ರಹ ಮಾಡಿದ್ದರಲ್ಲಿ ವ್ಯಾಪಾರಸ್ಥರಿಗೆ ಮತ್ತು ಕನ್‌ಸ್ಯೂಮರ್ಸ್‌ಗೆ ಎಷ್ಟು ಹಂಚಿದ್ದಾರೆ ಎಂದು ಲೆಕ್ಕ ತೆಗದುಕೊಂಡರೆ ಗೊತ್ತಾಗುತ್ತದೆ. ಇದರಲ್ಲಿ ಸರ್ಕಾರದ ಹಣ ಅಪವ್ಯಯವಾಗುತ್ತಾ ಇದೆ, ಇದನ್ನು ನಿಲ್ಲಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಮೊನ್ನೆ ಪತ್ರಿಕೆಯಲ್ಲಿ ಬಂದಿದೆ. ಏನೆಂದರೆ, ಕೇಂದ್ರದಿಂದ ಬಂದಂಥ ಗೋಧಿಯನ್ನು ಫುಡ್ ಡಿಪಾರ್ಟ್‌ಮೆಂಟ್‌ನವರು ೫೦ ಲಕ್ಷ ರೂಪಾಯಿಗಳ ಲಾಭ ಮಾಡಿಕೊಂಡು ಮಾರಿದರು ಎನ್ನುವ ವಿಚಾರ ಪತ್ರಿಕೆಯಲ್ಲಿ ಬಂದಿದೆ. ಈ ರೀತಿ ಸರ್ಕಾರ ಏಕೆ ಮಾಡಿತು ಎನ್ನುವುದನ್ನು ಹೇಳಬೇಕು. ಬಡ ಗ್ರಾಹಕನಿಗೆ ಮುಟ್ಟಬೇಕು ಎಂದು ಕೇಂದ್ರ ಸರ್ಕಾರ ಕೊಟ್ಟಂಥ ಗೋಧಿಯನ್ನು ಸರ್ಕಾರ ಲಾಭ ಮಾಡಿಕೊಂಡು ಮಾರಾಟ ಮಾಡಿದೆ. ಕೇಂದ್ರ ಸರ್ಕಾರದ ಉದ್ದೇಶವನ್ನು ಕೈಬಿಟ್ಟು ಸರ್ಕಾರ ವ್ಯಾಪಾರಿ ಮನೋಭಾವದಿಂದ ಮಾರಾಟ ಮಾಡಿರುವುದು ಗ್ರಾಹಕನ ದೃಷ್ಟಿಯಿಂದ ಸರಿಯಲ್ಲ. ಆಹಾರ ಧಾನ್ಯಗಳ ಸಂಗ್ರಹಣೆ, ವಿತರಣೆ ಮತ್ತು ಅದರ ಬಂಡವಾಳದ ಬಗ್ಗೆ ಸರ್ಕಾರ ಬಹಳ ದೀರ್ಘವಾಗಿ ಆಲೋಚನೆ ಮಾಡಬೇಕು, ಮೊಟ್ಟಮೊದಲನೆಯದಾಗಿ ಹೇಳುವುದಾದರೆ, ಲೆವಿ ಕೊಟ್ಟಂಥ ರೈತನಿಗೆ ಕೂಡಲೇ ಹಣ ಕೊಡತಕ್ಕ ವ್ಯವಸ್ಥೆಯಾಗಬೇಕು. ಕಡಿಮೆ ಬೆಲೆಯಲ್ಲಿ ಕೊಡತಕ್ಕಂಥ ರೈತ ಹಣಕ್ಕಾಗಿ ೨೪ ಗಂಟೆ ತಹಶೀಲ್ದಾರ್ ಆಫೀಸಿನಲ್ಲಿ ಕಾಯುವ ರೀತಿ ಇರಬಾರದು. ಅವನಿಗೆ ಒಂದು ವಾರದಲ್ಲಿ ಹಣ ಕೊಡುವ ವ್ಯವಸ್ಥೆ ಮಾಡಬೇಕು ಎಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತಿದ್ದೇನೆ. ಇದರ ಜೊತೆಗೆ ಸಂಗ್ರಹಣೆಯಲ್ಲಿರತಕ್ಕ ಆಹಾರಧಾನ್ಯ ಎಷ್ಟು ಕೆಟ್ಟಿದೆ ಎಂಬುದನ್ನು ಪರೀಕ್ಷೆ ಮಾಡಬೇಕು. ನನಗೆ ಸಿಕ್ಕಿರತಕ್ಕ ಮಾಹಿತಿ ಪ್ರಕಾರ ತಮ್ಮ ಸಂಗ್ರಹಣೆಯಲ್ಲಿ ಮೂರನೇ ಒಂದು ಭಾಗ ಕೊಳೆತು ಹೋಗಿದೆ. ತಾವು ಗೋಡೌನ್‌ನಲ್ಲಿರತಕ್ಕ ಕೆಟ್ಟು ಹೋಗಿರತಕ್ಕ ಪದಾರ್ಥವನ್ನು ಈಗಾಗಲೇ ಹಂಚಿದ್ದೀರಿ. ಹಂಚುವಾಗ ಮಾಡಿದಂಥ ಅವ್ಯವಹಾರಗಳನ್ನು ನಾನು ಹೋದ ಸಲ ಭಾಷಣದಲ್ಲಿ ಹೇಳಿದ್ದೇನೆ. ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಪದಾರ್ಥಗಳನ್ನು ಮಾರಿದ್ದಾರೆ. ಇದರಿಂದ Private merchants have been benefited and not the

consumers, ಸರ್ಕಾರ ಇದನ್ನು ತನಿಖೆ ಮಾಡಬೇಕು. ಗ್ರಾಹಕರಿಗೆ ಆಹಾರ ಪದಾರ್ಥಗಳು ಯೋಗ್ಯ ಬೆಲೆಯಲ್ಲಿ ಸಿಗತಕ್ಕ ವ್ಯವಸ್ಥೆಯನ್ನು ಮಾಡಬೇಕು. ಟ್ಯಾಕ್ಸೇಷನ್ ಪಾಲಿಸಿಯನ್ನು ರಿವೈಸ್ ಮಾಡಬೇಕು. ಅಗ್ರಿಕಲ್ಚರಲ್ ಸೆಸ್‌ನ್ನು ಒಂದು ಪಾಯಿಂಟ್ ಮಾಡಬೇಕು. ಒಂದು ಕಡೆ ಟ್ಯಾಕ್ಸ್ ಕೊಟ್ಟರೆ ಇನ್ನೊಂದು ಕಡೆ ಕೊಡುವ ಅವಶ್ಯಕತೆ ಇಲ್ಲ. ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿ ಖಾತೆಯ ಮಂತ್ರಿಗಳು ಇದ್ದಾರೆ, ಅವರಿಗೆ ಇದರ ಬಗ್ಗೆ ರೆಪ್ರೆಸೆಂಟೇಷನ್ ಕೊಟ್ಟಿದ್ದೇವೆ. It is on the floor of this House. Agricultural cessment for development should be only one point and it cannot be multi-point. ಇದರ ಬಗ್ಗೆ ಅನೇಕ ಸಲ ಅನೇಕ ರೀತಿಯಾದ ರೆಪ್ರೆಸೆಂಟೇಷನ್ಸ್ ಕೊಟ್ಟಿದ್ದೇವೆ. ಇದರ ಬಗ್ಗೆ ಮಾನ್ಯ ಮಂತ್ರಿಗಳೂ ಕೂಡ ಭರವಸೆ ಕೊಟ್ಟಿದ್ದಾರೆ. ಅದು ತೀವ್ರವಾಗಿ ಆಗಬೇಕು, ಆಗದೇ ಹೋದರೆ ಗ್ರಾಹಕರಿಗೆ ಬೆಲೆ ಏರಿಕೆಯಿಂದ ಲಾಭ ಸಿಕ್ಕುವುದಿಲ್ಲ.

ಇನ್ನು ಕೈಗಾರಿಕೆಗಳ ಬಗ್ಗೆ ಹೇಳಬೇಕಾಗಿದೆ. ಈ ರಾಜ್ಯದ ಉದ್ಯಮಗಳ ಚಿತ್ರವನ್ನು ನಾವು ಕಣ್ಣು ಮುಂದೆ ತೆಗೆದುಕೊಂಡರೆ ಸಂಪೂರ್ಣವಾಗಿ ಕತ್ತಲೆ ಕಾಣಿಸುತ್ತದೆ. ಕಳೆದ ೬ ವರ್ಷಗಳಲ್ಲಿ ನಡೆದಂಥ ಔದ್ಯೋಗಿಕ ಬೆಳೆವಣಿಗೆಯನ್ನು ನೋಡಿದಾಗ ಸರ್ಕಾರದ ಕೈಯಲ್ಲಿದ್ದಂಥ ಮುಖ್ಯವಾದ ನಾಲ್ಕೈದು ಉದ್ಯಮಗಳನ್ನು ಸರ್ಕಾರ ಮಾರಾಟ ಮಾಡಿದೆ. ಹೊಸ ಉದ್ಯಮಗಳನ್ನು ಪ್ರಾರಂಭ ಮಾಡಿಲ್ಲ, ಇದ್ದದ್ದನ್ನು ಕೊಟ್ಟಿದ್ದಾರೆ. ಇವತ್ತಿನ ದಿವಸ ಸರ್ಕಾರಿ ಉದ್ಯಮಗಳು ಲಾಭಗಳಿಸುತ್ತಾ ಇಲ್ಲ. ಒಂದೆರಡು ಬಿಟ್ಟರೆ ಎಲ್ಲಾ ಉದ್ಯಮಗಳು ಹಾನಿಯಲ್ಲಿವೆ. ಸೋಪ್ ಫ್ಯಾಕ್ಟರಿ, ಭದ್ರಾವತಿ ಫ್ಯಾಕ್ಟರಿ ಮುಂತಾದ ಎರಡು, ಮೂರು ಉದ್ಯಮಗಳನ್ನು ಬಿಟ್ಟರೆ ಉಳಿದ ಎಲ್ಲಾ ಉದ್ಯಮಗಳು ನಷ್ಟದಲ್ಲಿವೆ. ಇವು ಕಳೆದು ೬ ವರ್ಷಗಳಿಂದ ನಷ್ಟದಲ್ಲಿವೆ, ಲಾಭಗಳಿಸುತ್ತಾ ಇಲ್ಲ. ಇದರ ಜೊತೆಗೆ ೬ ವರ್ಷಗಳಲ್ಲಿ ಹೊಸ ಉದ್ಯಮಗಳು ಸರ್ಕಾರಿ ವಲಯದಲ್ಲಿ ಯಾವುದೂ ಬರಲಿಲ್ಲ. ಪಬ್ಲಿಕ್ ಸೆಕ್ಟರ್ ಇಂಡಸ್ಟ್ರೀಸ್ ಮೇಲೆ ಹಿಂದೆ ಮಾನ್ಯ ಮುಖ್ಯ ಮಂತ್ರಿಗಳ ವರ್ಚಸ್ಸು ಇತ್ತು. ಈಗ ಕೇಂದ್ರದಲ್ಲಿ ಬೇರೆ ಪಕ್ಷದ ಸರ್ಕಾರವಿದೆ. ಈಗಲೂ ವರ್ಚಸ್ಸು ಇರಬಹುದು, ಇಲ್ಲ ಎಂದು ನಾನು ಹೇಳುವುದಿಲ್ಲ. ೧೯೭೨–೭೩ ಇಸವಿಯಿಂದ ೧೯೭೮–೭೯ರ ವರೆಗಿನ ಮಾನ್ಯ ಘೋರ್ಪಡೆಯವರ ಬಜೆಟ್ ಭಾಷಣಗಳು ನನ್ನ ಹತ್ತಿರ ಇವೆ. ಅದರಲ್ಲಿ ಚುನಾವಣೆ ಯಾದ ಮೇಲೆ ೧೯೭೨–೭೩ನೇ ಇಸವಿಯಲ್ಲಿ ವೋಟ್ ಅನ್ ಅಕೌಂಟ್ ಆಯಿತು, ಆಗ ಮಾಡಿದಂಥ ಭಾಷಣವನ್ನು ನಾನು ನೋಡಿದೆ. ಆಗ ಮಾಡಿದಂಥ ಭಾಷಣ ಮತ್ತು ೧೯೭೮–೭೯ನೇ ಇಸವಿಯಲ್ಲಿ ಮಾಡಿದಂಥ ಭಾಷಣ ಒಂದೇ ರೀತಿ ಇದೆ.

೩–೩೦ ಪಿ. ಎಂ.

ಅನೇಕ ಭರವಸೆಗಳನ್ನು ಕೊಟ್ಟಿದ್ದಾರೆ. ೧೯೭೦–೭೨ರಲ್ಲಿ ವಿಜಯನಗರ ಉಕ್ಕಿನ ಕಾರ್ಖಾನೆ, ಕೃಷ್ಣಾ ಮತ್ತು ಕಾವೇರಿಯಲ್ಲಿರತಕ್ಕ ಯೋಜನೆಗಳ ಬಗ್ಗೆ ಮತ್ತು ಅದರಲ್ಲೂ ಕಾಳಿ ನದಿ ಯೋಜನೆ ಬಗ್ಗೆ ಹೇಳಿದ್ದಾರೆ. ಆ ರೀತಿ ಹೇಳುವಾಗ ಏನು ಹೇಳಿದ್ದಾರೆಂದರೆ ಅವುಗಳನ್ನೆಲ್ಲಾ ಒಂದೆರಡು ವರ್ಷಗಳಲ್ಲಿಯೇ ಅದರಲ್ಲೂ ವಿಜನಗರ ಉಕ್ಕಿನ ಕಾರ್ಖಾನೆಯ ಅಡಿಗಲ್ಲು ಹಾಕುವಾಗ ಆಗಿನ ಪ್ರಧಾನಮಂತ್ರಿಯವರು ಏನು ಹೇಳಿದ್ದಾರೆಂದರೆ ನಾವು ಅಲ್ಲಿಯ ಬೆಳವಣಿಗೆ ಆದಷ್ಟು ಕೂಡಲೇ ಹಣವನ್ನು ಒದಗಿಸಿಕೊಡುತ್ತೇವೆ ಎನ್ನುವ ಮಾತನ್ನು ಹೇಳಿದ್ದರು. ಅದರ ಬಗ್ಗೆ ಯಾರೂ ಸಂಶಯ ಪಡುವ ಕಾರಣವಿಲ್ಲವೆಂದು ರಾಜ್ಯ ಸರ್ಕಾರದವರು ಸಮರ್ಥನೆ ಮಾಡಿಕೊಂಡು ಎರಡು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಜಮೀನು ಕೊಂಡುಕೊಂಡಿದ್ದಾರೆ. ಹಿಂದಿನ ಅರ್ಥಸಚಿವರು ಈಗ ಇಲ್ಲಿ ಇಲ್ಲ ಆದುದರಿಂದ ಅವರ ಬಗ್ಗೆ ಹೆಚ್ಚಿಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಕಾರ್ಖಾನೆ ಪ್ರಾರಂಭವಾಗುತ್ತದೆಂದು ಅದರ ಪಕ್ಕದಲ್ಲಿದ್ದ ಜಾಗವನ್ನು ಕರ್ನಾಟಕ ಯೂನಿವರ್ಸಿಟಿಯವರು ತೆಗೆದುಕೊಂಡು ಅಲ್ಲಿ ಒಂದು ಕಾಲೇಜನ್ನು ಪ್ರಾರಂಭ ಮಾಡಿದ್ದಾರೆ, ೬ ವರ್ಷಗಳಾಗುತ್ತಾ ಬಂತು ಆದರೆ ಅಲ್ಲಿ ಇನ್ನೂ ಕಾರ್ಖಾನೆ ಬರಲಿಲ್ಲ. ವಿಜಯನಗರದ ಉಕ್ಕಿನ ಕಾರ್ಖಾನೆ ಒಂದು ಇಡೀ ನಮ್ಮ ದೇಶಕ್ಕೆ ಮಹತ್ವವಾದ ಕಾರ್ಖಾನೆ ಅದರ ಮೇಲೆ ನಮ್ಮ ರಾಷ್ಟ್ರದ ರಾಜ್ಯದ ಮುಂದಿನ ಭವಿಷ್ಯದ ತಳಹದಿ ನಿಂತಿದೆ. ಅಂಥಾ ಒಂದು ಕಾರ್ಖಾನೆ ಇನ್ನೂ ವರೆಗೂ ಬರಲಿಲ್ಲ ಅದರ ಜೊತೆಗೆ ಪ್ರಾರಂಭ ಮಾಡಿದ ಸೇಲಂದು ಮಾತ್ರ ಬಂದಿದೆ. ಸೇಲಂನಲ್ಲಿ ಆಗಲೇ ಕಾರ್ಖಾನೆ ಪ್ರಾರಂಭವಾಗಿದೆ. ನಾವು ಈ ವಿಷಯದ ಬಗ್ಗೆ ಪದೇ ಪದೇ ಒತ್ತಾಯ ಮಾಡಿದಾಗ ಹಿಂದಿದ್ದ ಮಂತ್ರಿಗಳವರು, 'ನಮ್ಮಲ್ಲಿ ವಿಶ್ವಾಸವಿಡಿ' 'ವಿಶ್ವಾಸವಿಡಿ' ಎಂದು ಹೇಳುತ್ತಲೇ ಬಂದಿದ್ದಾರೆ. ಆದರೆ ಇತ್ತೀಚೆಗೆ

ನಮ್ಮ ಮುಖ್ಯಮಂತ್ರಿಗಳವರು ಮತ್ತು ಕೆಲವು ಮಂತ್ರಿಗಳು ಕೇಂದ್ರ ಸರ್ಕಾರದವರು ಇದನ್ನು ಮಾಡದೇ ಹೋದರೆ ನಾವು ಚಳುವಳಿ ಮಾಡುತ್ತೇವೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ನಾನು ಕೇಳುತ್ತೇನೆ ಈ ಚಳುವಳಿ ಮಾಡತಕ್ಕಂಥ ಬುದ್ಧಿಶಕ್ತಿ ೬ ವರ್ಷಗಳಿಂದ ಎಲ್ಲಿಗೆ ಹೋಗಿತ್ತು ? ಈ ಕಾರ್ಖಾನೆ ೬ ವರ್ಷಗಳಿಂದಲೂ ಆಗದಿದ್ದಾಗ ಆಗ ಏತಕ್ಕೆ ತೆಪ್ಪಗೆ ಬಾಯಿಮುಚ್ಚಿಕೊಂಡು ಕೂತಿದ್ದೀರಿ ? ಆಗ ಚಳುವಳಿ ಮಾಡುವ ವಿಚಾರ ಏತಕ್ಕೆ ನೀವು ಮಾಡಲಿಲ್ಲ? ಆವಾಗ ಮಾಡತಕ್ಕ ಧೈರ್ಯ ನಿಮಗೆ ಇಲ್ಲಲಿಲ್ಲ. ಯಾವುದೋ ಒಂದು ಕಾರಣದಿಂದ ಇವತ್ತು ನಮ್ಮ ರಾಜ್ಯದಲ್ಲಿ ಆ ಕಾರ್ಖಾನೆ ಬರಲಿಲ್ಲ. ೬ ವರ್ಷಗಳಿಂದ ರಾಷ್ಟ್ರದಲ್ಲಿ ಕೇಂದ್ರದ ಅನೇಕ ದೊಡ್ಡದೊಡ್ಡ ಕಾರ್ಖಾನೆಗಳು ಪ್ರಾರಂಭವಾಗಿವೆ. ಆದರೆ ನಮ್ಮಲ್ಲಿಗೆ ಮಾತ್ರ ಒಂದು ಕಾರ್ಖಾನೆ ಬರಲಿಲ್ಲ, ಅದು ಬರುತ್ತದೆ, ಇದು ಬರುತ್ತದೆ, ಟೈರ್ ಫ್ಯಾಕ್ಟರಿ ಬರುತ್ತದೆ, ಟ್ರ್ಯಾಕ್ಟರ್ ಫ್ಯಾಕ್ಟರಿ ಬರುತ್ತದೆ, ಹುಬ್ಬಳ್ಳಿ ಹತ್ತಿರ, ಬೆಂಗಳೂರು ಹತ್ತಿರ ಫ್ಯಾಕ್ಟರಿ ಬರುತ್ತದೆಂದು ಹೇಳುತ್ತಲೇ ಇದ್ದರು ಆದರೆ ಬರಲಿಲ್ಲ. ಉದ್ದಿಮೆ ದೃಷ್ಟಿಯಿಂದ ನೋಡಿದರೆ ಕೇಂದ್ರದಿಂದ ಯಾವುದೂ ಬರಲಿಲ್ಲ ರಾಜ್ಯ ಸರ್ಕಾರದಿಂದಲೂ ಯಾವ ಹೊಸ ಉದ್ದಿಮೆಗಳು ಬರಲಿಲ್ಲ.

ಇನ್ನು ಪ್ರೈವೇಟ್ ಇಂಡಸ್ಟ್ರೀಸ್ ಬಗ್ಗೆ ಹೇಳುವುದಾದರೆ ಈ ರಾಜ್ಯದಲ್ಲಿ ಕೆಲವರು ಹೊಸ ಉದ್ದಿಮೆಗಳನ್ನು ಪ್ರಾರಂಭ ಮಾಡಿದ್ದಾರೆ. ಬೆಂಗಳೂರಿನ ಹವೆ, ಬೆಂಗಳೂರಿನಲ್ಲಿರತಕ್ಕ ಸೌಕರ್ಯ, ಆಕರ್ಷಣೆ ಅಂತ ಹೇಳಿದರೆ ಆ ರೀತಿಯ ಒಂದು ಅಟ್ರ್ಯಾಕ್ಷನ್ ಇಲ್ಲಿ ಇದೆ. ಕೇಂದ್ರ ಸರ್ಕಾರದಿಂದ ಕೆಲವು ಯೋಜನೆಗಳು ಬಂದವು, ಅನ್‌ಎಂಪ್ಲಾಯ್ಡ್ ಇಂಜಿನಿಯರ್ಸ್‌ಗೆ ಅವರು ಕಾರ್ಖಾನೆಯನ್ನು ಸ್ವತಃ ಪ್ರಾರಂಭ ಮಾಡುವುದಾದರೆ ಹಣದ ಸಹಾಯ ಮಾಡುತ್ತೇವೆ ಅವರಿಗೆ ಎಲ್ಲ ರೀತಿಯ ಸೌಲಭ್ಯಗಳನ್ನು ಕೊಡುತ್ತೇವೆ, ಅವರು ಏನು ತಮ್ಮ ತಮ್ಮ ಸಾಮರ್ಥ್ಯ ಉಪಯೋಗಿಸಿ ವಸ್ತುಗಳನ್ನು ಉತ್ಪಾದನೆ ಮಾಡುತ್ತಾರೆ ಆ ವಸ್ತುಗಳನ್ನು ಸರ್ಕಾರದವರೇ ಕೊಳ್ಳತಕ್ಕ ವ್ಯವಸ್ಥೆ ಮಾಡುತ್ತೇವೆ ಅಂತ ಯೋಜನೆಯನ್ನು ಮಾಡಿದರು. ಅನೇಕ ಜನ ಆಗ ತರುಣ ಇಂಜಿನಿಯರ್‌ಗಳು ಮುಂದೆ ಬಂದು ಅಂಥಾ ಉದ್ದಿಮೆಗಳನ್ನು ಪ್ರಾರಂಭ ಮಾಡಿದ್ದಾರೆ, ಆದರೆ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ನಲ್ಲಿ ಆಗಿರತಕ್ಕ ಅನಾನುಕೂಲದ ಬಗ್ಗೆ ತಮಗೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಕೆ.ಎಸ್.ಆರ್.ಟಿ.ಸಿ.ಯವರು ಆ್ಯಕ್ಸಲರೀಸ್ ತಯಾರು ಮಾಡಲು ಸುಮಾರು ೬೦–೭೦ ಎನ್‌ಎಂಪ್ಲಾಯ್ಡ್ ಇಂಜಿನಿಯರ್ಸ್‌ಗೆ ಶೆಡ್‌ಗಳನ್ನು ಕೊಟ್ಟಿದ್ದಾರೆ. ಸರ್ಕಾರದಿಂದ ವರಿಗೆ ೧ ಲಕ್ಷ, ಎರಡು ಲಕ್ಷ, ಮೂರು ಲಕ್ಷ ರೂಪಾಯಿಗಳವರೆಗೆ ಹಣ ಸಹಾಯ ಮಾಡಿದ್ದಾರೆ. ಆ ಹಣವನ್ನು ಪಡೆದುಕೊಳ್ಳಬೇಕಾದರೆ ಆ ಎಂಟರ್‌ಪ್ರಿನರ್ಸ್‌ಗೆ ಎಷ್ಟು ಕಷ್ಟವಾಯಿತೆಂದರೆ ಅವರು ಬೆಂಗಳೂರಿಗೆ ಒಂದು ನೂರು ಸಲ ಬಂದಿದ್ದಾರೆ. ಕರ್ನಾಟಕ ಫಿನಾನ್ಸ್ ಕಾರ್ಪೋರೇಷನ್‌ನಲ್ಲಿ ಆಗಲೀ ಅಥವಾ ಇತರ ಸಂಸ್ಥೆಗಳಲ್ಲಿ ಆಗಲೀ ಅವರು ಅರ್ಜಿ ಕೊಟ್ಟು ಎರಡು ವರ್ಷಗಳಾದ ಮೇಲೆ, ಶೆಡ್‌ಗಳು ಅಲಾಟ್ ಆಗಿ, ಅವರು ಆರ್ಡರ್ ಕೊಟ್ಟಿದ್ದ ಮೆಷಿನರಿಗಳು ಬಂದು ರೈಲ್ವೇ ಸ್ಟೇಷನ್ನಿನಲ್ಲಿ ಕೊಳೆಯುತ್ತಿದ್ದರೂ ಅವರಿಗೆ ಫಿನಾನ್ಸ್ ಅಸಿಸ್ಟೆನ್ಸ್ ಸಿಗಲಿಲ್ಲ. ಅವರಿಗೆ ಫಿನಾನ್ಸ್ ಅಸಿಸ್ಟೆನ್ಸ್ ಸಿಕ್ಕ ಮೇಲೆ ಆ ಮಿಷನ್‌ಗಳು ರಿಲೀಜ್ ಗಿವೆ. ಅವರು ಬಹಳ ಕಷ್ಟಪಟ್ಟು ತಮ್ಮ ಉದ್ದಿಮೆಗಳನ್ನು ಪ್ರಾರಂಭ ಮಾಡಿಪ್ರೊಡಕ್ಷನ್ ಮಾಡಿದಮೇಲೆ ಇವತ್ತು ಕೆ.ಎಸ್.ಆರ್.ಟಿ.ಸಿ.ಯವರು ಅವರು ತಯಾರುಮಾಡಿರತಕ್ಕ ವಸ್ತುಗಳನ್ನುಒಂದನ್ನೂ ತೆಗೆದುಕೊಂಡಿಲ್ಲ. ಇದರಿಂದ ಆ ತರುಣರು ತಯಾರಿಸಿದ ವಸ್ತುಗಳನ್ನು ಯಾರು ಕೊಳ್ಳಬೇಕು? ಇದರಿಂದ ಅವರ ಗತಿ ಏನು? ಇದರಿಂದ ಅನೇಕ ಜನ ಇಂಜಿನಿಯರ್ಸ್‌ಗಳು ಲಿಕ್ವಿಡೇಷನ್ ಗೆ ಹೋಗುವ ಪರಿಸ್ಥಿತಿಗೆ ಬಂದಿದ್ದಾರೆ. ಅವರಲ್ಲಿರತಕ್ಕ ಮೆಷನರಿಗಳನ್ನು ಬ್ಯಾಂಕಿಗೆ ಅಟ್ಯಾಚ್ ಮಾಡಿರುವುದರಿಂದ ಅವುಗಳನ್ನು ಲಿಲಾವು ಮಾಡುತ್ತಿದ್ದಾರೆ. ಕೆ.ಎಸ್.ಆರ್.ಟಿ.ಸಿ.ಯವರು ಮೊದಲು ವ್ಯವಸ್ಥೆ ಮಾಡಿಕೊಂಡು ಇವತ್ತು ತೆಗೆದುಕೊಳ್ಳುವುದಿಲ್ಲವೆಂದು ಹೇಳುವುದು ಸರಿಯಿಲ್ಲ ಅದನ್ನು ಬೇರೆ ಉದ್ದಿಮೆದಾರರು ತೆಗೆದುಕೊಳ್ಳುತ್ತಾರೆಯೇ ? ಇದಕ್ಕೆ ಕಾರಣವೇನು ? ಅದಕ್ಕೆ ಕಾರಣ ಈ ಎಂಟರ್‌ಪ್ರಿನಿಯರ್ ರವರಿಂದ ಅವರಿಗೆ ಲಾಭ ಸಿಗುತ್ತಿಲ್ಲ. ದೊಡ್ಡ ದೊಡ್ಡ ಉದ್ದಿಮೆದಾರರಾದರೆ ಅವರಿಗೆ ಇವರಿಗೆ ಲಾಭ ಸಿಗುತ್ತದೆ, ಕಮೀಷನ್ ಸಿಗುತ್ತದೆ, ಅದರಿಂದ ಇವತ್ತು ಇವರು ಏನೋ ಒಂದು ನೆಪ ಹೇಳಿ ಅವರು ತಯಾರು ಮಾಡಿರತಕ್ಕ ವಸ್ತುಗಳನ್ನು ಕೊಂಡುಕೊಳ್ಳುತ್ತಿಲ್ಲ. ನಾವು ಈ ಬಗ್ಗೆ ಸರ್ಕಾರಕ್ಕೆ ಅನೇಕ ಸಲ ಒತ್ತಾಯ ಮಾಡಿದ ಮೇಲೆ ಒಂದು ಭರವಸೆ ಕೊಟ್ಟರು, ಎಲ್ಲೆಲ್ಲಿ ಕೆ.ಎಸ್‌ಆರ್.ಟಿ.ಸಿ.ಯವರು ಎಂಟರ್‌ಪ್ರಿನಿಯರ್ಸ್‌ರವರೊಂದಿಗೆ ಒಪ್ಪಂದ ಮಾಡಿಕೊಂಡಿದ್ದರೋ ಅಂಥವರ ಕಡೆಯಿಂದ ತಯಾರಾದ ವಸ್ತುಗಳನ್ನು ತೆಗೆದುಕೊಳ್ಳುವುದಕ್ಕೆ ಸಂಬಂಧಪಟ್ಟವರಿಗೆ ಹೇಳಿ ವ್ಯವಸ್ಥೆ ಮಾಡಿ ಯುವಕರಿಗೆ ಆದ ಅನ್ಯಾಯವನ್ನು ಪರಿಹಾರ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದರು. ಆ ರೀತಿ ಹೇಳಿದ್ದರೂ ಇಲ್ಲಿಯವರೆಗೆ

ಯಾವ ಪರಿಹಾರವೂ ಸಿಕ್ಕಿಲ್ಲ ಈ ರೀತಿಯಾದರೆ ನಮ್ಮ ರಾಜ್ಯದಲ್ಲಿ ಯಾವ ರೀತಿಯಲ್ಲಿ ಉದ್ದಿಮೆಗಳು ಮುಂದುವರಿಯುವುದಕ್ಕೆ ಸಾಧ್ಯವಾಗುತ್ತದೆ ? ಸರ್ಕಾರಿ ಕೆಲಸವನ್ನೆ ಅವಲಂಬನೆ ಮಾಡಿಕೊಂಡಿರಬಾರ ದೆಂದು ಹೇಳಿ ಅವರಿಗೆ ಹಣ ಸಹಾಯವನ್ನು ಕೊಟ್ಟು ಅವರಿಗೆ ಪ್ರೋತ್ಸಾಹ ಕೊಟ್ಟು ಇವತ್ತು ಅವರನ್ನು ನಡು ನೀರಿನಲ್ಲಿ ಬಿಟ್ಟಿದ್ದೀರಿ, ಇದರಿಂದ ಅವರ ಗತಿ ಏನು ಅಂತ ಕೇಳುತ್ತೇನೆ. ಅದೇ ರೀತಿ ನಮ್ಮ ರಾಜ್ಯದಲ್ಲಿರುವ ಟೆಕ್ಸ್‌ಟೈಲ್‌ಮಿಲ್‌ಗಳವರ ಗತಿಯೂ ಆಗಿದೆ ಹಾಗೂ ಶುಗರ್ ಮಿಲ್‌ಗಳ ಮತ್ತು ಪಬ್ಲಿಕ್ ಸೆಕ್ಟಾರ್ ಕಂಪನಿಗಳ ಗತಿಯಾಗಿದೆ. ಎಲ್ಲವೂ ಕೂಡ ನಿಲ್ಲತಕ್ಕ ಪರಿಸ್ಥಿತಿಗೆ ಬಂದಿದೆ. ಬೆಂಗಳೂರು ಸುತ್ತಮುತ್ತಲೂ ಬೆಂಗಳೂರು ಹವೆ ನೋಡಿ ಉದ್ದಿಮೆಗಳವರು ಬಂದರು ಆದರೆ ಸರ್ಕಾರವನ್ನು ನೋಡಿ ಬೆದರಿ ಹೋಗಿದ್ದಾರೆ, ಈ ಸರ್ಕಾರದ ವ್ಯವಸ್ಥೆಯನ್ನು ನೋಡಿ. ಈ ಉದ್ದಿಮೆಗಳ ಬೆಳವಣಿಗೆಯ ಬಗ್ಗೆ ಸರ್ಕಾರೀ ಯಂತ್ರವೇನಿದೆ ಅದು ಅತ್ಯಂತ ಮಂದಗಾಮಿಯಾಗಿದೆ, ಅವ್ಯವಸ್ಥೆಯಲ್ಲಿದೆ. ತುಂಬಾ ಲಂಚಗು ತನದಿಂದ ಕೂಡಿದೆ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಇದರ ಬಗ್ಗೆ ವಿವರಣೆಗಳನ್ನು ಕೊಡುವುದಕ್ಕೆ ತಯಾರಾಗಿದ್ದೇನೆ. ಅದೇ ಇವತ್ತು ಗುಜರಾತಿನಲ್ಲಿ ಏನು ವ್ಯವಸ್ಥೆ ಇದೆ ? ತಮಿಳುನಾಡಿನಲ್ಲಿ ಏನು ವ್ಯವಸ್ಥೆ ಇದೆ ಎಂಬುದನ್ನು ತಾವು ನೋಡಿದರೆ ಗೊತ್ತಾಗುತ್ತದೆ. ಗುಜರಾತಿನಲ್ಲಿ ಒಬ್ಬ ಅರ್ಜಿ ಕೊಟ್ಟರೆ, ಸರ್ಕಾರಿ ಅಧಿಕಾರಿಗಳೇ ಅವನ ಮನೆಯ ಬಾಗಿಲಿಗೆ ಹೋಗುತ್ತಾರೆ ಅವನ ಆರ್ಥಿಕ ಸ್ಥಿತಿಗತಿ ಗಳನ್ನು ತಿಳಿದುಕೊಳ್ಳುತ್ತಾರೆ, ಯಾವ ಉದ್ದಿಮೆ ಮಾಡಬೇಕೆಂದಿದ್ದಾರೆ ಎಂಬುದನ್ನು ತಿಳಿದುಕೊಳ್ಳು ತ್ತಾರೆ, ಅಲ್ಲಿ ಸುತ್ತಮುತ್ತಲೂ ಅವರಿಗೆ ರಾ ಮೆಟೀರಿಯಲ್ಸ್ ಸಿಗುತ್ತದೆಯೋ ಎಂಬುದನ್ನು ನೋಡಿ ಅಲ್ಲಿ ಅವರಿಗೆ ಸರಿಯಾದ ವ್ಯವಸ್ಥೆ ಇದೆಯೋ, ಅದರಿಂದ ಅವರಿಗೆ ಹುಟ್ಟುವಳಿ ಇದೆಯೋ ಎಂಬುದನ್ನೆಲ್ಲಾ ಅಭ್ಯಾಸ ಮಾಡಿ ಅವನಿಗೆ ಬೇಕಾದ ಹಣದ ಸಹಾಯ, ಲೈಸೆನ್ಸ್ ಎಲ್ಲವನ್ನೂ ಒದಗಿಸಿಕೊಡುತ್ತಾರೆ. ಅರ್ಜಿದಾರರು ಅಲ್ಲಿ ಯಾವ ಆಫೀಸಿಗೂ ಹೋಗುವುದಿಲ್ಲ ಅವರೇ ಅವನ ಮನೆಯ ಬಾಗಿಲಿಗೆ ಹೋಗು ತ್ತಾರೆ. ಆದರೆ ಸ್ವಾಮಿ ನಮ್ಮಲ್ಲಿ ಎಂಟರ್‌ಪ್ರಿನರ್ಸ್ ಡೈರೆಕ್ಟರ್‌ರವರನ್ನು ಕಾಣಬೇಕೆಂದು ಹೋದರೆ ಅವರು ಆಫೀಸಿನಲ್ಲಿಯೇ ಇರುವುದಿಲ್ಲ, ನನ್ನ ಆಣೆ......೫ ಗಂಟೆಯ ಮೇಲೆ ಆಫೀ ಸಿಗೆ ಬರುತ್ತಾರೆ, ಅವರು ಶಾಸಕರು ಹೋದರೂ ಸಿಗುವುದಿಲ್ಲ. ಈಗಿರುವವರು ಸ್ವಲ್ಪ ಪರವಾಗಿಲ್ಲ ಹಿಂದೆ ಇದ್ದವರಂತೂ ಬೆಂಗಳೂರಿನಲ್ಲಿಯೇ ಇರುತ್ತಿರಲಿಲ್ಲ, ಲಂಡನ್, ನ್ಯೂಯಾರ್ಕ್, ಕಲ್ಕತ್ತ, ಡೆಲ್ಲಿ ಮುಂತಾದ ಕಡೆಗಳಲೆಲ್ಲಾ ಸುತ್ತಿಕೊಂಡಿರುತ್ತಿದ್ದರು. ಅದು ಎಂಥಾದೋ ೯ ಕಾಂಕ್‌ಡಾರ್ ಎಂದು ಹೇಳುತ್ತಾರಲ್ಲಾ ಅದರಲ್ಲಿಯೇ ಓಡಾಡಿಕೊಂಡಿರುತ್ತಿದ್ದರು. ಅದು ಕಮಿಟಿಯ ಮುಂದೆ ಇದೆ ಅದರ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ, ಇವತ್ತು ಎಂಟರ್‌ಪ್ರಿನರ್ಸ್‌ಗೆ ಅವರ ಉದ್ದಿಮೆ ಬೆಳೆಯಬೇಕಾದರೆ ಅವರಿಗೆ ಸರಿಯಾದ ಮಾರ್ಗದರ್ಶನ ಕೊಡಬೇಕು ಇಲ್ಲದೇ ಹೋದರೆ ಹೇಗೆ ಸ್ವಾಮಿ? ಯಾವುದೇ ಎಂಟರ್‌ಪ್ರಿನರ್ಸ್‌ಗಳಿಗೂ ಒಂದು ವರ್ಷ ಅಥವಾ ಎರಡು ವರ್ಷಗಳಲ್ಲಿ ಅವರಿಗೆ ಉತ್ತರ ಸಿಕ್ಕು ವುದಿಲ್ಲ. ಯಾವುದೇ ಆಫೀಸಿಗೆ ಹೋದರೂ ಅವರು ಅಲ್ಲಿಗೆ, ಇಲ್ಲಿಗೆ ಹೋಗಿ ಎಂದು ಹೇಳುವುದು, ಫೈನಾನ್ಸ್ ಡಿಪಾರ್ಟ್‌ಮೆಂಟ್ ಕೇಳಬೇಕು, ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್ ಕೇಳಬೇಕು ಎಂದು ಕೊಕ್ಕೆ ಹಾಕುತ್ತಾರೆ. ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ಗೆ ಹೋಗಿ ಕೇಳಿದರೆ ಫೈನಾನ್ಸ್ ಬೋರ್ಡ್ ಮೀಟ್ ಆಗಬೇಕು ಎಂದು ಏನೋ ಒಂದು ಸಬೂಬು ಹೇಳುತ್ತಾರೆ. ಮಾನ್ಯ ಅಧ್ಯಕ್ಷಣಿಯವರ ಚಿರಂಜೀವಿ ಯವರು ಕೂಡ ಉದ್ಯಮದಲ್ಲಿ ಇದ್ದಾರೆ ಹಾಗೂ ಈ ಮನೆಯ ಸದಸ್ಯರಾಗಿ ಮಾನ್ಯ ಅಧ್ಯಕ್ಷಣಿಯವರಿಗೂ ಈ ಅವ್ಯವಸ್ಥೆ ಗೊತ್ತಿದೆ ಜೊತೆಗೆ ಅವರ ಚಿರಂಜೀವಿಯವರು ಯುವಕರು ಹಾಗೂ ಉತ್ಸಾಹಿ ಉದ್ಯಮಿ ಗಳು ಎಷ್ಟು ಕಷ್ಟಪಡುತ್ತಿದ್ದಾರೆಂದು ತಾಯಿಯಾದ ಅವರಿಗೆ ಗೊತ್ತಿದೆ. ಈ ಸರ್ಕಾರದ ಧೋರಣೆ ಯಾದರೂ ಏನು ಇದೆ, ಅಥವಾ ಅಧಿಕಾರಿಗಳ ಧೋರಣೆಯನ್ನು ನೋಡಿದರೆ ಏನು ಹೇಳಬೇಕೋ ಗೊತ್ತಾಗುವುದಿಲ್ಲ. ಇಂಡಸ್ಟ್ರೀಸ್‌ನ್ನು ಪೂರ್ಣವಾಗಿ ರೀವೈಟ್‌ಲೈಸ್ ಮಾಡಬೇಕು. ಯಾವುದೇ ಉದ್ಯಮಿ ಬಂದು ಅರ್ಜಿ ಕೊಟ್ಟರೂ ಅನುಮತಿ ಕೊಡತಕ್ಕಂಥ ವ್ಯವಸ್ಥೆ ಮಾಡಬೇಕಾಗುತ್ತದೆ.

ಇನ್ನು ಕೊ–ಆಪರೇಟಿವ್ ಇನ್ಸ್‌ಟಿಟ್ಯೂಷನ್ ಬಗ್ಗೆ ಹೇಳುವುದಾದರೆ ಯಾವುದರಲ್ಲೂ ಲಾಭ ಇಲ್ಲದೆ ನಿಂತು ಹೋಗುತ್ತಿವೆ. ಉದಾಹರಣೆಗೆ ಹೇಳುವುದಾದರೆ ಅದೇ ತಮಿಳುನಾಡು ಗುಜರಾತ್ ರಾಜ್ಯಗಳಲ್ಲಿ ಸುಮಾರು ೧೦ ಕೋ–ಆಪರೇಟಿವ್ ಸೆಕ್ಟಾರ್ಸ್‌ಗಳಿಗೆ ಕೇಂದ್ರದ ಅನುಮತಿ ದೊರೆತು ಅದರಲ್ಲಿ ಮೂರು ಜನ ಅಧಿಕಾರಿಗಳನ್ನು ನೇಮಕ ಮಾಡಿಕೊಂಡು ಒಬ್ಬರು ರೆವಿನ್ಯೂ. ಒಬ್ಬರು ಮೆಷಿನರಿ ಪರ್ಚೇಸ್ ಮತ್ತೊ ಬ್ಬರು ಆಡಳಿತವನ್ನು ನೋಡಿಕೊಳ್ಳುವಂತಹ ವ್ಯವಸ್ಥೆಯನ್ನು ಮಾಡಿಕೊಂಡು ಒಂದೇ ವರ್ಷದಲ್ಲಿ ಪ್ರೊಡ ಕ್ಷನ್ ಮಾಡುವ ವ್ಯವಸ್ಥೆಯನ್ನು ಮಾಡುತ್ತಿದ್ದಾರೆ. ಇದನ್ನೆಲ್ಲಾ ಮಾಡಿ ಇದನ್ನು ಕೊ–ಆಪರೇಟಿವ್ ಇನ್ಸ್‌ಟಿಟ್ಯೂಷನ್‌ಗೆ ಹಸ್ತಾಂತರ ಮಾಡಿದ್ದಾರೆ. ಇದರಿಂದ ಎಷ್ಟು ಸಮಯ ಅಪವ್ಯಯ ಹಾಗೂ

ಹಣದ ಅಪವ್ಯಯವನ್ನು ತಪ್ಪಿಸಿದಂತಾಗುತ್ತದೆ ಎಂಬುದನ್ನು ನೋಡಬೇಕು. ಆದ್ದರಿಂದ ನಮ್ಮ ರಾಜ್ಯ ಸರ್ಕಾರದ ಕೈಗಾರಿಕೆಯನ್ನು ಸಹಿತ ಆ ರೀತಿಯಲ್ಲಿ ನಡೆಯುವಂತೆ ಮಾಡಿದರೆ ನಮ್ಮ ರಾಜ್ಯಕ್ಕೆ ಎಷ್ಟೊ ಅನುಕೂಲ ಆಗುತ್ತದೆ. ನಮ್ಮ ರಾಜ್ಯದಲ್ಲಿ ಒಂದು ಕೋಆಪರೇಟಿವ್ ಸೆಕ್ಟಾರ್‌ನಲ್ಲಿ ಒಂದು ಇಂಡಸ್ಟ್ರೀಸ್ ಬರಬೇಕಾದರೆ ಅದಕ್ಕೆ ಪರ್ಮಿಷನ್ ಸಿಕ್ಕಿ ಅದು ಪ್ರಾರಂಭವಾಗಿ ಅದು ಪ್ರೊಡಕ್ಷನ್‌ಗೆ ಬರಬೇಕಾದರೆ ೧೦ ವರ್ಷಗಳು ಬೇಕಾಗುತ್ತದೆ. ಅಷ್ಟರಲ್ಲಿ ಸರ್ಕಾರ ಕೊಟ್ಟಂತಹ ಬಂಡವಾಳ ದಿವಾಳಿಯಾಗಿ ಹೋಗುತ್ತದೆಂದು ನಾನು ಹೇಳುತ್ತೇನೆ. ಆದ್ದರಿಂದ ಈ ಸರ್ಕಾರಕ್ಕೆ ಬೇರೆ ರಾಜ್ಯ ಸರ್ಕಾರಗಳ ರೀತಿ ಮನಸ್ಸಿಲ್ಲ ಹಾಗೂ ನೈತಿಕ ಸಾಮರ್ಥ್ಯವಿಲ್ಲ. ಸ್ವಾಮಿ ಇದನ್ನು ಹೇಳುವಾಗ ಭ್ರಷ್ಟಾಚಾರಿಗಳ ಬಗ್ಗೆ ಹೇಳಬೇಕಾಗುತ್ತದೆ. ಇದನ್ನು ಸಂಪೂರ್ಣವಾಗಿ ತೆಗೆಯುವುದು ಕಷ್ಟವೆಂದು ನಾವೆಲ್ಲರೂ ಒಪ್ಪುತ್ತೇವೆ. ಆದರೆ ಇದು ಎಷ್ಟು ಕಡಿಮೆ ಇರುತ್ತದೋ ಅಷ್ಟು ಒಳ್ಳೆಯದೆಂದು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಭ್ರಷ್ಟಾಚಾರ ಹೋಗಬೇಕಾದರೆ ಅಥವಾ ಕಡಿಮೆಯಾಗ ಬೇಕಾದರೆ ಯಾವ ಪಕ್ಷವೇ ಇರಲಿ, ಯಾವ ಸರ್ಕಾರವೇ ಇರಲಿ ಮೊದಲು ರಾಜಕಾರಣಿಗಳಲ್ಲಿ ಹಾಗೂ ಆಡಳಿತ ನಡೆಸತಕ್ಕಂಥ ಮಂತ್ರಿಗಳು ಹಾಗೂ ಮುಖ್ಯ ಮಂತ್ರಿಗಳು ನಿಸ್ಪೃಹರು ಇರಬೇಕು. ಅದು ಇದ್ದರೆ ಅವರ ಸರ್ಕಾರವೂ ಕೂಡ ನಿಸ್ಪೃಹವಾಗಿರುತ್ತದೆ. ಮನೆಯಲ್ಲಿ ಹಿರಿಯರು ಸರಿಯಾಗಿ ನಡೆದರೆ ಮಕ್ಕಳು ಸರಿಯಾಗಿ ನಡೆದುಕೊಳ್ಳುತ್ತಾರೆ ಹಾಗೂ ಶಾಲೆಗಳಲ್ಲಿ ಗುರುಗಳು ಸರಿಯಾಗಿ ನಡೆದುಕೊಂಡರೆ ವಿದ್ಯಾರ್ಥಿಗಳು ತಾನೆ ಸರಿಯಾಗಿ ನಡೆದುಕೊಳ್ಳುತ್ತಾರೆ. ಅದು ಆಗದ ಹೊರತು ಯಾವ ಮಟ್ಟದಲ್ಲೇ ಆಗಲಿ ಭ್ರಷ್ಟಾಚಾರ ಹೋಗುವುದಿಲ್ಲ. ಅದು ಹೋಗದ ಹೊರತು ರಾಷ್ಟ್ರಕ್ಕೆ ಆಗಲಿ. ರಾಜ್ಯಕ್ಕೆ ಆಗಲಿ ಒಳ್ಳೆಯದು ಎಂದಿಗೂ ಆಗುವುದಿಲ್ಲ. ಇನ್ನು ಯಾವುದೇ ಕೈಗಾರಿಕೆಯಾಗಲಿ ಅಥವಾ ವ್ಯವಸಾಯದಲ್ಲೇ ಆಗಲಿ ಅದು ಏಳಿಗೆಯಾಗುವುದಿಲ್ಲ. ಇವತ್ತು ಎಲ್ಲಿಯೋ ಭ್ರಷ್ಟಾಚಾರ ಹೋಗಬೇಕಾದರೆ ನಿಷ್ಠಾವಂತ ಆಡಳಿತಗಾರರು ಇರಬೇಕಾಗುತ್ತದೆ. ಅದು ಇಲ್ಲದೆ ಹೋದರೆ ಯಾವುದೇ ಬೆಳವಣಿಗೆಯಾಗುವುದಿಲ್ಲವೆಂದು ಹೇಳಬೇಕಾಗುತ್ತದೆ. ಎಷ್ಟೋ ಉದ್ಯಮಗಳು ಇದ್ದಂತಾವು ಕೂಡ ನಿಂತುಹೋಗಿವೆ. ಇನ್ನು ಚಿಕ್ಕಚಿಕ್ಕ ಉದ್ಯಮಗಳಂತೂ ನಾಶವಾಗುವ ಹಾದಿಯಲ್ಲಿ ಇದ್ದಾವೆ, ನಮ್ಮ ಇಂಡಸ್ಟ್ರೀಸ್ ಇಲಾಖೆಯನ್ನು ಸರಿಯಾಗಿ ಬಲಾವಣೆ ಮಾಡಬೇಕು ಎಂದು ಒಂದು ಸಲಹೆ ಕೊಡುತ್ತೇನೆ. ನಮ್ಮ ಕೇಂದ್ರ ಸರ್ಕಾರದ ಧೋರಣೆಯಾದರೂ ಏನು ಎಂದರೆ ದೊಡ್ಡದೊಡ್ಡ ಕೈಗಾರಿಕೆಗಳಿಗಿಂತ ಇನ್ನು ಮುಂದೆ ಚಿಕ್ಕಚಿಕ್ಕ ಕೈಗಾರಿಕೆಗಳು ಬರಬೇಕು ಅದರಲ್ಲೂ ಗ್ರಾಮಾಂತರ ಪ್ರದೇಶಗಳಲ್ಲಿ ಬರಬೇಕೆನ್ನುವುದೇ ಆಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಸಣ್ಣ ಸಣ್ಣ ಕೈಗಾರಿಕೆಗಳು ಬಂದು ಅಲ್ಲಿಯ ಜನರ ಬಡತನವನ್ನು ಮತ್ತು ನಿರುದ್ಯೋಗವನ್ನು ನಿವಾರಿಸಿದ ಹೊರತು ನಮ್ಮ ದೇಶದ ಏಳಿಗೆಯಾಗುವುದಿಲ್ಲವೆನ್ನುವುದೇ ಆಗಿರುವುದರಿಂದ ಪ್ರತಿ ಜಿಲ್ಲೆಗೂ ಒಂದೊಂದು ಉದ್ಯಮದ ಕೇಂದ್ರಗಳು ಬರಬೇಕೆಂದು ಮಾಡುತ್ತಿದ್ದಾರೆ. ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಹಾಗೂ ತಾಲ್ಲೋಕು ಮಟ್ಟದಲ್ಲಿಯೂ ಉದ್ಯಮಗಳು ಬರುವಂತಾಗಬೇಕಾದರೆ ಅಂತಹ ಒಂದು ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡಬೇಕು, ಅದನ್ನು ನಿರ್ಮಾಣ ಮಾಡಬೇಕಾದರೆ ಆಡಳಿತ ನಡೆಸತಕ್ಕಂಥ ಸರ್ಕಾರಗಳು ಸರಿಯಾದ ಪ್ರಚಾರ ಮತ್ತು ಸೌಲತ್ತುಗಳನ್ನು ಕೊಡಬೇಕು. ಪ್ರತಿ ಹಳ್ಳಿಹಳ್ಳಿಗೂ ಕೈಗಾರಿಕೆಗಳು ಬರುವಂತೆ ಉದ್ಯಮಗಳಿಗೆ ತೀವ್ರವಾದ ಸಹಾಯಗಳು ದೊರೆಯುವಂತೆ ಮಾಡಬೇಕು. ಆ ರೀತಿ ಸಹಾಯ ದೊರಕುವುದಾದರೆ ಅನೇಕ ಜನ ಯುವಕರು ಮುಂದೆ ಬರುತ್ತಾರೆಂದು ಹೇಳುವುದಕ್ಕೆ ಈ ಸಮಯದಲ್ಲಿ ಬಯಸುತ್ತೇನೆ. ಸದ್ಯದಲ್ಲಿ ಹೊಸ ಉದ್ಯಮಿಗಳು ಬರುತ್ತಾ ಇಲ್ಲ. ಈಗ ನಮ್ಮ ರಾಜ್ಯದ ಕೈಗಾರಿಕೆಯಲ್ಲಿ ಕತ್ತಲು ವಾತಾವರಣ ಉಂಟಾಗಿದೆ. ದಯವಿಟ್ಟು ಈ ಬಗ್ಗೆ ಸರ್ಕಾರ ಕೂಡಲೇ ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಮುಖ್ಯವಾಗಿ ಉದ್ಯಮಗಳಿಗೆ ಬೇಕಾಗಿರುವುದು ಪವರ್, ಅದರ ಬಗ್ಗೆ ಪ್ರಸ್ತಾಪ ಮಾಡುವುದಾದರೆ ನಮ್ಮ ಸರ್ಕಾರದ ಮಂದ ಧೋರಣೆ ಹೇಳದೆ ವಿಧಿಯಿಲ್ಲ. ನಮ್ಮ ರಾಜ್ಯದ ಸ್ಥಿತಿಯನ್ನು ಹೋಲಿಸಿ ನೋಡಿದರೆ ನೆರೆಯ ರಾಜ್ಯಗಳೆಲ್ಲಕ್ಕಿಂಥಲೂ ಹೆಚ್ಚು ಬಡತನ ಈ ಎಲೆಕ್ಟ್ರಿಸಿಟಿಯಲ್ಲಿ ಬಂದಿದೆಯೆಂದು ಹೇಳದ ವಿಧಿಯಿಲ್ಲ. ಪವರ್ ಕಟ್ ೫೫ ಪರ್ಸೆಂಟ್ ಇದೆ ಈಗ ಅದರಲ್ಲಿ ೫ ಪರ್ಸೆಂಟ್ ಕಡಿಮೆಯಾಗಿದೆ. ಮಾನ್ಯಸದಸ್ಯರಾದ ರಾಜಶೇಖರ್‌ರವರಿಗೆ ಉತ್ತರಕೊಡುತ್ತಾ ಮಾನ್ಯ ಮುಖ್ಯಮಂತ್ರಿಗಳು ಥರ್ಮಲ್ ಪ್ಲಾಂಟ್ ಬಗ್ಗೆ ಹೇಳಿದ್ದಾರೆ. ಉಳಿದ ರಾಜ್ಯಗಳು ಹಿಂದಿನ 6 ವರ್ಷಗಳಲ್ಲಿ ಏನು ಮಾಡಿದ್ದಾರೆ ಅದನ್ನು ನೋಡಿದರೆ ನಮ್ಮ ರಾಜ್ಯದ ಅಧಿಕಾರಿಗಳ ಬಗ್ಗೆ ನನಗೂ ಅಭಿಮಾನವಿದೆ ಶರಾವತಿಯನ್ನು ಕಟ್ಟಿದ್ದಾರೆ ಕಾಳಿಯನ್ನು ಕಟ್ಟುತ್ತಾ ಇದ್ದಾರೆ ನಮ್ಮಲ್ಲಿ ಬುದ್ಧಿವಂತರು ಇಲ್ಲವೆಂದು ನಾನು ಹೇಳುತ್ತಾ ಇಲ್ಲ. ಆದರೆ ಥರ್ಮಲ್ ಪ್ಲಾಂಟನ್ನು ಮಂಗಳೂರಿನಲ್ಲಿ ಮಾಡಬೇಕೆಂದು ಹೇಳುವುದನ್ನು ನೋಡಿದರೆ, ನನಗೆ ತಿಳಿದಮಟ್ಟಿಗೆ ಅದಕ್ಕೆ ಮುಖ್ಯವಾಗಿ ಬೇಕಾಗಿರುವುದು ಕಲ್ಲಿದ್ದಲು, ಕಲ್ಲಿದ್ದಲು ಸಿಕ್ಕುವ

ಪ್ರದೇಶವಾಗಿದ್ದರೆ ಅದು ಲಾಭದಾಯಕವಾಗುತ್ತಿತ್ತು. ಅದರಿಂದ ವಿದ್ಯುತ್‌ನ್ನು ಹೆಚ್ಚಿಸಬಹುದು. ಆದರೆ ಅದು ನಮಗೆ ದೊರೆಯಬೇಕಾದ ಜಾಗ ಎಂದರೆ ಆಂಧ್ರಕ್ಕೆ ಸಮೀಪದ ರಾಯಚೂರು. ಇದನ್ನು ಮೊದಲು ಪ್ರೊಪೋಸ್ ಮಾಡಿದ್ದರೆ ಚೆನ್ನಾಗಿತ್ತು. ಆದರೆ ಮಂಗಳೂರಿನಲ್ಲಿ ಮಾಡುವುದಾದರೆ ಕಲ್ಲಿದ್ದಲ್ಲನ್ನು ಮಂಗಳೂರಿಗೆ ತರಬೇಕಾದರೆ ಎಷ್ಟು ಕಾಸ್ಟ್ ಬರುತ್ತದೆ ಎನ್ನುವುದನ್ನು ನಾವು ಯೋಚನೆ ಮಾಡಬೇಕು. ಈ ರೀತಿ ಮುಂದಾಲೋಚನೆ ಇಲ್ಲದೇ ಯಾವುದೇ ಕೆಲಸವನ್ನು ಮಾಡಿದರೂ ಅದು ಲಾಭದಾಯಕವಾಗುವುದಿಲ್ಲ. ನಾವು ಮಳೆಯನ್ನೇ ಸಂಪೂರ್ಣವಾಗಿ ನಂಬುವುದಕ್ಕೆ ಸಾಧ್ಯವಿಲ್ಲ. ಥರ್ಮಲ್ ಪ್ಲಾಂಟ್ ಬರಬೇಕಾದರೆ ನಾಲ್ಕು ವರ್ಷಬೇಕಾಗುತ್ತದೆ. ಇದರಿಂದ ಹಿಂದಿನ ಆರುವರ್ಷಗಳು ಈಗಿನ ನಾಲ್ಕು ವರ್ಷಗಳು ಅನ್ಯಾಯವಾಗಿ ನಾವು ಕಳೆದುಕೊಂಡಂತಾಗಿದೆ. ಇದು ನಮ್ಮ ಸರ್ಕಾರದ ಮುಂದಾಲೋಚನೆ ಇಲ್ಲದ ಕೆಲಸವಾಗಿದೆ ಎಂದು ಹೇಳದೆ ವಿಧಿ ಇಲ್ಲ.

ಈ ರೀತಿ ಮುಂದಾಲೋಚನೆ ಇಲ್ಲದೇ ಸರ್ಕಾರವನ್ನು ನಡೆಸಿದರೆ ರಾಜ್ಯ ಮುಂದಕ್ಕೆ ಕಷ್ಟ ಪಡಬೇಕಾಗುತ್ತದೆ. ಇವತ್ತು ಈ ರಾಜ್ಯದ ಆರ್ಥಿಕ ಸ್ಥಿತಿ ಹೀನಾಯವಾದ ಸ್ಥಿತಿಗೆ ಬರತಕ್ಕಂಥ ಪರಿಸ್ಥಿತಿ ಬಂದಿದೆ. ಅದಕ್ಕಾಗಿ ನಾನು ಹೇಳುತ್ತಿದ್ದೇನೆ ಈ ರಾಜ್ಯದಲ್ಲಿ ಒಂದಲ್ಲ ೪ ಥರ್ಮಲ್ ಯೂನಿಟ್‌ಗಳನ್ನು ತೀವ್ರಗತಿಯಿಂದ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು. ಅನೇಕ ಸಲ ಈ ಮೇಜರ್ ಇರಿಗೇಷನ್ ಪ್ರಾಜೆಕ್ಟ್ ಕೆಲಸ ತಡವಾಗಿದೆ. ಈ ಬಗ್ಗೆ ಕಮಿಟಿಯ ರಿಪೋರ್ಟ್ಸ್ ಇದೆ. ಸರಿಯಾದ ರೀತಿಯಿಂದ ಟೆಂಡರ್ ಕರೆಯದೆ ಮತ್ತು ಸರಿಯಾದ ಕಂಟ್ರಾಕ್ಟರ್‌ದಾರರಿಗೆ ಕೊಡದೇ ಈ ಪ್ರಾಜೆಕ್ಟ್ ಕೆಲಸ ಒಂದು ವರ್ಷದಲ್ಲಿ ಆಗಬೇಕಾದದ್ದು ೪ ವರ್ಷವಾಗಿದೆ. ಹೀಗೆ ೪ ವರ್ಷ ಆದ್ದರಿಂದ ಬೆಲೆಗಳೆಲ್ಲ ೩ ಪಟ್ಟು ಹೆಚ್ಚಾಗಿದೆ. ಹೀಗಾಗಿ ಆ ಯೋಜನೆಗಳು ಸರಿಯಾದ ರೀತಿಯಲ್ಲಿ ಆಗಿಲ್ಲ. ಕಾಳಿ ಯೋಜನೆಯ ಬಗ್ಗೆ ಆವತ್ತು ನಾನು ಪ್ರಶ್ನೆ ಕೇಳಲಿಲ್ಲ, ಅದು ತಡವಾಗುವುದಕ್ಕೆ ಕಾರಣವೇನು? ಅದಕ್ಕೆ ಕಾರಣ ಏನು ಎಂಬುದು ಜನತೆಗೆ ಗೊತ್ತಿದೆ. Acceptance of tender was delayed by 8 months. ಆ ದಿನ ಪಿ.ಡಬ್ಲ್ಯೂ.ಡಿ. ಮಂತ್ರಿಗಳು ಒಬ್ಬರಿಗೆ ಕೊಡಬೇಕು ಎಂದು ಮನಸ್ಸುಮಾಡಿದರು. ಮಾನ್ಯ ಮುಖ್ಯ ಮಂತ್ರಿಯವರು ಮತ್ತೊಬ್ಬರಿಗೆ ಕೊಡ ಬೇಕು ಎಂದು ಮನಸ್ಸು ಮಾಡಿದರು ಇವರಿಬ್ಬರ ತಿಕ್ಕಾಟದಲ್ಲಿ ತಡವಾಯಿತು. ಹೀಗೆ ಅವರವರಿಗೆ ತಿಕ್ಕಾಟವಾಗಿ ಪವರನ್ನು ಅವರಿಂದ ಕಿತ್ತುಕೊಳ್ಳುತ್ತಾರೆ ಎಂದು ಪಿ.ಡಬ್ಲ್ಯೂ.ಡಿ ಮಂತ್ರಿಯವರಿಗೆ ಗೊತ್ತಾಯಿತು. ಅದರ ಹಿಂದಿನ ದಿವಸ ಅವರು ಬುದ್ಧಿವಂತಿಕೆಯಿಂದ ಏನು ಮಾಡಿದರು ಎಂದರೆ ಅದನ್ನು ಗೌರ್ನ್‌ಮೆಂಟ್ ಆಫ್ ಇಂಡಿಯಾ ಕನ್‌ಸರ್ನ್‌ಗೆ ಕೊಟ್ಟರು. ಈ ಒಂದು ಅಧಿಕಾರದ ಜಗಳ ಜನತೆಗೆ ಗೊತ್ತಿದೆ. ಟೆಂಡರ್ ಫೈನಲೈಸ್ ಆಗಬೇಕಾದರೆ ಪರದೆಯ ಹಿಂದೆ ನಡೆಯುತಕ್ಕಂತ ನಾಟಕಗಳು ಸಾರ್ವಜನಿಕರಿಗೆ ಗೊತ್ತು. ಈ ಒಂದು ಚದುರಂಗದಾಟದಲ್ಲಿ ೭ ತಿಂಗಳು ಕಳೆದುಹೋಯಿತು. ಆದ್ದರಿಂದ ಇವತ್ತು ಸರ್ಕಾರದ ನಿರ್ಣಯಗಳು ತ್ವರಿತವಾಗಿ ಕಾರ್ಯಗತವಾಗುತ್ತಿಲ್ಲ. ಅದಕ್ಕಾಗಿಯೇ ಕಾಳಿ ಯೋಜನೆ ತಡವಾಗಿದೆ. ಥರ್ಮಲ್ ಪ್ಲಾಂಟ್ ತಡವಾಗಿ ಬಂದಿದೆ. ಇದರಿಂದ ಕೈಗಾರಿಕೋದ್ಯಮ ಒಂದುರೀತಿಯಿಂದ ನಿಂತು ಹೋಗಿದೆ ಎಂದು ಹೇಳಿದರೆ ಅದು ತಪ್ಪಾಗುವುದಿಲ್ಲ. ಈ ಬಗ್ಗೆ ಆದಷ್ಟು ಬೇಗ ತ್ವರಿತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳುವುದಕ್ಕೆ ಬಯಸುತ್ತೇನೆ. ಈ ಕಾಳಿಯೋಜನೆಯ ಬಗ್ಗೆ ಹೇಳುವಾಗ ಒಂದು ಮಾತನ್ನು ಹೇಳದೇ ಇದ್ದರೆ ತಪ್ಪು ಮಾಡಿದಹಾಗಾಗುತ್ತದೆ. ೧೯೭೦ನೇ ಇಸವಿಯ ಬಜೆಟ್ ಪ್ರಾವಿಷನ್‌ನಲ್ಲಿ ಈ ಯೋಜನೆಗೆ ಕೇಂದ್ರ ಸರ್ಕಾರದವರು ಸಂಪೂರ್ಣವಾಗಿ ಹಣವನ್ನು ಕೊಡುವುದಕ್ಕೆ ಒಪ್ಪಿದ್ದಾರೆ ಎಂದು ಹಿಂದೆ ಅರ್ಥಮಂತ್ರಿಗಳು ಹೇಳಿದ್ದರು. ಇದರ ಬಗ್ಗೆ ಯಾರೂ ಚಿಂತೆ ಮಾಡಬೇಕಾಗಿಲ್ಲ. ಆದರೆ ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ, ಇದೆಲ್ಲಾ ರೈಟಿಂಗ್‌ನಲ್ಲಿ ಇದೆಯೇ ನೀವು ಬರೆದಿರುವುದಕ್ಕೆ ಉತ್ತರ ಬಂದಿದೆಯೇ? "ಇದಕ್ಕೆ ಬರವಣಿಗೆಯ ಅವಶ್ಯಕತೆ ಇಲ್ಲ; ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ನಡುವೆ ಇದೊಂದು ವಿರಸದ ವಾತಾವರಣ, ಇವತ್ತು ಆ ವಿರಸದ ವಾತಾವರಣ ಇಲ್ಲ, ಇವತ್ತು ಮಧುರವಾದ ವಾತಾವರಣ ಇದೆ" We have got confidence in the Central Government." ಎಂದು ಹಿಂದೆ ಅರ್ಥ ಮಂತ್ರಿಗಳು ಹೇಳಿದ್ದರು. ಆದರೆ ೩ ವರ್ಷದವರೆಗೆ ಕೇಂದ್ರದಿಂದ ಹಣ ಬರಲಿಲ್ಲ. ಕೊನೆಗೆ ರಾಜ್ಯ ಸರ್ಕಾರವೇ ಸಾಲ ತೆಗೆದುಕೊಂಡು ಈ ಯೋಜನೆಯ ಕಾರ್ಯ ಮಾಡುವುದಕ್ಕೆ ಪ್ರಯತ್ನ ಮಾಡಿತು. ಇದರಿಂದ ಆ ಯೋಜನೆ ತಡವಾಗಿದೆ. ಕಾಳಿ ಯೋಜನೆ ಪ್ರಾರಂಭವಾದದ್ದು ೧೯೬೮-೬೯ರಲ್ಲಿ. ಆಗಿನ ಸರ್ಕಾರ ಅದನ್ನು ಪ್ರಾರಂಭ ಮಾಡಿತು. ಯೋಜನೆಯ ಕೆಲಸ ಪ್ರಾರಂಭವಾದದ್ದು ೧೯೭೩-೭೪ರಲ್ಲಿ. ಹೀಗೆ ಹಂತಹಂತವಾಗಿ ಹಣದ ಕೊರತೆಯಿಂದಾಗಿ ಈ ಯೋಜನೆ ಮುಗ್ಗರಿಸುತ್ತ ನಡೆಯುತ್ತಾ ಬಂದಿದೆ. ಇದನ್ನು ನಾನು ಏತಕ್ಕೆ ಹೇಳು

ತ್ತಿದ್ದೇನೆ ಎಂದರೆ ಇವತ್ತು ಸರ್ಕಾರಕ್ಕೆ ಮುಂದಾಲೋಚನೆ ಇಲ್ಲದೆ ಸರಿಯಾದ ರೀತಿಯಲ್ಲಿ ಕೇಂದ್ರದಿಂದ ಬರತಕ್ಕಂಥ ಹಣ ಬಾರದೆ ಕಾಳಿಯೋಜನೆ ತಡವಾಗಿದೆ. ಇವತ್ತು ಕೇಂದ್ರದಲ್ಲಿ ಯಾವುದೇ ಸರ್ಕಾರ ಇರಲಿ, ನಾವು ಅವರೊಡನೆ ವ್ಯವಹರಿಸುವಾಗ ಅದೆಲ್ಲಾ ಬರಹದಲ್ಲಿ ಇದ್ದರೆ ಒಳ್ಳೆಯದು. ಆದ್ದರಿಂದ ನಾವು ಕೇಳತಕ್ಕಂಥ ಹಕ್ಕು ಬರುತ್ತದೆ. ಅದು ಇಲ್ಲದೇ ಇದ್ದುದಕ್ಕೆ ಇವತ್ತು ಕಾಳಿ ಯೋಜನೆ ತಡವಾಗಿದೆ. ಈ ಪವರ್ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಇವತ್ತಿನ ದಿವಸ ಒಕ್ಕಲುತನ, ಉದ್ದಿಮೆ, ಈ ರಾಜ್ಯದ ಒಂದು ಅಭಿವೃದ್ಧಿ ಎಲ್ಲವೂ ಸಂಪೂರ್ಣವಾಗಿ ಪವರ್ ಮೇಲೆ ಅವಲಂಬಿಸಿದೆ. ಅದನ್ನು ಎಷ್ಟೊಂದು ತ್ವರಿತವಾಗಿ ಆಚರಣೆಯಲ್ಲಿ ನಾವು ತರುತ್ತೇವೆಯೋ ಅಷ್ಟೊಂದು ತ್ವರಿತವಾಗಿ ಈ ರಾಜ್ಯ ಅಭಿವೃದ್ಧಿಯಾಗುತ್ತದೆ. ಇದರ ಬಗ್ಗೆ ಹೆಚ್ಚು ಗಮನ ಕೊಡಬೇಕು ಮತ್ತು ಹೆಚ್ಚು ಹಣವನ್ನು ಕೊಡಬೇಕು. ಅಲ್ಲದೇ ಈ ಕಾರ್ಯವನ್ನು ನಾವು ಹೆಚ್ಚು ಚುರುಕಿನಿಂದ ಮಾಡಬೇಕು. ಮಾನ್ಯ ಅರ್ಥಮಂತ್ರಿಗಳಿಗೆ ಒಂದು ಮಾತನ್ನು ಹೇಳುತ್ತೇನೆ. ತಾವು ಹಗಲುರಾತ್ರಿ ನಿದ್ದೆಗೆಟ್ಟು ಜನರ ಮೇಲೆ ಕರ ಹೇರಿ ಹಣವನ್ನು ಗಳಿಸುತ್ತೀರಿ. ಅದು......

SRI MALLUR ANANDA RAO.—Hon'ble. Finance Minister has become Poor.

SRI S.R. BOMMAI.—Poor Finance Minister is the target of attack when he levies tax. He has to receive only brickbats and not praise. ಏಕೆಂದರೆ ಅವರು ಜನಕ್ಕೆ ಟ್ಯಾಕ್ಸ್ ಹಾಕುತ್ತಾರೆ. ಅದನ್ನು ಅವರು ವಸೂಲು ಮಾಡುತ್ತಾರೆ. ಆದರೆ ಹಣವನ್ನು ಹಿಡಿತವಾಗಿ ಖರ್ಚು ಮಾಡತಕ್ಕಂಥಾದ್ದು ಅವರ ಕೈಯಲ್ಲಿ ಇಲ್ಲ. ಒಂದು ಬಜೆಟ್ಟನ್ನು ಪಾಸ್ ಮಾಡಿಬಿಟ್ಟರೆ, ಮುಗಿದು ಹೋಯಿತು ಎಂದರೆ ಆಗುವುದಿಲ್ಲ. ಬಜೆಟ್ಟು ಪಾಸ್ ಆದಮೇಲೆ ಎಲ್ಲೆಲ್ಲಿ ಹಣದ ಅಪವ್ಯಯವಾಗುತ್ತಿದೆ ಎಂಬುದನ್ನು ಅವರು ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ನೋಡಬೇಕು. ನಾನು ಏತಕ್ಕೆ ಇದನ್ನು ಹೇಳುತ್ತಿದ್ದೇನೆ ಎಂದರೆ ಇದು ಕಣ್ಣಿದ್ದೂ ಕಾಣುವುದಿಲ್ಲ. ಈ ಸಮಯದಲ್ಲಿ ಈ ವಿಚಾರ ಬಂದಿದೆ; ಆದ್ದರಿಂದ ಒಂದು ಮಾತನ್ನು ಹೇಳಿಬಿಡುತ್ತೇನೆ. ಇದರಲ್ಲಿ ಒಂದು ಹೊಸ ವಿಧಾನ ನಡೆಯುತ್ತಿದೆ. ಅದೇನೆಂದರೆ Legislature powers are curtailed. Even scrutiny of the Legislature is taken away. Scrutiny of the Finance Department is taken away. Scrutiny by A.G. is taken away. The *modus operandi* is by formation of corporations. ಸ್ವಾಮಿ, ಈ ೬ ವರ್ಷಗಳಲ್ಲಿ ಸುಮಾರು ೭೮ ಕಾರ್ಪೊರೇಷನ್‌ಗಳು ಆಗಿವೆ. ಈ ಕಾರ್ಪೊರೇಷನ್‌ಗಳಲ್ಲಿ ಸುಮಾರು ೧ ಕೋಟಿ ಬಂಡವಾಳದಿಂದ ೨೦೦ ಕೋಟಿ ರೂಪಾಯಿಗಳ ವರೆಗೆ ಬಂಡವಾಳ ಇರತಕ್ಕಂಥ ಕಾರ್ಪೊರೇಷನ್‌ಗಳೂ ಇವೆ. ಈ ಕಾರ್ಪೊರೇಷನ್‌ಗಳಿಗೆ ಹಣವನ್ನು ಸರ್ಕಾರದಿಂದಲೂ ಫೈನಾನ್ಸ್ ಇನ್ಸ್‌ಟಿಟ್ಯೂಟ್‌ನಿಂದಲೂ ಗೌರ್ನಮೆಂಟ್ ಗ್ಯಾರಂಟಿಯಿಂದ ಕೊಡುತ್ತಿದ್ದಾರೆ. ಈ ಬಗ್ಗೆ ಉದಾಹರಣೆ ಕೊಡಬೇಕೆಂದರೆ ಎಲೆಕ್ಟ್ರಿಸಿಟಿ ಬೋರ್ಡ್, ಪವರ್ ಕಾರ್ಪೊರೇಷನ್, ಕೆ.ಎಸ್.ಆರ್.ಟಿ.ಸಿ. ಹೌಸಿಂಗ್ ಬೋರ್ಡ್, ಫಾರೆಸ್ಟ್ ಇಂಡಸ್ಟ್ರೀಸ್ ಕಾರ್ಪೊರೇಷನ್, ಬ್ಯಾಕ್‌ವರ್ಡ್‌ಕ್ಲಾಸ್ ಕಾರ್ಪೊರೇಷನ್ ಈ ರೀತಿ ಎಷ್ಟೋ ಕಾರ್ಪೊರೇಷನ್‌ಗಳಾಗಿವೆ. ಅವುಗಳ ಹೆಸರುಗಳನ್ನು ಹೇಳತಕ್ಕಂಥಾದ್ದೇ ಈಗ ಕಷ್ಟವಾಗಿದೆ. ಈ ಕಾರ್ಪೊರೇಷನ್‌ಗಳಲ್ಲಿ ದುಂದುಗಾರಿಕೆಯಿಂದ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಅನೇಕ ಕಾರ್ಪೊರೇಷನ್‌ಗಳಲ್ಲಿ ಏನು ಆಗಿದೆ ಎಂದರೆ ಒಬ್ಬೊಬ್ಬ ಪಕ್ಷದ ರಾಜಕಾರಣಿಗೆ ಒಂದೊಂದು ಅಧಿಕಾರ ಸ್ಥಾನವನ್ನು ಕೊಟ್ಟಿದ್ದಾರೆ. ಅವರಿಗೆ ಅಧಿಕಾರ ಸ್ಥಾನದ ಜೊತೆಗೆ ಒಂದು ಬಂಗಲೆ, ಒಂದು ಕಾರು ಎಸ್ಟಾಬ್ಲಿಷ್‌ಮೆಂಟ್ ಕೊಟ್ಟಿದ್ದಾರೆ. ಹೀಗಾಗಿ ಅನೇಕ ಕಾರ್ಪೊರೇಷನ್‌ಗಳಿಗೆ ಕೊಟ್ಟಂಥ ಹಣ ಅವುಗಳ ಎಸ್ಟಾಬ್ಲಿಷ್‌ಮೆಂಟ್ ಮೇಲೆ ಖರ್ಚಾಗುತ್ತಿದೆ, ಹೀಗಾದರೆ ಏನೂ ಪ್ರಯೋಜನವಿಲ್ಲ. ಎಲೆಕ್ಟ್ರಿಸಿಟಿ ಬೋರ್ಡ್, ಕೆ.ಎಸ್.ಆರ್.ಟಿ.ಸಿ. ಹೌಸಿಂಗ್ ಬೋರ್ಡ್ ಇಂತಹ ದೊಡ್ಡ ಕಾರ್ಪೊರೇಷನ್‌ಗಳು ಏನಿವೆ ಇಲ್ಲಿ ಪ್ರತಿ ವರ್ಷ ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಅದರ ಸ್ಕ್ರೂಟಿನಿ, it is not under the legislature. ಬೇಕಾದಷ್ಟು ಡಿಮ್ಯಾಂಡ್‌ಗಳು ಬರುತ್ತವೆ. ಇಲ್ಲಿ ಡಿಮ್ಯಾಂಡ್‌ಗಳು ಬಂದಮೇಲೆ ಇಲ್ಲಿ ಪ್ರತಿಯೊಬ್ಬ ಸದಸ್ಯರಿಗೂ ಸರಿಯಾಗಿ ಹಣ ವ್ಯಯವಾಗಿದೆಯೋ ಇಲ್ಲವೇ ಎಂಬುದನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಇದೆ. ಹಾಗೆಯೇ It is subject to the scrutiny of the legislature. ಪಿ.ಡಬ್ಲ್ಯು.ಡಿ ಯವರು ಕೆರೆ ಕಟ್ಟುವುದಕ್ಕೆ, ರಸ್ತೆ ಮಾಡು

ವುದಕ್ಕೆ ಬೇಕಾದಷ್ಟು ಹಣ ಖರ್ಚು ಮಾಡುತ್ತಾರೆ. ಕೆ.ಎಸ್.ಆರ್.ಟಿ.ಸಿ. ಯವರು ಟೈರ್ ಖರೀದಿ ಮಾಡುವುದಕ್ಕೆ ೪ ಕೋಟಿ ರೂಪಾಯಿಗಳನ್ನು, ಬಸ್ ಕೊಂಡುಕೊಳ್ಳುವುದಕ್ಕೆ ೩೪ ಲಕ್ಷ ರೂಪಾಯಿ ಗಳನ್ನು ಖರ್ಚುಮಾಡಿದ್ದಾರೆ. ಇದನ್ನು ಕೇಳುವವರು ಯಾರು? ಇದನ್ನು ಕೇಳುವವರು ಯಾರೂ ಇಲ್ಲ. ಅದರ ಬಗ್ಗೆ ಇಲ್ಲಿ ಚರ್ಚೆಯೂ ಇಲ್ಲ. It is not subject to the scrutiny of the legislature. ಪವರ್ ಕಾರ್ಪೊರೇಷನ್‌ನವರು ಖರ್ಚು ಮಾಡತಕ್ಕಂಥಾದ್ದು, ಕೆ.ಇ.ಬಿ.ಯವರು ಖರ್ಚು ಮಾಡತಕ್ಕಂಥಾದ್ದು ಹೌಸಿಂಗ್ ಬೋರ್ಡ್‌ನವರು ಖರ್ಚು ಮಾಡತಕ್ಕಂಥಾದ್ದು ಯಾವುದಕ್ಕೂ ಸ್ಕ್ರೂಟಿನಿ ಇಲ್ಲ.ಮಾನ್ಯ ಸಭಾಪತಿಗಳು ಹೌಸಿಂಗ್ ಬೋರ್ಡ್‌ನ ಚೇರ್ಮನ್ ಆಗಿದ್ದರು. ಆಗ ಅನೇಕ ಮನೆಗಳನ್ನುಕಟ್ಟಿದ್ದಾರೆ. ಆ ಮನೆಗಳ ಫೌಂಡೇಷನ್ ಸರಿಯಿಲ್ಲವೆಂದು ಕೆಲವರು ಹೇಳಿದರು. ನಾನು ಅದರ ಬಗ್ಗೆ ತನಿಖೆ ಮಾಡಿದಾಗ ಅಲ್ಲಿ ಪಕ್ಕದಲ್ಲಿ ಪೋಲೀಸ್ ಕ್ವಾರ್ಟರ್ಸ್‌ನ್ನು ಕಟ್ಟಿದ್ದಾರೆ. ಅವುಗಳ ಫೌಂಡೇಷನ್ ಬಹಳ ಚೆನ್ನಾಗಿದೆ.

೪-೦೦ ಪಿ.ಎಂ.

ಸಮನಾದ ಭೂಮಿ ಇದೆ, ಅಲ್ಲಿ ಮನೆಗಳನ್ನು ಕಟ್ಟುವುದಕ್ಕೆ ಯಾವ ತೊಂದರೆಯೂ ಇಲ್ಲ. ಕೆಲವು ಕಡೆ ಮನೆಗಳನ್ನು ಕಟ್ಟಿದ್ದಾರೆ ಆ ಮನೆಗಳಲ್ಲಿ ವಾಸ ಮಾಡುವುದಕ್ಕೆ ಸಾಧ್ಯ ಇಲ್ಲ. ಮಹಡಿ ಮನೆ ಗಳನ್ನು ಅವುಗಳಿಗೆ ಮೆಟ್ಟಲುಗಳೇ ಇಲ್ಲ, ಕಾರ್ಪೊರೇಷನ್ ಯಾವರೀತಿ ಕೆಲಸ ಮಾಡುತ್ತಿದೆ ಎನ್ನು ವುದನ್ನು ವಿಚಾರ ಮಾಡುವವರು ಯಾರು? ಈ ಮನೆಗೆ ವಿಚಾರ ಮಾಡುವಂತ ಒಂದು ಅಧಿಕಾರ ಬೇಡವೆ? ಕಾರ್ಪೊರೇಷನ್ ಮುಖಾಂತರ ಹಣ ಖರ್ಚು ಮಾಡುವಂತಹ ಹೊಸ ವಿಧಾನ ಏನು ಇದೆ ಇಂದು ಅಪವ್ಯಯ ಮಾಡುವುದಕ್ಕೆ ದಾರಿಯಾಗಿದೆ. ೫೦ ಪರ್ಸೆಂಟ್ ಮೇಲೆ ಕಾರ್ಪೊರೇಷನ್ ಷೇರು ಬಂಡ ವಾಳ ಇದ್ದರೆ ಎ.ಜಿ.ಗೆ ಸ್ಕ್ರೂಟಿನಿಗೆ ಬರುತ್ತೆ. ೪೯ ಪರ್ಸೆಂಟ್ ಇದ್ದರೂ ಕೂಡ ಅದನ್ನು ಎ.ಜಿ. ನೋಡು ವುದಕ್ಕೆ ಆಗುವುದಿಲ್ಲ. ಪ್ರತಿ ವರ್ಷ ಆಡಿಟ್ ರಿಪೋರ್ಟ್ಸ್‌ನ್ನು ಈ ಮನೆಯ ಮುಂದೆ ತಪ್ಪದೆ ಇಡು ವಂತ ವ್ಯವಸ್ಥೆ ಮಾಡಬೇಕು. ಕಳೆದ ಆರು ವರ್ಷಗಳು ನಮ್ಮ ಅನುಭವದಲ್ಲಿ ನೋಡಿದ್ದೇವೆ. ಯಾವುದೇ ಆಡಿಟ್ ರಿಪೋರ್ಟ್ ಕೂಡ ಸಭೆಯ ಮುಂದೆ ಬಂದಿಲ್ಲ. ೫ ವರ್ಷದ ಹಿಂದಿನ ರಿಪೋರ್ಟ್ ಈಗ ಬರು ತ್ತಿದೆ. ಪ್ರತಿ ವರ್ಷ ರಿಪೋರ್ಟನ್ನು ಈ ಮನೆಯ ಮುಂದೆ ಕೊಡುವ ವ್ಯವಸ್ಥೆ ಮಾಡುತ್ತೀರಾ? ಅಪ್ ಟು ಡೇಟ ಆಡಿಟ್ ರಿಪೋರ್ಟು ಯಾವುದು ಇಲ್ಲ. ಕಾರ್ಪೊರೇಷನ್‌ಗಳಲ್ಲಿ ಚೇರ್ಮನ್‌ರಾಗಿರತಕ್ಕಂಥವರು ಚಕ್ರಾಧಿಪತಿಗಳಾಗಿದ್ದಾರೆ. ಅವನದೇ ಒಂದು ಸಾಮ್ರಾಜ್ಯ, ಅವನದೇ ಒಂದು ಆಡಳಿತ, ಅವನದೇ ಒಂದು ದರ್ಬಾರು ಪ್ರತಿಯೊಂದು ಕಾರ್ಪೊರೇಷನ್‌ಗಳಲ್ಲಿಯೂ ಕೂಡ ಇದು ನಡೆಯುತ್ತಿದೆ. ಈ ಕಾರ್ಪೊರೇಷನ್ನುಗಳ ಮೇಲೆ ಒಂದು ಹತೋಟಿ ತರುವುದಕ್ಕೆ ಮಾನ್ಯ ಅರ್ಥಮಂತ್ರಿಗಳು ಆಲೋಚನೆ ಮಾಡಬೇಕು. ಕಾರ್ಪೊರೇಷನ್ನುಗಳ ಹಣದ ಒಂದು ವ್ಯಯದ ಹತೋಟಿ ಲೆಕ್ಕಾಚಾರ ಈ ಮನೆಯ ಮುಂದೆ ಬರತಕ್ಕ ಒಂದು ವ್ಯವಸ್ಥೆಯನ್ನು ಕಂಡು ಹಿಡಿಯಬೇಕು. ಇಲ್ಲದೆ ಹೋದರೆ ತಾವು ಬಡ್ಜೆಟ್ಟಿ ನಲ್ಲಿ ಸುಮಾರು ೬೭೫ ಕೋಟಿ ರೂಪಾಯಿಗಳನ್ನು ಒದಗಿಸಿದ್ದೀರಿ ಅದರ ನಾಲ್ಕು ಪಟ್ಟು ಹಣ ಈ ಕಾರ್ಪೊರೇಷನ್ನುಗಳಿಂದ ಪೋಲಾಗುವುದಕ್ಕೆ ಅವಕಾಶವಾಗುತ್ತದೆ. ಕಾರ್ಪೊರೇಷನ್‌ಗಳ ಬಗ್ಗೆ ಒಂದು ಮಾತು ಹೇಳಿದರೆ ತಪ್ಪಾಗಲಿಕ್ಕಿಲ್ಲ, ಒಬ್ಬ ರಾಜಕೀಯ ನಾಯಕನಿಗೆ ಒಂದೊಂದು ಸ್ಥಾನಮಾನ ಕೊಡು ವುದಕ್ಕಾಗಿ, ಒಂದೊಂದು ಜಾತೀಯ ಮುಖಂಡರನ್ನು ಕೂಡಿಸಿ ಜಾತೀಯ ಆಧಾರದ ಮೇಲೆ ಒಂದು ರಾಜಕೀಯ ಪ್ರಭಾವ ಬೆಳೆಸುವ ಉದ್ದೇಶದಿಂದ ಈ ಕಾರ್ಪೊರೇಷನ್ನುಗಳನ್ನು ನಾಯಿಕೊಡೆಗಳಂತೆ ಬೆಳೆ ಸಲಿಕ್ಕೆ ಹೊರಟಿದ್ದಾರೆ. ಇವತ್ತು ಇವುಗಳ ಬಗ್ಗೆ ಕಮೀಷನ್ ಎನ್‌ಕ್ವೈರಿ ಮಾಡುತ್ತಿದೆ. ಇವತ್ತು ನೀವು ಕಾರ್ಪೊರೇಷನ್‌ಗಳನ್ನು ಮಾಡದೇ ಇದ್ದಿದ್ದರೆ ಕಮೀಷನ್ ಬರುತ್ತಾ, ಇರಲಿಲ್ಲ. ಒಂದು ಸಲಹೆ ಯನ್ನು ನಾನು ಕೊಡುತ್ತೇನೆ. ಇವತ್ತು ಈ ಕಾರ್ಪೊರೇಷನ್‌ಗಳಿಗೆ ಸಮರ್ಥರಾದಂತವರನ್ನು ಉತ್ತಮ ತಾಂತ್ರಿಕ ಜ್ಞಾನ ಉಳ್ಳವರನ್ನು ನೇಮಕ ಮಾಡಿ. ಪವರ್ ಕಾರ್ಪೊರೇಷನ್ ಇರಲಿ ಕೆ.ಇ.ಬಿ. ಇರಲಿ, ಜನಹಿತವನ್ನು ಕಾಪಾಡತಕ್ಕ ವ್ಯಕ್ತಿಗಳನ್ನು ಹಣವನ್ನು ಸದುಪಯೋಗ ಮಾಡತಕ್ಕ ವ್ಯಕ್ತಿಗಳನ್ನು ಹಾಕಿ ಯಾವುದೇ ಒಂದು ರಾಜಕೀಯ ಉದ್ದೇಶಕ್ಕಾಗಿ, ಒಂದು ಜಾತಿಯ ಆಧಾರದ ಮೇಲೆ ಮಾಡಕೂಡದು ಎಂದು ಹೇಳುತ್ತೇನೆ. ಹರಿಜನ ಗಿರಿಜನರಿಗೆ ಹಿಂದುಳಿದ ವರ್ಗದವರಿಗೆ ಮಾಡಲಿ.

ಶ್ರೀ ಎಸ್.ಎಂ ಯಾಹ್ಯಾ.—ಕಾರ್ಪೊರೇಷನ್ನುಗಳಲ್ಲಿ ರಾಜಕೀಯ ಮಾಡುತ್ತಾರೆ, ಜಾತೀಯತೆ ಮಾಡುತ್ತಾರೆ ಎನ್ನುವುದು ಸರಿಯಲ್ಲ. ಎಲ್ಲ ಕೆಲಸಗಳನ್ನು ಸರ್ಕಾರವೇ ನೋಡಿಕೊಳ್ಳುವುದಕ್ಕಾಗು ವುದಿಲ್ಲ. ಕಾರ್ಪೊರೇಷನ್‌ಗಳು ಇರಬೇಕಾಗುತ್ತದೆ.

ಶ್ರೀ ಎಸ್.ಆರ್. ಬೊಮ್ಮಾಯಿ:—ಹರಿಜನರಲ್ಲಿ ಹಿಂದುಳಿದ ವರ್ಗದಲ್ಲಿ ಒಳ್ಳೆಯ ವ್ಯಕ್ತಿಗಳು ಇದ್ದಾರೆ. ನಿಮ್ಮ ಬಾಲಬಡುಕರನ್ನು ನೇಮಿಸಬೇಡಿ ಎಂದು ಹೇಳುತ್ತೇನೆ. ಅನುಭವ ವ್ಯಕ್ತಿಗಳು ಜ್ಞಾನ ಇದ್ದ ವ್ಯಕ್ತಿಗಳನ್ನು ನೇಮಿಸಿ.

ಶ್ರೀ ಕೆ. ಭಾಸ್ಕರ ನಾಯುಡು:—ಮಿನು ಮಸಾನಿ ಕಮೀಷನನ್ನು ಕೇಂದ್ರದವರು ನೇಮಕ ಮಾಡಿದ್ದಾರೆ.

ಶ್ರೀ ಹೆಚ್.ಡಿ. ದೇವೇಗೌಡ:—ಮಿನು ಮಸಾನಿ ಕಮೀಷನ್ ದುಡ್ಡು ಹೊಡೆಯುವ ಕಮೀಷನ್ ಅಲ್ಲ.

ಶ್ರೀ ಎಸ್.ಎಂ. ಯಾಹ್ಯಾ:—ಮೂರು ತಿಂಗಳಾದರೂ ಅವರಿಗೆ ಚೇಂಬರ್ ಕೊಟ್ಟಿಲ್ಲ, ಸ್ಟೆನೋ ಇಲ್ಲ.

ಶ್ರೀ ಹೆಚ್.ಡಿ. ದೇವೇಗೌಡ.—೩೦ ವರ್ಷದಿಂದ ಮಾಡದೇ ಇದ್ದುದನ್ನು ೩ ತಿಂಗಳಲ್ಲಿ ಮಾಡಿದ್ದಾರೆ,

ಶ್ರೀ ಎಸ್.ಎಂ. ಯಾಹ್ಯಾ:—ಚೆನ್ನಾಗಿ ಕೆಲಸ ಮಾಡಿಲ್ಲ ಅಂತ ಹೇಳಿ ನಾನು ಒಪ್ಪುತ್ತೇನೆ. ಏನು ಕೆಲಸ ಮಾಡಿಲ್ಲ ಅಂತ ಹೇಳೋದು ಬೇಡ.

ಶ್ರೀ ಎಸ್.ಆರ್. ಬೊಮ್ಮಾಯಿ:—ನಿಮ್ಮ ಸರ್ಕಾರದಲ್ಲಿ ಟೆಂಪರೆನ್ಸ್ ಕಮಿಟಿಗೇ ೬ ವರ್ಷ ಅದ ಮೇಲೆ ಕಛೇರಿ ಕೊಟ್ಟಿದ್ದೀರಿ. ಕಮೀಷನ್ ಚೆನ್ನಾಗಿ ಕೆಲಸ ಮಾಡಬೇಕು. ಅದನ್ನು ನಾನು ಒಪ್ಪುತ್ತೇನೆ. ಕಾರ್ಪೊರೇಷನ್‌ಗಳ ಹಣಕಾಸಿನ ವ್ಯವಹಾರದಲ್ಲಿ ಹತೋಟಿ ತರುವುದು ಒಳ್ಳೆಯದೆಂದು ಹೇಳುತ್ತೇನೆ.

ಈಗ ಫಾರೆಸ್ಟ್ ಡಿಪಾರ್ಟ್‌ಮೆಂಟಿನಲ್ಲಿ ಎಷ್ಟು ಕಾರ್ಪೊರೇಷನ್‌ಗಳು ಇವೆ. ಫಾರೆಸ್ಟ್ ಕಾರ್ಪೊರೇಷನ್, ಫಾರೆಸ್ಟ್ ಇಂಡಸ್ಟ್ರೀಸ್ ಕಾರ್ಪೊರೇಷನ್, ಪ್ಲಾಂಟೇಷನ್ ಕಾರ್ಪೊರೇಷನ್, ಇವುಗಳ ಅವಶ್ಯಕತೆ ಇದೆಯೆ? ಮೂರು ಕಾರ್ಪೊರೇಷನ್‌ಗೂ ಮೂರು ತರಹ ಎಕ್ಸ್‌ಪೆಂಡಿಚರ್ ಇದು ಏನು ಇದು ಎಂದು ನಾನು ಕೇಳುತ್ತೇನೆ. ಇನ್ನು ಫುಡ್ ಡಿಪಾರ್ಟ್‌ಮೆಂಟಿನ ವಿಚಾರ ಹೇಳುವುದಾದರೆ, ಫುಡ್ ಡಿಪಾರ್ಟ್‌ಮೆಂಟ್ ಒಂದು, ಸೀಡ್ ಕಾರ್ಪೊರೇಷನ್, ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್, ತಲೆಗೆ ಒಂದೊಂದು ಕಾರ್ಪೊರೇಷನ್ ಮಾಡುತ್ತಿದ್ದಾರೆ ಅದು ಸರಿಯಲ್ಲ. ಇವೊತ್ತು ಒಂದೊಂದು ಡಿಪಾರ್ಟ್‌ಮೆಂಟಿನಲ್ಲಿ ಎಷ್ಟೆಷ್ಟು ಕಾರ್ಪೊರೇಷನ್‌ಗಳಿವೆ ಎಂದು ನಾನು ಫೈನಾನ್ಸ್ ಮಿನಿಸ್ಟರನ್ನು ಕೇಳಬೇಕಾಗಿದೆ, ಈ ತರಹದ ಮಲ್ಟಿಪಲ್ ಕಾರ್ಪೊರೇಷನ್‌ಗಳ ಉದ್ದೇಶ ಏನು? ಈ ಒಂದು ಕಾರ್ಪೊರೇಷನ್‌ಗಳ ಬಂಡವಾಳ ಏನು? ಅದರ ಎಸ್ಟಾಬ್ಲಿಷ್‌ಮೆಂಟ್ ಖರ್ಚು ಏನು? ಇವೊತ್ತು ಒಂದು ಕಾರ್ಪೊರೇಷನ್‌ಗೆ ಬಂಡವಾಳವಾಗಿ ೨೦–೩೦ ಲಕ್ಷ ರೂಪಾಯಿ ಕೊಟ್ಟರೆ ಅದರ ಎಸ್ಟಾಬ್ಲಿಷ್‌ಮೆಂಟ್ ಖರ್ಚಿಗೆ ಸುಮಾರು ೧೫ಲಕ್ಷ ರೂಪಾಯಿ ಖರ್ಚಾಗುತ್ತದೆ, ಇದು ಸರಿಯೇ? ಇನ್ನು ಬ್ಯಾಕ್‌ವರ್ಡ್ ಕ್ಲಾಸ್ ಕಾರ್ಪೊರೇಷನ್ ಮಾಡಿದ್ದೀರಿ ಅದನ್ನು ನಾನು ಒಪ್ಪುತ್ತೇನೆ ಅದಕ್ಕೆ ತಾವು ಸರಿಯಾದ ಬಂಡವಾಳ ಕೊಡಬೇಕು. ಕಾರ್ಪೊರೇಷನ್ ಹೆಸರಿನಲ್ಲಿ ೫೦ ಲಕ್ಷ ರೂಪಾಯಿ ಕೊಟ್ಟು ೩೦ಲಕ್ಷ ರೂಪಾಯಿ ಎಸ್ಟಾಬ್ಲಿಷ್‌ಮೆಂಟ್‌ಗೆ ಖರ್ಚು ಮಾಡಿದರೆ ಆ ಒಂದು ಕಾರ್ಪೊರೇಷನ್‌ನಲ್ಲಿ ಏನು ಮಾಡಲಿಕ್ಕೆ ಸಾಧ್ಯವಾಗುತ್ತದೆ ಎಂದು ಕೇಳುತ್ತೇನೆ. ಈಗ ಏನಾಗಿದೆ ಎಂದರೆ ಕಾರ್ಪೊರೇಷನ್‌ಗಳಿಗೆ ಬಂಡವಾಳ ಕಡಿಮೆ ಕೊಟ್ಟು ಸ್ಪಷ್ಟವಾಗಿ ರಾಜಕೀಯ ಜನಾಂಗಕ್ಕೆ ಮಾಯಾ ಬಜಾರ್ ಮಾಡಿ ಮತ ತೆಗೆದುಕೊಳ್ಳುವ ಉದ್ದೇಶದಿಂದ ಮಾಡಿದ್ದೀರಿ ಎಂದು ಅರ್ಥವಾಗುತ್ತದೆ. ಈಗ ಮಾಡಿರತಕ್ಕಂತಹ ಮಲ್ಟಿ ಕಾರ್ಪೊರೇಷನ್‌ಗಳನ್ನೆಲ್ಲಾ ತೆಗೆದು ಹಾಕಿ ಒಂದೇ ಕಾರ್ಪೊರೇಷನ್ ಮಾಡಿ ಅದಕ್ಕೆ ಸಾಕಷ್ಟು ಹಣ ಒದಗಿಸಿ ಸರಿಯಾದ ರೀತಿಯಲ್ಲಿ ವಿನಿಯೋಗಿಸಿದರೆ ಅನುಕೂಲವಾಗುತ್ತದೆ. ಇನ್ನು ಉಣ್ಣೆ ಕಾರ್ಪೊರೇಷನ್ ಎಂದು ಮಾಡಿದ್ದೀರಿ ಅದು ಎಷ್ಟೋ ವರ್ಷಗಳಾಗಿದೆ ಅದಕ್ಕೆ ಬಿಡ್ಡಿಗಟ್ಟೇ ಇಲ್ಲ, ಅಲ್ಲಿಯು ಚೇರಮನ್‌ಗೆ ಓಡಾಡಲಿಕ್ಕೆ ಒಂದು ಕಾರು ಮತ್ತೆ ಅವರ ಎಸ್ಟಾಬ್ಲಿಷ್‌ಮೆಂಟ್‌ಗೆ ಹಣ ಅಷ್ಟು ಇದ್ದರೆ ಸಾಕು.

ಶ್ರೀ ಪಿ. ರಾಮದೇವ್.—ಈಗ ಬೆಗ್ಗರ್ಸ್ ಬಗ್ಗೆ ಒಂದು ಕಮಿಟಿ ಮಾಡಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದರ ಬಗ್ಗೆ ಟ್ಯಾಕ್ಸ್ ಕಲೆಕ್ಷನ್ ಆಗುತ್ತಾ ಇದೆ. ಈಗ ಇರತಕ್ಕಂತಹ ೬೮ ಕಾರ್ಪೊರೇಷನ್‌ಗಳಲ್ಲಿ ಅನೇಕ ಕಾರ್ಪೊರೇಷನ್‌ಗಳು ಅನಾವಶ್ಯಕ ಇವೆ. ಈಗ ಅಭಿವೃದ್ಧಿ ದೃಷ್ಟಿಯಿಂದ ಯಾವ ಕಾರ್ಪೊರೇಷನ್‌ಗಳ ಅವಶ್ಯಕತೆ ಇದೆ, ಅವುಗಳಿಗೆ ಸಾಕಷ್ಟು ಹಣ ಕೊಟ್ಟು

ಆ ಹಣವನ್ನು ಸರಿಯಾಗಿ ಉಪಯೋಗ ಮಾಡಲಿಕ್ಕೆ ವ್ಯವಸ್ಥೆ ಮಾಡಿ ಅದರ ಒಂದು ಸ್ಕ್ರೂಟಿನಿ ಈ ಮನೆಯು ಮುಂದೆ ಬರುವುದಕ್ಕೆ ಒಂದು ವ್ಯವಸ್ಥೆ ಮಾಡಿ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ, ಇನ್ನು ತಾಲ್ಲೂಕು ಬೋರ್ಡ್ ಚುನಾವಣೆ ಮೊನ್ನೆ ತಾನೆ ನಡೆದಿದ್ದು ತಮ್ಮ ಪಕ್ಷ ಪ್ರಚಂಡ ಬಹುಮತದಿಂದ ಗೆದ್ದು ಬಂದಿದೆ. ಜನತೆ ತಮಗೆ ಮತ ಕೊಟ್ಟು ಗೆಲ್ಲಿಸಿದ್ದಾರೆ. ತಾವು ಅಧಿಕಾರಕ್ಕೆ ಬಂದಿದ್ದೀರಿ. ಅದನ್ನು ನಾವು ಒಪ್ಪಿಕೊಂಡಿದ್ದೇವೆ. ಇವೊತ್ತು ತಾಲ್ಲೂಕು ಬೋರ್ಡ್ ಪರಿಸ್ಥಿತಿ ಏನು, ಎಂದರೆ ಒಂದು ತಾಲ್ಲೂಕಿನ ಇನ್‌ಕಂ ಸುಮಾರು ೫ ಲಕ್ಷ ರೂಪಾಯಿ ಬರಬಹುದು ಅಥವಾ ಕೆಲವು ಕಡೆಗಳಲ್ಲಿ ಮೂರು ನಾಲ್ಕು ಲಕ್ಷ ರೂಪಾಯಿಗಳು ಬರಬಹುದು. ಅಲ್ಲಿಯು ಒಬ್ಬ ಬಿ.ಡಿ.ಓ. ಇರುತ್ತಾರೆ, ಒಂದು ಜೀಪು ಇರುತ್ತದೆ, ಅದಕ್ಕೆ ಒಬ್ಬ ಡ್ರೈವರ್, ಒಬ್ಬ ಅಗ್ರಿಕಲ್ಚರ್ ಎಕ್ಸ್‌ಟೆನ್‌ಷನ್ ಆಫೀಸರ್, ಒಬ್ಬ ಸೋಷಿಯಲ್ ವೆಲ್‌ಫೇರ್ ಎಕ್ಸ್‌ಟೆನ್‌ಷನ್ ಆಫೀಸರ್ ಮತ್ತೆ ಕ್ಲರಿಕಲ್ ಸ್ಟ್ಯಾಫ್, ಇವರೆಲ್ಲರ ಖರ್ಚು ಲೆಕ್ಕ ಹಾಕಿದರೆ ಬಂದ ಉತ್ಪನ್ನ ಎಸ್ಟಾಬ್ಲಿಷ್‌ಮೆಂಟಿಗೆ ಹೋಗುತ್ತದೆ. ಈ ರೀತಿಯಾದರೆ ತಾಲ್ಲೂಕು ಬೋರ್ಡಿನವರು ಮಾಡತಕ್ಕ ಅಭಿವೃದ್ಧಿ ಕಾರ್ಯ ಏನು? ತಾಲ್ಲೂಕು ಬೋರ್ಡುಗಳಲ್ಲಿ ಒಂದು ರೋಡ್ ರಿಪೇರಿ ಮಾಡಲಿಕ್ಕೂ ಕೂಡ ಹಣ ಇರುವುದಿಲ್ಲ. ಅಲ್ಲಿ ಮೂರು ಡಿವಿಜನ್‌ಗಳು ಇರುತ್ತವೆ ಒಂದೊಂದು ಡಿವಿಜನ್‌ಗೂ ೫ ಸಾವಿರ, ೩ ಸಾವಿರ, ೨ ಸಾವಿರ ರೂಪಾಯಿಯಂತೆ ಕೊಡುತ್ತಾರೆ. ಇದರಿಂದ ಏನು ಕೆಲಸ ಮಾಡಲಿಕ್ಕೆ ಸಾಧ್ಯವಾಗುತ್ತದೆ ಇವೊತ್ತು ತಾಲ್ಲೂಕು ಬೋರ್ಡ್ ಎಲೆಕ್ಷನ್ನಿಗೆ ಏನು ಹಣ ಖರ್ಚು ಮಾಡಿದ್ದಾರೆ ಅದೇ ಹಣವನ್ನು ತಾಲ್ಲೂಕಿನ ಅಭಿವೃದ್ಧಿ ಕಾರ್ಯಗಳಿಗೆ ಹಾಕಿದ್ದರೆ ಎಷ್ಟೋ ಅನುಕೂಲವಾಗುತ್ತಿತ್ತು, ಇನ್ನು ಜಿಲ್ಲಾ ಬೋರ್ಡ್‌ನಲ್ಲೂ ಕೂಡ ಏನು ತಾನೆ ಅಧಿಕಾರ ಇದೆ. ಆರು ದಿವಸಗಳ ಹಿಂದೆ ಈ ಡಿಸೆಂಟ್ರಲೈಸೇಷನ್ ಆಫ್ ಪವರ್ ಆಗಬೇಕು, ಗ್ರಾಮಗಳ ಅಭಿವೃದ್ಧಿಯಾಗಬೇಕು ಎಂದು ಅನೇಕ ರಾಜ್ಯಗಳಲ್ಲಿ ಜಿಲ್ಲಾ ಪರಿಷತ್ತು ಮತ್ತು ತಾಲ್ಲೂಕುಬೋರ್ಡ್ ವ್ಯವಸ್ಥೆ ಮಾಡಿದೆ. ಇವೊತ್ತು ಗುಜರಾತಿನಲ್ಲಿ ಆಗಿದೆ, ಮಹಾರಾಷ್ಟ್ರದಲ್ಲಿ ಆಗಿದೆ, ಆಂದ್ರದಲ್ಲಿ ಆಗಿದೆ. ಈ ರಾಜ್ಯದಲ್ಲಿ ಅಂತಹ ಒಂದು ಬಿಲ್ಲು ತಯಾರಿಸಲಿಕ್ಕೆ ಮಾನ್ಯ ಕೊಂಡಜ್ಜಿ ಬಸಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿದ್ದರು, ಅದರ ಬಗ್ಗೆ ಒಂದು ಬಿಲ್ಲು ಕೂಡ ಆಗಿತ್ತು. ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒತ್ತಾಯ ಮಾಡುವುದು ಏನೆಂದರೆ ನಿಜವಾಗಿಯೂ ಗ್ರಾಮಗಳ ಅಭಿವೃದ್ಧಿಯಾಗಬೇಕಾಗಿದ್ದರೆ, ಜಿಲ್ಲಾ ಪರಿಷತ್ತು ಮತ್ತು ತಾಲ್ಲೂಕು ಬೋರ್ಡ್ ಮಂಡಲಿಗಳಿಗೆ ಹೆಚ್ಚಿನ ಹಣ ಮತ್ತು ಹೆಚ್ಚಿನ ಅಧಿಕಾರ ಕೊಡಬೇಕು. ಮಹಾರಾಷ್ಟ್ರ ಮತ್ತು ಗುಜರಾತಿನಲ್ಲಿ ಜಿಲ್ಲಾ ಪರಿಷತ್ತು ನೇರವಾಗಿ ಅಧ್ಯಕ್ಷರನ್ನು ಚುನಾವಣೆ ಮಾಡುತ್ತಾರೆ, ಆ ಜಿಲ್ಲೆಯೊಳಗಿನ ಒಂದು ಕೋಟಿ ರೂಪಾಯಿಗಳ ಯೋಜನೆಯನ್ನು, ಜಿಲ್ಲಾ ಅಭಿವೃದ್ಧಿ ಮಂಡಲಿಯವರು ಸಂಪೂರ್ಣ ಅಧಿಕಾರ ಹೊಂದಿ, ಆ ಯೋಜನೆಗಳನ್ನು ಕಾರ್ಯಗತ ಮಾಡುತ್ತಾರೆ. ಸುಮಾರು ಹತ್ತು ಲಕ್ಷ ರೂಪಾಯಿಗಳವರೆಗಿನ ಯೋಜನೆಗಳನ್ನು ತಾಲ್ಲೂಕು ಬೋರ್ಡಿನವರೆ ಕಾರ್ಯಗತ ಮಾಡುತ್ತಾರೆ. ಸರ್ವೆಸಾಧಾರಣವಾಗಿ ಜಿಲ್ಲೆಯೊಳಗಿನ ಕೆಲಸಗಳು, ಅಂದರೆ ರಸ್ತೆ ಕೆಲಸವಾಗಲಿ, ಒಂದು ಸೇತುವೆ ಕೆಲಸವಾಗಲಿ, ಒಂದು ಶಾಲೆ ಕಟ್ಟತಕ್ಕ ಕೆಲಸವಾಗಲಿ, ಚಿಕ್ಕಪುಟ್ಟ ನೀರಾವರಿ ಕೆಲಸವಾಗಲಿ, ಕುಡಿಯುವ ನೀರಿನ ಯೋಜನೆಗಳಾಗಲಿ, ಅವುಗಳನ್ನೆಲ್ಲಾ ಜಿಲ್ಲಾ ಅಭಿವೃದ್ಧಿ ಮಂಡಲಿಯವರೇ ಮಾಡುತ್ತಿದ್ದಾರೆ. ಇದರಿಂದ ಏನು ಲಾಭ ಇದೆ ಎಂದರೆ ಪ್ರತಿಯೊಂದು ಕೆಲಸಕ್ಕೂ ಬೆಂಗಳೂರಿಗೆ ಬಂದು ಮಂತ್ರಿಗಳನ್ನು ಕಾಯಬೇಕಾಗಿಲ್ಲ. ಇವೊತ್ತು ಒಂದು ಸ್ಕೂಲ್ ಬಿಲ್ಡಿಂಗ್ ರಿಪೇರಿ ಆಗಬೇಕು ಎಂದರೆ ಎಷ್ಟು ಕಷ್ಟ ಇದೆ, ಇಲ್ಲಿ ಹಣ ಇರುವುದಿಲ್ಲ, ಅಲ್ಲಿ ರಿಪೇರಿ ಆಗುವುದಿಲ್ಲ. ಆದುದರಿಂದ ಈ ಅಧಿಕಾರವನ್ನು ವಿಕೇಂದ್ರೀಕರಣ ಮಾಡತಕ್ಕ ಒಂದು ಬಿಲ್ಲನ್ನು ಕೂಡಲೇ ತೆಗೆದುಕೊಂಡು ಬನ್ನಿ ಎಂದು ಹೇಳುತ್ತೇನೆ.

SRI K. BHASKAR NAIDU.—I want to know what is meant be decentralisation of powers; whether he whants the Taluk Board or not?

SRI S.R. BOMMAI. There should be three tier system. The members of the Taluk Boards shall also be the members of the Zilla Parishats. The Presidents of the Zilla Parishat will be elected directlp by the members. ಇವೊತ್ತು ನಮ್ಮಲ್ಲಿ ಒಂದು ಸಣ್ಣ ಬ್ರಿಡ್ಜ್ ಕೆಲಸ ಮಾಡಬೇಕಾದರೂ ಇಲ್ಲಿಗೆ ತರಬೇಕು, ಒಂದು ಲಕ್ಷಕ್ಕೆ ಮೇಲ್ಪಟ್ಟು ಖರ್ಚು ಮಾಡಲಿಕ್ಕೆ ಚೀಫ್ ಇಂಜಿನಿಯರ್‌ಗೂ ಪವರ್ ಇಲ್ಲ. ಅದೇ ಆಂದ್ರ ಮಹಾರಾಷ್ಟ್ರ, ಗುಜರಾತ್‌ಗಳಲ್ಲಿ ಇಂತಹ ಯೋಜನೆಗಳನ್ನು ಮಾಡತಕ್ಕಂತಾದ್ದಕೆ ಹಣ ಖರ್ಚು ಮಾಡಲಿಕೆ ಜಿಲ್ಲಾ ಪರಿಷತ್ತಿನವರಿಗೆ ಅಧಿಕಾರ ಇದೆ, ಅದೇ ರೀತಿ ಚುನಾಯಿತ ಪ್ರತಿನಿಧಿಗಳು ಕೆಲಸ ಮಾಡಲಿಕ್ಕೆ

ಹೆಚ್ಚಿನ ಹಣ ಮತ್ತು ಅಧಿಕಾರವನ್ನು ಕೊಡಬೇಕು. ಈಗ ಏನಾಗಿದೆ ಎಂದರೆ ತಮ್ಮ ಮಂತ ಕ್ಷೇತ್ರದಲ್ಲಿ ಒಂದು ಕೆಲಸ ಆಗಬೇಕು ಎಂದರೆ ಅಲ್ಲಿ ಜೂನಿಯರ್ ಇಂಜಿನಿಯರ್ ನಿಂದ ಹಿಡಿದು ಚೀಫ್ ಇಂಜಿನಿಯರ್ ವರೆಗೆ ಬಂದು ನಂತರ ಮಂತ್ರಿಗಳವರೆಗೆ ಬಂದು ಹೋಗಬೇಕು. ಇದರಿಂದ ಕಾಲ ವ್ಯಯವಾಗಿ ಅಭಿವೃದ್ಧಿ ಕಾರ್ಯ ಚುರುಕಿನಿಂದ ಆಗುವುದಿಲ್ಲ. ಇದನ್ನು ಇವರು ಏತಕ್ಕೆ ತರುತ್ತಾ ಇಲ್ಲ ಎಂದರೆ ಇದರಲ್ಲಿ ಒಂದು ಸ್ವಾರ್ಥ ಇದೆ, ಅದೇನೆಂದರೆ, ಅಧಿಕಾರ ವಿಕೇಂದ್ರಿಕರಣವಾದರೆ, ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಮಂತ್ರಿಗಳಿಗಿಂಥ ಹೆಚ್ಚಿನ ಅಧಿಕಾರ ಪಡೆಯುತ್ತಾರೆ.

ಈ ವಿಚಾರದಲ್ಲಿ ಜನತೆ ಪದೇ ಪದೇ ಮಂತ್ರಿಗಳ ಹತ್ತಿರ ಬರುವ ಅವಶ್ಯಕತೆ ಇಲ್ಲ. ಅವರು ಬೆಂಗಳೂರಿಗೆ ಯಾತ್ರೆ ಮಾಡುವ ಅವಶ್ಯಕತೆ ಇಲ್ಲ. ಜನತೆ ತಮ್ಮ ಜಿಲ್ಲೆಯ ಅಭಿವೃದ್ಧಿ ಕಾರ್ಯಕ್ರಮವನ್ನು ತಾವೇ ಹಾಕಿಕೊಳ್ಳುತ್ತಾರೆ. ಇವತ್ತು ಏನಾಗಿದೆ ಎಂದರೆ ಯಾವ ಜಿಲ್ಲೆಯಲ್ಲಿ ರಾಜಕೀಯ ಒತ್ತಡ ಹೆಚ್ಚಾಗಿ ಬರುತ್ತದೆ ಅಲ್ಲಿ ಹೆಚ್ಚು ಅಭಿವೃದ್ಧಿ ಕಾರ್ಯಕ್ರಮಗಳು ನಡೆಯುತ್ತಿವೆ, ಎಲ್ಲಿ ರಾಜಕೀಯ ಒತ್ತಡ ಜಾಸ್ತಿ ಬರುವುದಿಲ್ಲ ಅಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ. ನಾನು ಹೇಳುವುದೇನೆಂದರೆ ಈ ಹಳ್ಳಿಗಳ ಸಮಾನಾಂತರ ಅಭಿವೃದ್ಧಿ ಆಗಬೇಕು. ಇದಾಗಬೇಕಾದರೆ ಅಧಿಕಾರ ವಿಕೇಂದ್ರಿಕರಣ ಆಗಲೇಬೇಕು. ಆದರೆ ಈ ಅಧಿಕಾರ ವಿಕೇಂದ್ರಿಕರಣ ಆಗದಂತೆ ಕೆಲವು ಅಧಿಕಾರಿಗಳು ಅಡ್ಡ ಬರುತ್ತಿದ್ದಾರೆ. ಈ ಅಧಿಕಾರ ವಿಕೇಂದ್ರಿಕರಣ ನೀತಿಯನ್ನು ತರಬಾರದೆಂದಿದ್ದಾರೆ. ಇದು ಅಂಡರ್‌ಗ್ರೌಂಡ್ ಸೆಲ್‌ನೊಳಗೆ ಹೋಗಿದೆ. ಇದನ್ನು ದಯವಿಟ್ಟು. ತಪ್ಪಿಸಿ. ಅಧಿಕಾರವನ್ನು ವಿಕೇಂದ್ರೀಕರಣ ಮಾಡಬೇಕು.

ಶ್ರೀ ಎಸ್. ಎಂ. ಯಾಹ್ಯ.—ಈ ಅಧಿಕಾರ ವಿಕೇಂದ್ರಿಕರಣ ಮಾಡುವ ಕೆಲಸ ಬಹಳ ತೊಡಕಾಗಿದೆ. ಇದು ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಇದೆ. ನಮ್ಮಲ್ಲೂ ಸಹ ತಾಲ್ಲೂಕ್ ಬೋರ್ಡ್ ಲೆವೆಲ್‌ನಲ್ಲಿ ಒಂದು ರೀತಿಯ ಅಧಿಕಾರ ವಿಕೇಂದ್ರಿಕರಣವಾಗಿದೆ. ಇದನ್ನು ವಿವಿಧ ರೀತಿಯಲ್ಲಿ ಮಾಡಬಹುದು. ಹೀಗೆ ಮಾಡಬೇಕೆಂದು ಏನೂ ಇಲ್ಲ. ಆದರೆ ಈ ಅಧಿಕಾರ ವಿಕೇಂದ್ರಿಕರಣ ಮಾಡುವಾಗ ಪಂಚಾಯಿತಿ ಲೆವಲ್‌ನಲ್ಲಿ, ತಾಲ್ಲೂಕ್ ಬೋರ್ಡ್ ಲೆವೆಲ್‌ನಲ್ಲಿ, ಡಿಸ್ಟ್ರಿಕ್ಟ್ ಲೆವೆಲ್‌ನಲ್ಲಿ, ಸ್ಟೇಟ್ ಲೆವೆಲ್‌ನಲ್ಲಿ ಸೆಂಟ್ರಲ್ ಲೆವಲ್‌ನಲ್ಲಿ ಮಾಡಬೇಕು. ಯಾವ ಬಾಬಿನಲ್ಲಿ ಅಧಿಕಾರ ವಿಕೇಂದ್ರಿಕರಣ ಮಾಡಿದರೂ ಹಣಕಾಸಿನ ವಿಚಾರದಲ್ಲಿ ಮತ್ತು ಅಡ್ಮಿನಿಸ್ಟ್ರೇಷನ್ ವಿಚಾರದಲ್ಲಿ ಮಾತ್ರ ಮಾಡುವುದಕ್ಕಾಗುವುದಿಲ್ಲ; ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ. ಒಂದು ವೇಳೆ ನಾವು ಹಾಗೆ ಮಾಡಿದರೆ ಹೇಳುವವರು ನಾವು ದುಡ್ಡು ಇಟ್ಟುಕೊಳ್ಳುವವರು ಬೇರೆಯವರಾಗುತ್ತಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಆರ್ಥಿಕ ಸಚಿವರ ಮಾತನ್ನು ನಾನು ಮೆಚ್ಚಿಕೊಳ್ಳುತ್ತೇನೆ. ಸ್ವಾಮಿ ಕಳೆದ ೩೦ ವರ್ಷಗಳಿಂದಲೂ ನಮ್ಮ ಈ ಸಂವಿಧಾನ ಇದೆ, ಈ ಅರ್ಥ ವ್ಯವಸ್ಥೆ ಇದೆ, ಇದು ಎಲ್ಲರಿಗೂ ಗೊತ್ತಿರುವ ವಿಚಾರ. ನಮ್ಮ ಮಾನ್ಯ ಮಿತ್ರರು ಕಳೆದ ೬ ವರ್ಷಗಳಿಂದಲೂ ಅಧಿಕಾರದಲ್ಲಿದ್ದಾರೆ, ಇಷ್ಟು ದಿವಸಗಳವರೆಗೂ ಕೂಡ ಈ ಅಧಿಕಾರ ವಿಕೇಂದ್ರಿಕರಣದ ಬಗ್ಗೆ ಏತಕ್ಕೆ ಬಾಯಿ ಬಿಡಲಿಲ್ಲ?

ಶ್ರೀ ಎಸ್. ಎಂ. ಯಾಹ್ಯಾ.—ಈ ರೀತಿ ಇಂಬ್ಯಾಲೆನ್ಸ್ ಆಗಬಾರದೆಂದು ನಾವು ಮಾಡಿದ್ದೇವು. ಕಳೆದ ೩೦ ವರ್ಷಗಳಿಂದ ಅಧಿಕಾರದಲ್ಲಿದ್ದರೂ ಈ ಕಾರ್ಯವನ್ನು ಏತಕ್ಕೆ ಮಾಡಲಿಲ್ಲ ಎಂದರೆ ಅದಕ್ಕೆ ಕಾರಣಗಳಿವೆ. ಅದು ಹೋಗಲಿ. ಈಗ ನಿಮ್ಮ ಕಾಲದಲ್ಲಾದರೂ ಈ ಕಾರ್ಯವನ್ನು ಮಾಡಿ ನೀವೇ ಒಳ್ಳೆಯ ಕ್ರೆಡಿಟ್ ತೆಗೆದ ಕೊಳ್ಳಿ.

ಶ್ರೀ ಎಸ್. ಆರ್ ಬೊಮ್ಮಾಯಿ.—ಸ್ವಾಮಿ, ತಮಗೆ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತೇನೆ. ೪೨ನೇ ಅಮೆಂಡ್‌ಮೆಂಟ್ ಪಾಸ್ ಆದಮೇಲೆ ರಾಜ್ಯಗಳ ಅಧಿಕಾರವನ್ನು ನಿಮ್ಮವರು ಕಸಿದು ಕೊಂಡರು. ಇವತ್ತು ನಿಮಗೆ ಬೆಳಕು ಬರತಕ್ಕಂಥ ಕೆಲಸವನ್ನು ನಾವು ಮಾಡಿದ್ದೇವೆ. ಅಂಥ ಒಂದು ವಾತಾವರಣವನ್ನು ನಾವು ನಿಮಗೆ ಇಂದು ನಿರ್ಮಾಣ ಮಾಡಿಕೊಟ್ಟಿದ್ದೇವೆ.

ಶ್ರೀ ಎಸ್. ಎಂ. ಯಾಹ್ಯಾ.—ನೀವು ಏನು ಮಾಡಿದ್ದೀರಿ ಎಂಬುದನ್ನು ಮುಂದೆ ನೋಡೋಣ. ಅಧಿಕಾರ ವಿಕೇಂದ್ರಿಕರಣವಾಗಬೇಕೆಂದು ನಿಮ್ಮ ಪಾರ್ಟಿ ಮ್ಯಾನಿಫೆಸ್ಟೋಟ್‌ನಲ್ಲಿ ನಮೂದಿಸಿದ್ದೀರಿ. ಇದು ನಿಮ್ಮ ಗುರಿಯಾಗಿದೆ. ಆದರೆ ಈ ಕೆಲಸವನ್ನು ನೀವು ಮಾಡಲಿಲ್ಲವೆಂದು ನಮ್ಮ ಮೇಲೆ ಹೇಳು

ವುದು ಬೇಡ. ಇದುವರೆಗೂ ನೀವು ಏನು ಮಾಡುತ್ತೇವೆಂದು ಹೇಳಿದ್ದೀರಿ, ಅದನ್ನು ಮಾಡುತ್ತಾರೇನೋ ಎಂದು ಜನ ನೋಡಿದರು ಆದರೆ, ನೀವು ಆ ಕೆಲಸವನ್ನು ಮಾಡಲಿಲ್ಲ ಎಂಬುದನ್ನು ತಿಳಿದು ಜನ ನಮ್ಮ ಕಡೆಗೆ ಬರುತ್ತಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ವಾಮಿ, ನಾನು ಹೇಳುವುದೇನೆಂದರೆ ಬರೀ ಅಧಿಕಾರ ವಿಕೇಂದ್ರೀಕರಣ ಒಂದೇ ಅಲ್ಲ, ಎಲ್ಲ ದೃಷ್ಟಿಯಲ್ಲೂ ವಿಕೇಂದ್ರಿಕರಣ ಆಗಬೇಕು. ಈ ವಿಚಾರ ಸದಾ ಕಾಲವೂ ತಮ್ಮ ಮನಸ್ಸಿನಲ್ಲಿರಲಿ,

ಶ್ರೀ ಎಸ್. ಎಂ, ಯಾಹ್ಯಾ.—ಕೇಂದ್ರದಲ್ಲಿ ನಿಮ್ಮ ಸರ್ಕಾರವೇ ಇದೆ, ನೀವು ಏನು ಬೇಕಾದರೂ ಹೇಳಿ ಮಾಡಿಸಬಹುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗ ನಾವು ಮಾತನಾಡುತ್ತಿರುವುದು ಈ ಅಸೆಂಬ್ಲಿಯಲ್ಲಿ ನಿಮ್ಮ ರಾಜ್ಯದ ಅರ್ಥ ವ್ಯವಸ್ಥೆ ಬಗ್ಗೆಯೇ ಹೊರತು, ಕೇಂದ್ರ ಸರ್ಕಾರದ ಬಡ್ಜೆಟ್ ವಿಚಾರವಲ್ಲಿ ಅಲ್ಲ. ಈ ರಾಜ್ಯದ ಜಿಲ್ಲೆಯ ಅಭಿವೃದ್ಧಿಯಾಗಿ, ಜನತೆಗೆ ಅನುಕೂಲವಾಗುವಂತಹ ಒಂದು ಬಿಲ್ಲನ್ನು ತಾವು ತೆಗೆದುಕೊಂಡು ಬನ್ನಿ.

ಶ್ರೀ ಎಸ್. ಎಂ. ಯಾಹ್ಯಾ.—ನಮ್ಮ ರಾಜ್ಯದ ಎಲ್ಲ ಗ್ರಾಮಗಳೂ, ಜಿಲ್ಲೆಗಳೂ ಅಭಿವೃದ್ಧಿಯಾಗ ಬೇಕೆಂಬುದೇ ನಮ್ಮ ಸರ್ಕಾರದ ಉದ್ದೇಶ, ಅದನ್ನು ಮನಸ್ಸಿನಲ್ಲಿಟ್ಟುಕೊಂಡೇ ತಾಲ್ಲೋಕ್ ಬೋರ್ಡ್ ಗಳಿಗೆ ಹೆಚ್ಚು ಹೆಚ್ಚು ಅನುಕೂಲಗಳನ್ನು ಕಲ್ಪಿಸಿಕೊಡಲು ಪ್ರಯತ್ನಿಸುತ್ತಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಈ ರೀತಿ ೩ ಲಕ್ಷ, ೪ ಲಕ್ಷ ರೂಪಾಯಿಗಳನ್ನು ಕೊಡುವುದರಿಂದ ಯಾವ ಅಭಿವೃದ್ಧಿ ಕೆಲಸಗಳೂ ಆಗುವುದಿಲ್ಲ. ಬೇರೆ ಬೇರೆ ರಾಜ್ಯಗಳಲ್ಲಿ ಯಾವರೀತಿ ಅವರು ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಾರೆ. ಏನೇನು ಯೋಜನೆಗಳನ್ನು ಹಾಕಿಕೊಳ್ಳುತ್ತಾರೆ ಎಂಬುದನ್ನು ತಾವು ನೋಡಿಕೊಂಡು ಬಂದು ಅದಕ್ಕಿಂತ ಉತ್ತಮವಾದ ಒಂದು ಬಿಲ್ಲನ್ನು ತೆಗೆದು ಕೊಂಡು ಬನ್ನಿ. ಇದರಿಂದ ರೆಡ್ ಟೇಪಿಸಂ ಆಗುವುದು ತಪ್ಪುತ್ತದೆ. ಆಗ ತಾವು ಹೇಳುವ ವಿಷಯದ ಬಗ್ಗೆ ತಮ್ಮೊಂದಿಗೆ ನಮ್ಮ ಧ್ವನಿಯನ್ನೂ ಕೂಡಿಸುತ್ತೇವೆ.

ಮಾನ್ಯ ಸಭಾಧ್ಯಕ್ಷರೆ, ನಾನು ಇನ್ನೂ ಮಾತನಾಡಬೇಕಾದ ವಿಚಾರಗಳು ಬಹಳಷ್ಟು ಇದ್ದುವು, ಆದರೆ ಕಾಲಾವಕಾಶ ಇಲ್ಲದಿರುವುದರಿಂದ ವಿದ್ಯಾ ಖಾತೆಯ ಬಗ್ಗೆ ಮಾತ್ರ ಒಂದೆರಡು ಮುಖ್ಯ ವಿಚಾರ ಗಳನ್ನು ಹೇಳಬಯಸುತ್ತೇನೆ. ನಾನು ರಾಜ್ಯದ ಎಲ್ಲ ಭಾಗಗಳಿಗೂ ಹೋಗಿ ನೋಡಿಲ್ಲ. ಕೇವಲ ನಮ್ಮ ಭಾಗದಲ್ಲಿ ನೋಡಿರಬಹುದಾದ ಒಂದೆರಡು ನಿದರ್ಶನಗಳನ್ನು ಹೇಳಬಯಸುತ್ತೇನೆ. ಅದರಲ್ಲೂ ಪ್ರಾಥಮಿಕ ಶಾಲೆಗಳ ಬಗ್ಗೆ ಹೇಳುವಾಗ ಮನಸ್ಸಿಗೆ ಬಹಳ ವೇದನೆಯಾಗುತ್ತದೆ. ಇವತ್ತು ರಾಜ್ಯದಲಿ ರುವ ಅನೇಕ ಶಾಲೆಗಳಿಗೆ ಹಲವಾರು ವರ್ಷಗಳಿಂದ ರಿಪೇರಿ ವ್ಯವಸ್ಥೆ ಇಲ್ಲ. ಉದಾಹರಣೆಗೆ ಹುಬ್ಬಳ್ಳಿ ನಗರದಲ್ಲಿ ೩ನೇ ತರಗತಿಯ ಒಂದು ಹೆಣ್ಣು ಮಕ್ಕಳ ಶಾಲೆಯನ್ನು ನೋಡುವುದಕ್ಕೆ ಹೋಗಿದ್ದೆವು. ಅಲ್ಲಿ ಮೂತ್ರಿ ಇಲ್ಲ, ರಿಪೇರಿ ಇಲ್ಲ ಅದು ಯಾವಾಗ ಕುಸಿದು ಬೀಳುತ್ತದೋ ಎನ್ನುವ ಸ್ಥಿತಿಯಲ್ಲಿದೆ. ಅಲ್ಲಿ ಸುಮಾರು ೮೦೦ ವಿದ್ಯಾರ್ಥಿಗಳಿದ್ದಾರೆ. ಇವತ್ತು ಏನಾಗಿದೆ ಎಂದರೆ ಉತ್ತರ ಕರ್ನಾಟಕ, ಹೈದರಾ ಬಾದ್ ಕರ್ನಾಟಕ ಇವುಗಳಿಂದ ಬಂದ ಭಾಗದ ಸ್ಕೂಲ್‌ಗಳಿಗೆ ಸರಿಯಾದ ರಿಪೇರಿ ವ್ಯವಸ್ಥೆ ಇಲ್ಲ. ತಾಲ್ಲೂಕ್‌ಬೋರ್ಡ್ ಅಥವಾ ಮುನಿಸಿಪಾಲಿಟಿಯವರು ಈ ಸ್ಕೂಲ್‌ಗಳನ್ನು ರಿಪೇರಿ ಮಾಡುವುದಿಲ್ಲ.

ವಿದ್ಯಾಖಾತೆಯ ಅಧಿಕಾರಿಗಳು ಬಂದು ನೋಡಿಕೊಂಡು ಹೋದರು ಆದರೂ ಏನೂ ಪ್ರಯೋಜನ ವಾಗಲಿಲ್ಲ. ಈವತ್ತಿನದಿವಸ ಸ್ಕೂಲ್ ಬಿಲ್ಡಿಂಗ್ಸ್‌ಗಳ ರಿಪೇರಿ ವಗೈರೆಗಳನ್ನು ಪಿ.ಡಬ್ಲ್ಯೂ.ಡಿ ಇಲಾಖೆಯ ವರು ಮಾಡಬೇಕೋ ಯಾರು ಮಾಡಬೇಕೋ ಇದಾವುದು ಅರ್ಥವಾಗುತ್ತಿಲ್ಲ. ಕಾರ್ಪೊರೇಷನ್‌ನವರು ಮಾಡುತ್ತಾರೆಂದರೆ ಅವರಲ್ಲಿ ದುಡ್ಡಿರುವುದಿಲ್ಲ, ಅವರಿಗೆ ದುಡ್ಡನ್ನು ಕೊಟ್ಟರೆ ಮಾಡುತ್ತೇವೆಂದು ಹೇಳುತ್ತಾರೆ. ಸರ್ಕಾರದವರು ಶಾಲಾ ಆಡಳಿತವನ್ನು ತೆಗೆದುಕೊಂಡಿರುವುದರಿಂದ ಕಾರ್ಪೊರೇಷನ್ ರವರು ಸ್ಕೂಲ್ ಬಿಲ್ಡಿಂಗ್ ವ್ಯವಸ್ಥೆ ಮಾಡತಕ್ಕಥಂದ್ದು ನಮ್ಮ ಜವಾಬ್ದಾರಿಯಲ್ಲವೆಂದು ಹೇಳುತ್ತಾರೆ. ಇದೇ ಸಂದರ್ಭದಲ್ಲಿ ೫-೭ ವರ್ಷಗಳಿಂದ ಮಕ್ಕಳ ಸಂಖ್ಯೆ ೭ ರಷ್ಟು ಜಾಸ್ತಿಯಾಗಿದೆ. ಹೆಚ್ಚಿದ ಸಂಖ್ಯೆಗೆ ಅನುಗುಣವಾಗಿ ಸ್ಕೂಲ್ ಬಿಲ್ಡಿಂಗ್ಸ್ ಇಲ್ಲದಿದ್ದರೆ ಮಕ್ಕಳು ವಿಧ್ಯಾಭ್ಯಾಸ ಮಾಡುವುದಾದರೂ ಹೇಗೆ ಆಗುತ್ತದೆ. ಇದನ್ನು ಬಹಳ ಗಂಭೀರವಾಗಿ ಆಲೋಚನೆ ಮಾಡಬೇಕಾದ ವಿಚಾರವಾಗಿರುತ್ತದೆ. ಸ್ಕೂಲ್ ಬಿಲ್ಡಿಂಗ್ಸ್‌ನ ವಿಚಾರದಲ್ಲಿ ನಾವು ನೀವು ಜೊತೆಗೂಡಿ ಕೆಲಸ ಮಾಡಬೇಕಾಗಿರುತ್ತದೆ. ಪ್ರಜಾಪ್ರಭುತ್ವ

ದಲ್ಲಿ ಎಲ್ಲಿ ಅವ್ಯವಸ್ಥೆ ಆಗಿರುತ್ತದೆ, ಎಲ್ಲಿ ಅತ್ಯಾಚಾರ ನಡೆದಿರುತ್ತದೆ, ಎಲ್ಲಿ ಹಣದ ದುರುಪಯೋಗ ನಡೆದಿರುತ್ತದೆ ಅಲ್ಲಿ ವಿಚಾರಣೆ ಆಗಲೇಬೇಕು. ಅವರು ದೊಡ್ಡವರೇ ಇರಲಿ, ಮುಖ್ಯಮಂತ್ರಿಗಳೇ ಇರಲಿ, ಪ್ರಧಾನ ಮಂತ್ರಿಗಳೇ ಇರಲಿ ತಪ್ಪುಮಾಡಿದ್ದರೆ ಶಿಕ್ಷೆಯಾಗಲೇಬೇಕೆಂದು ಎಚ್ಚರಿಕೆಯನ್ನು ಕೊಡುತ್ತಿದ್ದೇನೆ.

೪-೩೦ ಪಿ. ಎಂ.

ಒಬ್ಬ ಸದಸ್ಯರು.—ಎಲ್ಲದಕ್ಕೂ ಕಮಿಷನ್ ರಚನೆ ಮಾಡಿದಹಾಗೆ ಇದಕ್ಕೂ ಒಂದು ಕಮಿಷನ್ ರಚನೆ ಮಾಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕಮಿಷನ್ ರಚನೆ ಮಾಡಿರುವುದು ಸಂಘಸಂಸ್ಥೆಗಳನ್ನು ವಿಚಾರಣೆ ಮಾಡುವುದಕ್ಕಲ್ಲ. ಕಮಿಷನ್‌ನ್ನು ಏತಕ್ಕೆ ರಚನೆ ಮಾಡಿರುತ್ತದೋ ಅದರ ಬಗ್ಗೆ ತನ್ನ ಕರ್ತವ್ಯವನ್ನು ಮಾಡುತ್ತಿದೆ. ತುರ್ತುಪರಿಸ್ಥಿತಿಯ ಕಾಲದಲ್ಲಿ ಸಗಿದ ಅತಿರೇಕದ ವಿಚಾರದಲ್ಲಿ ವಿಚಾರಣೆ ನಡೆಸಲು ನೇಮಿಸಿದ ಆಯೋಗಗಳ ಬಗ್ಗೆ ಪ್ರಶ್ನಿಸಲು ನಿಮಗೆ ನಾಚಿಕೆಯಾಗುವುದಿಲ್ಲವೆ?

ಒಬ್ಬ ಸದಸ್ಯ.—ಈಗ ನಡೆಯುತ್ತಿರುವುದಾದರೂ ಏನು ಹೇಳಬೇಕು?

(ಗೊಂದಲ)

ಶ್ರೀ ಸಿ. ಎಂ. ಇಬ್ರಾಹಿಂ.—ಈಗ ಯಾರಾದರು ಸತ್ತರೆ ಪತ್ರಿಕೆಯಲ್ಲಿಯಾದರೂ ಬರುತ್ತದೆ. ನಿಮ್ಮ ಅಧಿಕಾರದ ಅವಧಿಯಲ್ಲಿ ಬಾಯಿಬಡಿದುಕೊಂಡರೂ ಯಾವ ಸುದ್ದಿಯು ಬರುತ್ತಿರಲಿಲ್ಲ.

ಶ್ರೀ ವಿ. ಎಂ. ಮತ್ತಿಕಟ್ಟಿ.—ಉತ್ತರ ಪ್ರದೇಶ, ಬಿಹಾರ ಮತ್ತು ಮಧ್ಯಪ್ರದೇಶಗಳ ಬಗ್ಗೆ ಏನು ಹೇಳುತ್ತೀರಿ?

THE CHAIRMAN.—I request the members not to interrupt the Speaker.

SRI C. M. ARMUGAM.—What happened in U. P., Bihar and Madhya Pradesh—can those issues be raised here? Can I raise the incidents that happened in U. P? I am a wounded soldier. Shall I raise the subject on the floor of this House? Kindly don't defend the U. P. Government Madhya Pradesh Government or any other Government in the North. If you defend, that means nothing has happened there.

THE CHAIRMAN.—I request the member to stick on to the point and I request the other members not to interrupt him.

SRI H. D DEVE GOWDA.—If anybody wants to cite the incidents that have occurred outside Karnataka, that is permissible. If Mr. C. M. Armugam wants to raise them, nobody can prevent him Nobody is preventing him.

SRI C. M. ARMUGAM.—It is extremely good of you.

SRI H. D. DEVE GOWDA.—While my friend was talking, time and again the question of appointment of Commission has been mentioned. The Commission is going to conduct the enquiry. I am not going to feel shy about it. Why should they again and again pin-point about Commissions? When that issue was raised, my hon'ble friend Mr. Bommai raised the emergency issue. If we want healthy discussion in this House, we are entitled to cite so many issues that have occurred outside the State. I don't feel sorry about it.

Sri A. Lakshmisagar.—The State Government itself has appointed Commissions like Mir Iqbal Commission. Why don't they talk about that?

Sri S. M. Yahya.—We always welcome Commissions. You may appoint a few more Commissions.

Sri A. Lakshmisagar.—Mr. Havanur and the Leader of the Opposition Mr. Devaraj Urs have said that the State Government has the power. Why don't you do it?

Sri R. Gundu Rao.—Mr. Devaraj Urs is not the Leader of the Opposition. He is the Leader of the House.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರು ಮುಂದೆ ಆಗುವುದನ್ನು ಹೇಳುತ್ತಿದ್ದಾರೆ.

ಶ್ರೀ ವಿ. ಎಂ. ಮತ್ತಿಕಟ್ಟಿ.—ಶ್ರೀ ಡಿ. ದೇವರಾಜ ಅರಸ್‌ರವರು ಮುಂದೆ ಪ್ರಧಾನಮಂತ್ರಿಗಳಾಗುತ್ತಾರೆ.

ಶ್ರೀ ಎಚ್. ಡಿ. ದೇವೇಗೌಡ.—ನಿಮ್ಮ ಹಾರೈಕೆ ಪ್ರಕಾರ ಕರ್ನಾಟಕದ ಶ್ರೀ ದೇವರಾಜ ಅರಸ್‌ರವರು ಪ್ರಧಾನಮಂತ್ರಿಗಳಾದರೆ ನಾನು ಮೂರು ಕೋಟಿ ಜನರ ಪರವಾಗಿ ಅವರನ್ನು ಸ್ವಾಗತಿಸುತ್ತೇನೆ. ಕರ್ನಾಟಕದ ಈಗಿನ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳಾಗಿ ಕಮಿಷನ್‌ನ್ನು ನೇಮಕ ಮಾಡಿದರೆ ನಾನು ಅದನ್ನು ಅಭಿನಂದಿಸುತ್ತೇನೆ. ಯಾರು ಸರ್ವಾಧಿಕಾರ ಮಾಡಿಕೊಂಡು ಪ್ರಧಾನ ಮಂತ್ರಿಗಳಾಗಿ ಆಡಳಿತ ಮಾಡಿದ್ದರೋ ಅಂತಹವರನ್ನು ಹೊರಗಡೆ ಇಟ್ಟು ಶ್ರೀ ದೇವರಾಜ ಅರಸು ಅವರು ಪ್ರಧಾನ ಮಂತ್ರಿಗಳಾದರೆ ನನ್ನದು ಅಭಿನಂದನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಶ್ರೀಮಾನ್ ದೇವರಾಜ ಅರಸು ರವರು ಪ್ರಧಾನ ಮಂತ್ರಿಗಳಾದರೆ ಶ್ರೀ ಗುಂಡೂರಾವ್ ರವರಿಗೆ ಸಿಟ್ಟು ಬರುತ್ತದೆ. ಆ ವಿಚಾರ ನಾವು ಹೇಳುವುದು ಬೇಡ, ನಮಗೆ ಅದು ಬೇಡ. ನಾನು ಕಮೀಷನ್ ವಿಚಾರವಾಗಿ ಒಂದು ಮಾತನ್ನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಎಲ್ಲೆಲ್ಲಿ ಅನ್ಯಾಯಗಳಾಗಿವೆ. ಅವ್ಯವಹಾರಗಳಾಗಿವೆ ಅಂತಹವುಗಳನ್ನು ಪತ್ತೆ ಹಚ್ಚುವುದು ಕಮೀಷನ್‌ನ್ನು ನೇಮಿಸುವುದಕ್ಕೆ ಅವಕಾಶ ಇದೆ. ಆ ಕಮೀಷನ್‌ನವರು ಕೊಟ್ಟಂತಹ ವರದಿಗಳನ್ನು ಮುಂದೆ ನ್ಯಾಯಾಲಯಗಳಲ್ಲಿ ವಿಚಾರಣೆಯಾಗಿ ನ್ಯಾಯಾಲಯದವರು ಕೊಟ್ಟಂತಹ ತೀರ್ಪಿಗೆ ಗೌರವ ಕೊಡುವುದನ್ನು ನಾವು ಕಲಿಯಬೇಕು. ನ್ಯಾಯಾಂಗದ ಮುಂದೆ ಕಮೀಷನ್‌ನವರು ಮಾಡಿದಂತದ್ದೇ ಫೈನಲ್ ಅಲ್ಲ. ಕಮೀಷನ್‌ವರು ಕೊಟ್ಟಂತಹ ವರದಿಯ ಆಧಾರದ ಮೇಲೆ ಮುಂದೆ ನ್ಯಾಯಾಂಗ ವಿಚಾರಣೆಯಾಗುತ್ತದೆ. ಆ ರೀತಿ ಕೊಟ್ಟಂತಹ ನ್ಯಾಯಾಂಗ ತೀರ್ಪನ್ನು ನಾವು ಗೌರವಿಸಬೇಕು. ನ್ಯಾಯಾಂಗದಲ್ಲಿ ವಿಚಾರಣೆಯಾಗಿ ಅವರು ತಪ್ಪಿತಸ್ಥರಲ್ಲ ಎಂದು ಹೇಳಿದರೆ ನಾವು ಒಪ್ಪಿಕೊಳ್ಳುತ್ತೇವೆ. ಒಂದು ವೇಳೆ ತಪ್ಪಿತಸ್ಥರಾಗಿದ್ದರೆ ಶಿಕ್ಷೆಯಾಗುತ್ತದೆ. ಶಿಕ್ಷೆ ಅನುಭವಿಸಬೇಕಾಗುತ್ತದೆ. ಅದನ್ನು ನಾವು ನೀವು ತಿಳಿದುಕೊಳ್ಳಬೇಕು. ವ್ಯಕ್ತಿಗತವಾಗಿ ಮಾತನಾಡುವುದು ಬೇಡ. ಒಬ್ಬ ಬಡವನೇ ಇರಲಿ, ಅಥವಾ ಶ್ರೀ ಮಂತನೇ ಇರಲಿ, ಉಚ್ಚ ಅಧಿಕಾರದಲ್ಲೇ ಇರಲಿ. ಅಧಿಕಾರ ಇಲ್ಲದೆ ಇರಲಿ ಈ ರಾಷ್ಟ್ರದ ನ್ಯಾಯಾಲಯದಲ್ಲಿ ಎಲ್ಲರೂ ಸಮ ಇದನ್ನು ನಾವು ಕಲಿತುಕೊಳ್ಳಬೇಕು. ಅದನ್ನು ಬಿಟ್ಟು ಪಕ್ಷ ದ್ವೇಷ ಇಟ್ಟುಕೊಂಡು ಕಮೀಷನ್ ನೇಮಿಸಿದ್ದಾರೆ ಎನ್ನುವ ಭಾವನೆ ಬೇಡ. ಮುಂದೆ ನ್ಯಾಯಾಂಗದಲ್ಲಿ ವಿಚಾರಣೆಯಾಗುವಾಗ ಕಮಿಷನ್ ಕೊಟ್ಟಂತಹ ವರದಿ ಸುಳ್ಳು, ತಪ್ಪು ಎಂದು ಹೇಳಿದರೆ ರಾಜಕೀಯ ಉದ್ದೇಶದಿಂದ ಕಮೀಷನ್ ನೇಮಿಸಿ ಅನ್ಯಾಯ ಮಾಡಿದ್ದಾರೆನ್ನುವುದು ತಿಳಿಯುತ್ತದೆ. ಒಂದು ವೇಳೆ ನ್ಯಾಯಾಂಗದಲ್ಲಿ ಸಾಧಾರಣವಾಗಿ ಶಿಕ್ಷೆಯಾದರೆ ಕಮೀಷನ್ ನೇಮಿಸಿದ್ದು ಯೋಗ್ಯವೆಂದು ಜನಾಂಗ ಒಪ್ಪಿಕೊಳ್ಳುತ್ತದೆ. ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಅದನ್ನು ಅಲ್ಲಿಗೆ ಬಿಡುತ್ತೇನೆ.

ಈ ಮನೆಯ ಹಿರಿಯ ಸದಸ್ಯರಾದ ಶ್ರೀಮಾನ್ ಸಿ. ಎಂ. ಆರ್ಮುಗಂ ರವರು ಒಂದು ಮಾತನ್ನು ಹೇಳಿದರು. ಬಿಹಾರಿನಲ್ಲಿ, ಹಾಗೂ ಯು. ಪಿ. ಯಲ್ಲಿ ನಡೆದಂತಹ ಘಟನೆಯ ಬಗ್ಗೆ ಪ್ರಸ್ತಾಪಮಾಡಿದ್ದೇನೆಂದು ಹೇಳಿದರು. ನಾನಾಗಿ ಅಲ್ಲಿ ನಡೆದಿರುವಂತಹ ಘಟನೆಯ ಬಗ್ಗೆ ಪ್ರಸ್ತಾಪಿಸಲಿಲ್ಲ

ಪ್ರಸ್ತಾಪ ಮಾಡಿದಾಗ ನಾನು ಅದಕ್ಕೆ ಸರಿಯಾಗಿ ಉತ್ತರ ಕೊಡತಕ್ಕಂಥಾದ್ದು ನನ್ನ ಕರ್ತವ್ಯ. ನಾನು ಆ ಒಂದು ಪಕ್ಷದ ಸದಸ್ಯನಾಗಿ ಆ ಪಕ್ಷದ ಟಿಕೇಟಿನಿಂದ ಆರಿಸಿ ಬಂದು ವಿರೋಧಪಕ್ಷದ ನಾಯಕನಾಗಿ ಇರುವಾಗ ಇಲ್ಲಿ ಯಾರಾದರು ಸದಸ್ಯರು ಅದನ್ನು ಎತ್ತಿದಾಗ ಅದಕ್ಕೆ ಉತ್ತರ ಕೊಡ ತಕ್ಕಂಥಾದ್ದು ನನ್ನ ಕರ್ತವ್ಯ ಎಂದು ತಿಳಿದುಕೊಂಡು ನನ್ನ ಕರ್ತವ್ಯವನ್ನು ಮಾಡಿದ್ದೇನೆಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ವಿದ್ಯಾ ಇಲಾಖೆಯ ಬಗ್ಗೆ ರಾಜ್ಯದ ಪ್ರಾಥಮಿಕ ಶಾಲೆಗಳ ಬಗ್ಗೆ ಕೆಲವು ವಿಚಾರಗಳನ್ನು ಹೇಳುತ್ತೇನೆ. ಇವತ್ತು ನಮ್ಮ ಸಂವಿಧಾನದಲ್ಲಿ ಕಂಪಲ್‌ಸರಿ ಪ್ರೈಮರಿ ಎಜುಕೇಷನ್ ಬಗ್ಗೆ ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ನಾವೆಲ್ಲರೂ ಒಂದು ಮಾತನ್ನು ಅರ್ಥ ಮಾಡಿಕೊಳ್ಳಬೇಕು ನಮ್ಮ ದೇಶದ ಪ್ರತಿಯೊಬ್ಬ ಜನಾಂಗದವರೂ ವಿದ್ಯಾವಂತರಾಗಿ ಅಕ್ಷರಸ್ಥರಾಗದ ಹೊರತು ನಮ್ಮ ಬೆಳವಣಿಗೆಯಾಗುವುದಿಲ್ಲ. ಸರ್ಕಾರದಿಂದ ಎಷ್ಟೋ ಹಣ ಅಭಿವೃದ್ಧಿಗಾಗಿ ಖರ್ಚು ಮಾಡಿದರೂ ಪ್ರತಿಯೊಬ್ಬ ವಿದ್ಯಾವಂತನಾಗದಿದ್ದರೆ ಈ ದೇಶ ಸುಧಾರಣೆಯಾದಂತಾಗುವುದಿಲ್ಲ ಈ ದೇಶದ ಪ್ರತಿಯೊಬ್ಬನೂ ನಾಗರೀಕನ ಬಡತನ ಹೋಗಬೇಕೆಂಬುದು ಪ್ರತಿಯೊಂದು ರಾಜಕೀಯ ಪಕ್ಷದಗುರಿಯಾಗಿದೆ. ಅದನ್ನು ಸಾಧಿಸಬೇಕಾದರೆ ನಮ್ಮ ಮಕ್ಕಳು ವಿದ್ಯಾವಂತರಾಗಬೇಕು. ಇವತ್ತು ನಾವು ಹಸಿರು ಕ್ರಾಂತಿ ಬಗ್ಗೆ ಮಾತನಾಡುತ್ತೇವೆ. ಬಿಳಿ ಕ್ರಾಂತಿ ಬಗ್ಗೆ ಮಾತನಾಡುತ್ತೇವೆ. ಔದ್ಯೋಗಿಕ ಕ್ರಾಂತಿ ಬಗ್ಗೆ ಮಾತನಾಡುತ್ತೇವೆ. ನನ್ನ ದೃಷ್ಟಿಯಲ್ಲಿ ಇವೆಲ್ಲಕ್ಕಿಂತ ಮುಖ್ಯವಾದುದು ವಿಚಾರ ಕ್ರಾಂತಿ. ಮನುಷ್ಯನಲ್ಲಿ ವಿಚಾರ ಕ್ರಾಂತಿ ಬರಬೇಕಾದರೆ ಅಕ್ಷರ ಜ್ಞಾನ ಬರಬೇಕು. ಅಕ್ಷರ ಜ್ಞಾನ ಬರಬೇಕಾದರೆ ವಿದ್ಯೆಯನ್ನು ಕಲಿಸುವುದು ಮುಖ್ಯ. ಸರ್ಕಾರ ಇದರ ಬಗ್ಗೆ ಲಕ್ಷ್ಯ ವಹಿಸಿಲ್ಲ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ ಪ್ರೈಮರಿ ಎಜುಕೇಷನ್ ಇನ್‌ಚಾರ್ಜ್ ಮಂತ್ರಿಗಳು ಮಾನ್ಯ ಸುಬ್ಬಯ್ಯ ಶೆಟ್ಟರು ಅವರು ಈಗ ಇಲ್ಲಿ ಇಲ್ಲ. ಈಗಿನ ನಮ್ಮ ಅರ್ಥ ಮಂತ್ರಿಗಳು ಹಿಂದೆ ಸ್ವಲ್ಪ ದಿವಸಗಳ ಕಾಲ ವಿದ್ಯಾಮಂತ್ರಿಗಳಾಗಿದ್ದರು. ಅವರಿಗೆ ಇರತಕ್ಕ ಸಮಸ್ಯೆ ಗೊತ್ತಿದೆ. ಸಾಕಷ್ಟು ಕಟ್ಟಡಗಳಿಲ್ಲ. ಸಾಕಷ್ಟು ಉಪಾಧ್ಯಾಯರಿಲ್ಲ. ಇವೆಲ್ಲಾ ಆದಮೇಲೆ ಬೇಕಾದ ಸಲಕರಣೆಗಳಿಲ್ಲ. ಪಾಠಶಾಲೆಯಲ್ಲಿ ಕೂಡಲಿಕ್ಕೆ ಸರಿಯಾದ ವ್ಯವಸ್ಥೆ ಇಲ್ಲ ಬೋರ್ಡು ಇಲ್ಲ. ಬರೆಯುವುದಕ್ಕೆ ಸೀಮೆ ಸುಣ್ಣ (ಚಾಕ್‌ಪೀಸ್) ಇಲ್ಲ ಮತ್ತು ಪುಸ್ತಕ ಭಂಡಾರ ಇಲ್ಲ. ಮತ್ತೆ ಕೀಳು ಮಟ್ಟದಲ್ಲಿ ಶಾಲೆಗಳಿವೆ. ನಾವು ಡ್ಯಾಂ ಕಟ್ಟುವುದಕ್ಕೆ ಪವರ್ ಉತ್ಪಾದನೆ ಮಾಡುವುದಕ್ಕೆ ಹಣ ಖರ್ಚು ಮಾಡುವುದು ಅವಶ್ಯಕ ಒಪ್ಪುತ್ತೇನೆ. ಪ್ರಾಥಮಿಕ, ಶಿಕ್ಷಣಕ್ಕೂ ಹೆಚ್ಚು ಹಣ ಖರ್ಚು ಮಾಡಿದ್ದಾರೆ, ಇನ್ನೂ ಹೆಚ್ಚು ಖರ್ಚು ಮಾಡಿ ಕೊಡಬೇಕಾದ ಅವಶ್ಯಕತೆಯನ್ನು ಪೂರೈಸಬೇಕು. ಕೊಡತಕ್ಕಂಥ ಸೌಕರ್ಯಗಳನ್ನು ಕೊಡತಕ್ಕಂಥಾದ್ದು ಸೂಕ್ತ. ನಾವು ಆ ರೀತಿ ಕೊಟ್ಟಂತಹ ಸೌಕರ್ಯಗಳು ಸರಿಯಾದ ರೀತಿಯಲ್ಲಿ ಉಪಯೋಗವಾಗದೆ ನಾಗರೀಕರಲ್ಲಿ ಒಳ್ಳೆಯ ಬುದ್ಧಿ ಹಾಗೂ ಅಕ್ಷರಸ್ಥರಾಗದಿದ್ದರೆ ನಾವು ಮಾಡಿದ್ದು ಅಪವ್ಯಯವಾದಂತಾಗುತ್ತದೆ. ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣ ಕೊಡಿಸಬೇಕೆಂಬುದನ್ನು ಸಂವಿಧಾನದಲ್ಲೇ ಒಪ್ಪಿಕೊಂಡಿದ್ದೇವೆ. ಸರ್ಕಾರ ಈ ಬಗ್ಗೆ ಹೆಚ್ಚು ಲಕ್ಷ್ಯ ವಹಿಸಬೇಕು. ನಾನು ಈಗಾಗಲೇ ಅನೇಕ ವಿಚಾರಗಳನ್ನು ಹೇಳಿದ್ದೇನೆ ಈ ರಾಜ್ಯದಲ್ಲಿ ಒಂದು ಶಾಲೆಯು ಸಮರ್ಪಕವಾಗಿ ನಡೆಯುತ್ತಿಲ್ಲ. ಪರೀಕ್ಷೆ ಕೂಡ ಸರಿಯಾಗಿ ನಡೆಯುತ್ತಿಲ್ಲ. ಪ್ರಥಮದಲ್ಲಿ ಹೆಚ್ಚಾಗಿ ಸ್ಕೂಲಿಗೆ ಹರಿಜನ–ಗಿರಿಜನರ ಹಾಗೂ ಬಡವರ ಮಕ್ಕಳು ಒಂದು ತಿಂಗಳು ಬರುತ್ತಾರೆ. ಮುಂದೆ ಅವರು ಸ್ಕೂಲಿಗೇ ಬರುವುದಿಲ್ಲ. ಕಂಪಲ್‌ಸರಿಯಾಗಿ ಊಟ ಕೊಡುತ್ತೇವೆಂದು ಹೇಳುತ್ತಾರೆ. ೧೫ ದಿವಸ ಹೆಸರು ಇರುತ್ತದೆ. ಮುಂದೆ ಇಲ್ಲವೇ ಇಲ್ಲ ಹಿಂದುಳಿದವರ ಹಾಗೂ ಹರಿಜನ–ಗಿರಿಜನರು ಹಾಗೂ ಬಡವರ ಮಕ್ಕಳು ಸ್ಕೂಲಿಗೆ ಬರುವುದಕ್ಕಾಗುವುದಿಲ್ಲ. ಅನೇಕ ಸಲ ತಮ್ಮ ಹೊಟ್ಟೆ ಪಾಡಿಗಾಗಿ ಸ್ಕೂಲು ಬಿಟ್ಟು ಹೋಗಿರತಕ್ಕಂಥ ಅನೇಕ ಉದಾಹರಣೆಗಳು ಇವೆ. ಹೀಗಾಗಿ ಮಕ್ಕಳು ಸರಿಯಾಗಿ ವಿದ್ಯಾವಂತರಾಗುತ್ತಿಲ್ಲ. ಆದ್ದರಿಂದ ವಿದ್ಯಾ ಸಂಸ್ಥೆಗಳು ಸರಿಯಾಗಿ ಅಭ್ಯಾಸ ಮಾಡಿಸತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಇಷ್ಟು ವಿದ್ಯಾರ್ಥಿಗಳು ಇದ್ದಾರೆ. ಇಷ್ಟು ಜನ ಕಂಪಲ್‌ಸರಿ ಎಜುಕೇಷನನ್ನು ತೆಗೆದುಕೊಳ್ಳುತ್ತಿದ್ದಾರೆಂದು ಅಂಕಿ ಸಂಖ್ಯೆಗಳಲ್ಲಿ ಇದೆ. ಕಳೆದ ೩೦ ವರ್ಷಗಳ ಅಂಕಿ ಸಂಖ್ಯೆಗಳನ್ನು ನೋಡಿದರೆ ಏರಿಕೆಯಾಗಿದೆ. ಕಡಿಮೆಯಾಗಿಲ್ಲ. ಆದರೆ ಇದು ನಿಜಕ್ಕೂ ಸರಿಯಾದ ಅಂಕಿ ಸಂಖ್ಯೆಗಳಲ್ಲ. ಇದರ ಬಗ್ಗೆ ತ್ವರಿತಗತಿಯಿಂದ ಸರ್ಕಾರದವರು ಗಮನ ಹರಿಸಬೇಕು. ಇದು ಲಘುವಾಗಿ ಹೇಳತಕ್ಕಂಥ ವಿಚಾರ ಅಲ್ಲ. ಇದು ಬಹಳ ಧೀರ್ಘವಾಗಿ ಯೋಚನೆ ಮಾಡತಕ್ಕ ವಿಚಾರ. ಇದರಲ್ಲಿ ಸಾರ್ವಜನಿಕರ ಸಹಕಾರವೂ ಆವಶ್ಯಕ. ಸರ್ಕಾರ ಈ ಬಗ್ಗೆ ಸರಿಯಾದ ಯೋಜನೆಯನ್ನು ಹಾಕಿಕೊಳ್ಳಬೇಕು. ಕಟ್ಟಡದ ಬಗ್ಗೆ ಕೂಡಲೇ ಗಮನ ಹರಿಸಬೇಕು. ಎಂದು ಹೇಳುತ್ತೇನೆ.

SRI B. B. SAYANAK.—I rise to a point of order. Madam, now the General Discussion on the Budget Estimates for the year 1978-79 is going on in the House. The Commissioners and Secretaries to Government of several departments are not present in the Officers' Gallery except the Finance Commissioner and some of his colleagues, This, I think is not good. I feel that the Government should ask the Commissioners and Secretaries of various departments also to be present in the Officers' Gallery during the General Discussion on the Budget Estimates.

SRI C. M. ARMUGUM.—In support of Sri Sayanak, I would submit that as a matter of procedure as a matter of convention and as a matter of right also, some times, on a general discussion, by and large Hon'ble Members will have to touch on several subjects. They have to point out not only the defects of the functioning of the Government but alse some times have to give constructive suggestions to the Government. If the Council were to be in session, I could understand that some might have been there but now the Council is not in session. Therfore, I would appeal to the Government that apart from the Finance Minister, in the interest of Government itself, it would be better if all the Ministers as far as possible present in the House when a general discussion on the budget is going on.

SRI QAMARUL ISLAM.—We have made this suggestion during the last session itself, I am surprised why they have not accepted the suggestion.

THE CHAIRMAN.—I will convey the suggesions to the Government.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಕನ್ವೇ ಮಾಡುವ ವಿಚಾರ ಸರಿ. ನನ್ನ ಹಿರಿಯ ಮಿತ್ರರು ಬಹಳ ಮಹತ್ವದ ವಿಚಾರ ಹೇಳಿದ್ದಾರೆ. ಇಲ್ಲಿ ನಡೆಯತಕ್ಕ ಡಿಬೇಟ್‌ನಲ್ಲಿ ಸದಸ್ಯರು ಅನೇಕ ವಿಚಾರಗಳನ್ನು ಹೇಳುತ್ತಾರೆ. ಜನರಲ್ ಡಿಬೇಟ್ ನಡೆಯುವಾಗ ಆ ಖಾತೆಗಳ ಮುಖ್ಯ ಅಧಿಕಾರಿಗಳು ಇಲ್ಲದೆ ಇದ್ದರೆ some deputy secretaries or officers should be present. ಪಾರ್ಲಿಮೆಂಟಿನಲ್ಲೂ ಕೂಡ ಇದೇ ರೀತಿ ಪ್ರೊಸೀಜರ್ ಇದೆ. ಇಲ್ಲಿ ನಡೆಯತಕ್ಕ ಚರ್ಚೆಯನ್ನು ಕೇಳಿ ಸರಿಯಾದ ರೀತಿಯಿಂದ ಪರಿಣಾಮಕಾರಿಯಾದ ಕಾರ್ಯಕ್ರಮ ತೆಗೆದುಕೊಳ್ಳತಕ್ಕ ಆವಶ್ಯಕತೆ ಇದೆ. ಆ ದೃಷ್ಟಿಯಿಂದ ಅಧಿಕಾರಿಗಳು ಸಭೆಯಲ್ಲಿ ಇರಬೇಕು. ಮಂತ್ರಿಗಳೂ ಇರಬೇಕು, ಮಂತ್ರಿಗಳಿಗೆ ಬೇರೆ ಕೆಲಸ ಇದ್ದರೆ ಆ ಮಾತು ಬೇರೆ. ಆದರೆ ಸದನ ನಡೆಯುತ್ತಿದ್ದಾಗ ಸಾಧ್ಯವಾದಷ್ಟುಮಟ್ಟಿಗೆ ಮಂತ್ರಿಗಳು ಈ ಮನೆಯಲ್ಲಿ ಇರಬೇಕು. ಅದರ ಜೊತೆಗೆ ಅಧಿಕಾರಿಗಳೂ ಇರಬೇಕು. ಅವರು ಇಲ್ಲದೇ ಹೋದರೆ ನಾವು ಮಾಡತಕ್ಕ ಚರ್ಚೆ ವಿಫಲವಾಗುತ್ತದೆ. ಮಾನ್ಯ ಮಂತ್ರಿಗಳು ಹೇಳಬಹುದು, ನಾನು ನೋಟ್ ಮಾಡಿಕೊಳ್ಳುತ್ತೇನೆ, ಉತ್ತರ ಕೊಡಿಸುತ್ತೇನೆ ಎಂದು. ಆದರೆ......

ಶ್ರೀ ಎಸ್. ಎಂ. ಯಾಹ್ಯಾ.—ಇಲ್ಲ, ನಾನು ಹಾಗೆ ಹೇಳುವುದಿಲ್ಲ, ಇನೊಂದು ತರಹ ಹೇಳುತ್ತೇನೆ.

(ನಗು)

ಶ್ರೀ ಎಸ್. ಅರ್. ಬೊಮ್ಮಾಯಿ.—ನಾಳೆಯಿಂದಲಾದರೂ ಸಂಬಂಧಪಟ್ಟ ಅಧಿಕಾರಿಗಳು ಇರಬೇಕು.

ಶ್ರೀ ಎಸ್. ಎಂ. ಯಾಹ್ಯಾ.—ಹೆಚ್ಚು ಹೆಚ್ಚು ಮಂತ್ರಿಗಳು, ಸೆಕ್ರೆಟರಿಗಳು ಸಭೆಯಲ್ಲಿರಬೇಕು ಎಂದು ಹೇಳುವುದು ಸರಿ. ಮಾನ್ಯ ಅವರ್ಗಂ ಅವರು ಹೆಚ್ಚು ಮಂತ್ರಿಗಳಿರಬೇಕು ಎಂದು ಹೇಳುತ್ತಾರೆ. ಮಾನ್ಯ ಬೊಮ್ಮಾಯಿ ಅವರು ಸೆಕ್ರೆಟರಿಗಳು ಇರಬೇಕು ಎಂದು ಹೇಳುತ್ತಾರೆ. ಹೆಚ್ಚಾಗಿ ಮಂತ್ರಿಗಳು ಇರಬೇಕು ಎಂದು ಹೇಳಿದರೆ ಅದು ಒಪ್ಪಿಕೊಳ್ಳತಕ್ಕ ವಿಚಾರ. ಆದರೆ ಸೆಕ್ರೆಟರಿಗಳು ಎಲ್ಲಾ ಕಾಲದಲ್ಲೂ ಇರುವುದಕ್ಕೆ ಸಾಧ್ಯವಾಗುವುದಿಲ್ಲ. ನನ್ನ ಸಹೋದ್ಯೋಗಿಗಳಿಗೆ ನಾನು ಹೇಳುತ್ತೇನೆ, ಆದಷ್ಟು ಮಟ್ಟಿಗೆ ಈ ಸಭೆಯಲ್ಲಿ ಹಾಜರಿರಬೇಕು ಎಂದು ನಾನೂ ಸಹ ಕೇಳಿಕೊಳ್ಳುತ್ತೇನೆ.

SRI C. M. ARMUGAM.—Very good.

ಶ್ರೀ ಎಸ್. ಆರ್. ಬೊಮ್ಮಾಯಿ—.—ಪ್ರಾಥಮಿಕ ಶಾಲೆ ವಿಷಯ ಮುಗಿಯಿತು. ಇನ್ನು ಹೈಸ್ಕೂಲು ಮತ್ತು ಕಾಲೇಜುಗಳ ಬಗ್ಗೆ ಹೆಚ್ಚು ಹೇಳುವುದಿಲ್ಲ. ಯೂನಿವರ್ಸಿಟಿಗಳ ಬಗ್ಗೆ ಒಂದು ಮಾತನ್ನು ಹೇಳಬಯಸುತ್ತೇನೆ. ಈ ಯೂನಿವರ್ಸಿಟಿ ಆಕ್ಟ್‌ಗಳೇನಿವೆ ಇದರಿಂದ ವಿಶ್ವವಿದ್ಯಾನಿಲಯದ ಸ್ವಾಯತ್ತತೆ ಸಂಪೂರ್ಣವಾಗಿ ನಾಶವಾಗಿದೆ. ಯಾವ ರಾಜ್ಯದಲ್ಲೂ ಕೂಡ, ಯಾವ ರಾಷ್ಟ್ರದಲ್ಲೂ ಕೂಡ ಇಂಥ ಒಂದು ಕರಾಳ ಕಾಯಿದೆ ಇಲ್ಲ. ಇವತ್ತು ವಿಶ್ವವಿದ್ಯಾನಿಲಯಗಳು ಸ್ವತಂತ್ರ ರೀತಿಯಿಂದ ಬೆಳೆದುಬರಬೇಕು.

ಶ್ರೀ ಪಿ. ರಾಂದೇವ್.—ಮಾನ್ಯ ಅಧ್ಯಕ್ಷರೆ, ಸುಮಾರು ೩ ಗಂಟೆ ಹಿಂದೆ ಬೆಂಗಳೂರು ನಗರದ ಸಾರಿಗೆ ಅವ್ಯವಸ್ಥೆ ಬಗ್ಗೆ ಅಂದರೆ ಆಟೋರಿಕ್ಷಾ ಮುಷ್ಕರದ ಬಗ್ಗೆ ಕಾಲ್ ಅಟೆನ್ಷನ್ ನೋಟಿಸ್ ಕಳುಹಿಸಿತ್ತು. ಸಂಬಂಧಪಟ್ಟ ಮಂತ್ರಿಗಳನ್ನು ಕೇಳಿ ಸೂಕ್ತವಾದ ಚರ್ಚೆಗೆ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದರು. ಈಗ ಬಿ. ಟಿ. ಎಸ್. ಬಸ್ ಮುಷ್ಕರ ಆಗುತ್ತಿದೆ ಎಂದು ಗೊತ್ತಾಗಿದೆ. ನಗರದ ಸಾರಿಗೆ ವ್ಯವಸ್ಥೆಯನ್ನು ಕೇಳುವವರಿಲ್ಲ. ಆದ್ದರಿಂದ ದಯವಿಟ್ಟು ಆ ಬಗ್ಗೆ ಚರ್ಚೆಗ ಅವಕಾಶ ಮಾಡಿ ಕೊಡಬೇಕು. ೨೦ ಲಕ್ಷ ಜನರು ತೊಂದರೆಗೊಳಗಾಗಿದ್ದಾರೆ. ಆಟೋರಿಕ್ಷಾ, ಮತ್ತು ಬಸ್ ಎರಡೂ ಇಲ್ಲದೆ ಬಹಳ ಜನಕ್ಕೆ ತೊಂದರೆಯಾಗುತ್ತಿದೆ.

ಶ್ರೀ ಸಿ. ಎಂ. ಇಬ್ರಾಹಿಂ.—ನಮ್ಮ ಗುಪ್ತ ದಳದವರು ಈಗತಾನೇ ವರದಿ ತೆಗೆದುಕೊಂಡು ಬಂದು ಕೊಟ್ಟಿದ್ದಾರೆ.

SRI P. RAMDEV.—Since this is a matter of urgent public importance the Speaker has agreed to get the information from the Minister and place it before the house for discussion.

ಶ್ರೀಮತಿ ಎಸ್. ಪ್ರಮಿಳಾ.—ಬಿ. ಟಿ. ಎಸ್. ಬಸ್ ಸ್ಟ್ರೈಕ್, ರಿಕ್ಷಾ ಸ್ಟ್ರೈಕ್, ಎರಡೂ ಆಗುತ್ತಿದೆ.

ಶ್ರೀ ಸಿ. ಎಂ. ಇಬ್ರಾಹಿಂ.—ಬಿ. ಟಿ. ಎಸ್. ಬಸ್ ಮುಷ್ಕರವಾಗುತ್ತಿರುವುದು ಮಾನ್ಯ ಮಂತ್ರಿಗಳಿಗೆ ಗೊತ್ತಾಗಿದೆಯೋ ?

ಶ್ರೀ ಆರ್. ಗುಂಡೂರಾವ್.—ಈಗತಾನೇ ವಿಷಯ ಎತ್ತಿದ್ದೀರಿ. ಆದ್ದರಿಂದ ನಾಳೆ ಈ ವಿಷಯ ಚರ್ಚೆಗೆ ಇಟ್ಟುಕೊಳ್ಳಬಹುದು ಎಂದು......

ಶ್ರೀ ಸಿ. ಎಂ. ಇಬ್ರಾಹಿಂ.—ಅವರು ಸ್ಟ್ರೈಕ್ ಇವತ್ತು ಇಟ್ಟುಕೊಂಡಿದ್ದಾರೆ.

ಶ್ರೀ ಆರ್. ಗುಂಡೂರಾವ್.—ಇದರ ಬಗ್ಗೆ ಡೀಟೈಲ್ ಇನ್‌ಫರ್ಮೇಷನ್ ನಾಳೆ ಕೊಡುತ್ತೇನೆ.

ಶ್ರೀಮತಿ ಎಸ್. ಪ್ರಮಿಳಾ.—ಜನಗಳ ಗತಿ ಏನು?

ಶ್ರೀ ಆರ್. ಗುಂಡೂರಾವ್.— ಏನು ಮಾಡುವುದಕ್ಕಾಗುತ್ತದೆ. ಅದಕ್ಕೆ ತಕ್ಕ ಪರಿಹಾರ ಕಂಡು ಹಿಡಿಯುವವರೆಗೆ ಜನ ಅನುಭವಿಸಲೇಬೇಕಾಗುತ್ತದೆ.

ಶ್ರೀಮತಿ ಎಸ್. ಪ್ರಮಿಳಾ. ಸರ್ಕಾರದ ಕಾರುಗಳನ್ನು ಏನಾದರೂ ಹೋಗುವುದಕ್ಕೆ ಕೊಡುತ್ತೀರಾ ?

THE CHAIRMAN.—We will get the information tomorrow. I learnt that the Call Attention motion is included in the agenda for discussion.

ಶ್ರೀಮತಿ ಎಸ್. ಪ್ರಮಿಳಾ.—ಜನಗಳು ಅನುಭವಿಸಲಿ ಎಂಬುದು ಸರ್ಕಾರದ ಉದ್ದೇಶವಾಗಿದ್ದರೆ ಹೇಳಲಿ. ಸರ್ಕಾರದ ಉದ್ದೇಶ ಏನು ಅಂತ ಹೇಳಲಿ.

SRI P. RAMDEV.—We want relief, not information.

ಶ್ರೀ ಸಿ. ಎಂ. ಇಬ್ರಾಹಿಂ.—ಜನಗಳು ಕಷ್ಟ ಅನುಭವಿಸಲಿ ಎಂದು ಹೇಳುವುದು ಸರಿಯಲ್ಲ. what does it mean ? ನೀವು ಯಾತಕ್ಕಿದ್ದೀರಿ ? ಅಸಮರ್ಥರಾಗಿದ್ದೀರಿ ಅಂತ ಹೇಳಿ.

(ಗೊಂದಲ)

ಶ್ರೀ ಆರ್. ಗುಂಡೂರಾವ್.—ಅಸಮರ್ಥರು ನಾವಲ್ಲ. ನೀವು ಅಸಮರ್ಥರು.

ಶ್ರೀಮತಿ ಎಸ್. ಪ್ರಮಿಳಾ.—ನೀವು ಮಾಡುವುದಕ್ಕಾಗುವುದಿಲ್ಲ ಅಂತ ಹೇಳಿ ನಾವು ಮಾಡಿ ಕೊಳ್ಳುತ್ತೇವೆ.

ಶ್ರೀ ಸಿ. ಎಂ. ಇಬ್ರಾಹಿಂ.—ನಿಮ್ಮನ್ನು ಯಾತಕ್ಕೆ ಆರಿಸಿ ಕಳಿಸಿರುವುದು ಜನ ? ನಾವು ಜನರ ಪ್ರತಿನಿಧಿಗಳು. ಸರ್ಕಾರದವರು ನಮ್ಮ ಪ್ರಶ್ನೆಗೆ ಸರಿಯಾದ ಉತ್ತರ ಕೊಡಬೇಕು.

ಶ್ರೀ ಆರ್. ಗುಂಡೂರಾವ್.—ನಿಮಗೆ ಸರಿಯಾದ ಉತ್ತರ ಬೇಕೋ ಅಥವಾ ನಾವು ಯಾತಕ್ಕೆ ಆರಿಸಿಬಂದಿದ್ದೇವೆ ಎಂಬುವುದಕ್ಕೆ ಕಾರಣ ಬೇಕೋ ?

ಶ್ರೀ ಸಿ. ಎಂ. ಇಬ್ರಾಹಿಂ.—ಈ ರೀತಿ ಆಗಿರತಕ್ಕದ್ದು ತಪ್ಪು. ಈ ರೀತಿ ಆಗಬಾರದಾಗಿತ್ತು ಎಂದು ಸಚಿವರು ವಿಷಾದ ವ್ಯಕ್ತ ಮಾಡಬೇಕಾಗಿತ್ತು.

ಶ್ರೀಮತಿ ಎಸ್. ಪ್ರಮಿಳಾ. ಈ ಪರಿಸ್ಥಿತಿ ಬರುವುದಕ್ಕೆ ಕಾರಣ ಏನು ? ಯಾತಕ್ಕೋಸ್ಕರ ಹೀಗಾಯಿತು ? ಮಂತ್ರಿಗಳಿಗೇನೋ ಕಾರ್ ಇದೆ, ಸಾರ್ವಜನಿಕರಿಗೆ ಏನಿದೆ ? ರಿಕ್ಷಾ ಇಲ್ಲ, ಬಸ್ ಇಲ್ಲ. ಮಳೇ ಬೇರೆ ಬರ್‍ತಾ ಇದೆ ಜನಗಳು ಮನೆಗೆ ಹೋಗುವುದು ಹೇಗೆ ? ಜನಗಳು ಒದ್ದಾಡುತ್ತಿದ್ದಾರೆ.

ಶ್ರೀ ಆರ್. ಗುಂಡೂರಾವ್.—ಈಗತಾನೇ ಈ ವಿಷಯನ್ನು ಮಾನ್ಯ ಸದಸ್ಯರು ಎತ್ತಿದ್ದಾರೆ. ಆಟೋರಿಕ್ಷಾ ಸ್ಟ್ರೈಕ್ ಬೆಳಗ್ಗೆಯಿಂದ ಇತ್ತು. ಈಗ ಬಿ. ಟಿ. ಎಸ್. ಬಸ್ ಸ್ಟ್ರೈಕ್‌ಯಾತಕ್ಕೋಸ್ಕರ ಇದ್ದಕ್ಕಿದ್ದಹಾಗೆ ಷುರುವಾಗಿದೆ ಎಂಬ ಬಗ್ಗೆ ಇನ್‌ಫರ್ಮೇಷನ್ ಕೇಳಿದ್ದೀರಿ ಅಷ್ಟೇ ತ ನೆ?

ಸದಸ್ಯರುಗಳು.—ಹೌದು ಸ್ವಾಮಿ.

ಶ್ರೀಮತಿ ಎಸ್. ಪ್ರಮಿಳಾ.—ಮಂತ್ರಿಗಳು ಈಗ ಏನು ವ್ಯವಸ್ಥೆ ಮಾಡಿದ್ದೀರಿ ಎಂದು ಕೇಳುತ್ತಿದ್ದೇವೆ.

ಶ್ರೀ ಆರ್. ಗುಂಡೂರಾವ್.—ಈಗತಾನೇ ಇನ್‌ಫರ್ಮೇಷನ್ ಬಂದಿದೆ. ಪೋಲೀಸ್ ಸಬ್ ಇನ್‌ಸ್ಪೆಕ್ಟರೊಬ್ಬರು ಕೆ. ಎಸ್. ಆರ್. ಟಿ. ಸಿ. ಡ್ರೈವರ್ ಒಬ್ಬರಿಗೆ ಅಸಾಲ್ಟ್ ಮಾಡಿದ್ದರಿಂದ ೧೨೦ ಬಸ್‌ನವರು ಸ್ಟ್ರೈಕ್ ಮಾಡಿದ್ದಾರೆ. ಕೂಡಲೇ ಸಬ್ ಇನ್‌ಸ್ಪೆಕ್ಟರನ್ನು ಸಸ್ಪೆಂಡ್ ಮಾಡಲಾಗಿದೆ. ಬಹುಶಃ ಈಗ ಬಸ್ ಓಡಬಹುದು.

ಶ್ರೀ ಸಿ. ಎಂ. ಇಬ್ರಾಹಿಂ.—ಜನರಿಗೆ ತೊಂದರೆಯಾಗುತ್ತಿದೆ ಅಂತ ಹೇಳಿದಾಗ ಮಾನ್ಯಸಚಿವರು ಜನ ಅನುಭವಿಸಲಿ ಎಂದು ಹೇಳಿದ್ದಾರೆ. ಅದು ತಪ್ಪು. ಮಂತ್ರಿಗಳು ಜವಾಬ್ದಾರಿಯಿಂದ......

ಶ್ರೀ ಆರ್. ಗುಂಡೂರಾವ್.—ಈಗ ಉದ್ಭವ ಆಗಿರತಕ್ಕ ಪರಿಸ್ಥಿತಿಯನ್ನು ಎಲ್ಲಾರೂ ಟಾಲರೇಟ ಮಾಡಬೇಕು.

5-00 P. M.

ಶ್ರೀ ಪಿ. ರಾಮದೇವ್.—ಇವತ್ತು ಪೋಲೀಸ್‌ನವರು ಬಿ. ಟಿ. ಎಸ್. ಬಸ್‌ನವರ ಮೇಲೆ ಕೈ ಮಾಡಿದರು, ಹಿಂದೆ ಆಟೋರಿಕ್ಷಾ ಡ್ರೈವರ್ ಮೇಲೆ ಕೈ ಮಾಡಿದರು. ಹೀಗಾಗಿ ಹಿಂದೆಯೂ ಸ್ಟ್ರೈಕ್ ಆಯಿತು, ಇಂದೂ ಕೂಡ ಸ್ಟ್ರೈಕ್ ಆಗುತ್ತಿದೆ. ಈಗಲೂ ಕೂಡ ಎಮರ್ಜನ್ಸಿ ಇದೆಯೇ ? ಈ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು ನೋಡುತ್ತಿದ್ದಾರೆಯೇ ? ಏಕೆ ಈ ರೀತಿ ಆಗುತ್ತಿದೆ ? ಪೋಲೀಸರ ಮೇಲೆ ಇನ್ನು ಮುಂದಾದರೂ ಸರಿಯಾದ ಹತೋಟಿಯನ್ನಿಡುತ್ತೀರಾ ? ಈ ಬಗ್ಗೆ ಸ್ಪಷ್ಟ ಉತ್ತರಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ಅನಿರೀಕ್ಷಿತ ಘಟನೆಗಳು ನಡೆಯತಕ್ಕ ಕಾಲದಲ್ಲಿ ಇಂಥ ಸಂದರ್ಭಗಳು ಒದಗುತ್ತವೆ. ಮಾನ್ಯ ಮಂತ್ರಿಗಳಿಗೂ ಗೊತ್ತಾಗುವುದಿಲ್ಲ. ಪೋಲೀಸ್ ಸಬ್ ಇನ್‌ಸ್ಪೆಕ್ಟರ್‌ರವರು ಹೊಡೆದ ಕಾರಣ ಘರ್ಷಣೆ ಆಯಿತೆಂದು ಉತ್ತರಿಸಿದ್ದಾರೆ. ಆದರೆ ಒಂದು ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಬೆಂಗಳೂರು ನಗರದಲ್ಲಿ ಈ ರೀತಿ ಪದೇ ಪದೇ ಸರ್ಕಾರದ ಕೆಲವು ಕೆಳವರ್ಗದ ಅಧಿಕಾರಿಗಳಿಂದ ಅನುಚಿತ ವರ್ತನೆ ಆಗುವುದಕ್ಕೆ ಅವಕಾಶವಾದರೆ ಜನತೆಯಲ್ಲಿ ಸರ್ಕಾರದ ಬಗ್ಗೆ ಒಂದು ಕೆಟ್ಟ ಭಾವನೆ ಬೆಳೆಯುತ್ತದೆ. ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒಂದು ಸೂಚನೆ ಕೊಡಲಿಚ್ಛಿಸುತ್ತೇನೆ. ಬೆಂಗಳೂರು ಕಾರ್ಪೊರೇಷನ್ ಏರಿಯಾದಲ್ಲಿ ವಿರೋಧ ಪಕ್ಷಕ್ಕೆ ಮತ ಕೊಟ್ಟರು ಎಂಬ ಒಂದೇ ಒಂದು ಹಿನ್ನೆಲೆಯಿಂದ ಬೆಂಗಳೂರು ಡೈರಿಯ ಹಾಲಿನ ಸೌಲಭ್ಯ ಮತ್ತು ಬಿ. ಟಿ. ಎಸ್. ಬಸ್ಸಿನ ಸೌಕರ್ಯ ಇವುಗಳಿಗೆ ಅಡಚಣೆ ಉಂಟಾಗಿದೆ ಎಂಬ ಭಾವನೆ ಬೆಳೆಯುತ್ತಿದೆ. ಇದನ್ನು ನೀವು ಅಧಿಕಾರಿಗಳಿಗೆ ಸೂಚನೆ ಕೊಟ್ಟು ಮಾಡಿಸುತ್ತೀರೆಂದು ಹೇಳುತ್ತಿಲ್ಲ; ಕೆಲವು ಅಹಿತಕರ ಘಟನೆಗಳಿಂದ ಈ ರೀತಿ ಆಗಬಹುದು. ಬೆಂಗಳೂರು ಡೈರಿ ಹಾಲನ್ನು ಸೀಸೆಗಳಲ್ಲಿ ಸರಬರಾಜು ಮಾಡದಿರುವುದರಿಂದ ಬೂತ್ ಹತ್ತಿರ ಹಾಲಿಗಾಗಿ ಪಾತ್ರೆಗಳನ್ನು ಹಿಡಿದುಕೊಂಡು ನಿಂತುಕೊಳ್ಳಬೇಕಾಗಿದೆ; ಹೊಸ ಸರ್ಕಾರ ಬಂದಮೇಲೆ ಸೇಡು ತೀರಿಸಿಕೊಳ್ಳುವುದಕ್ಕೆ ಮಾಡುತ್ತಿದ್ದಾರೆಯೇ ಎಂದು ಕೇಳುತ್ತಾರೆ. ಈ ಮಾತನು ನಾನು ಸಭೆಯಲ್ಲಿ ಉತ್ಪ್ರೇಕ್ಷೆಯಿಂದ ಹೇಳುತ್ತಿಲ್ಲ. ತಾವು ಎರಡನೇ ಬಾರಿಗೆ ಈ ಸಮಸ್ಯೆಯನ್ನು ಬಗೆಹರಿಸಿದಿರಿ, ಅದು ಸರಿ. ಅದೇ ರೀತಿ ಬಿ. ಟಿ. ಎಸ್. ಬಸ್‌ನವರಾಗಲೀ ಅಥವಾ ರಿಕ್ಷಾದವರಾಗಲೀ ಸ್ಟ್ರೈಕ್ ಮಾಡುವಂತಹ ಅಹಿತಕರ ಘಟನೆಗಳಾಗುವುದಕ್ಕೆ ಅವಕಾಶವಾಗಬಾರದು; ಇವಕ್ಕೆಲ್ಲ ಯಾರೋ ಕೆಲವು ಅಧಿಕಾರಿಗಳ ಅಸಭ್ಯ ವರ್ತನೆಯೇ ಕಾರಣ, ಇದು ನಿಲ್ಲಬೇಕು. ಬೆಂಗಳೂರು ಕ್ಯಾಪಿಟಲ್ ಸಿಟಿಯಾದುದರಿಂದ ಇಲ್ಲಿಗೆ ನಾನಾ ಕಡೆಯಿಂದ ಬಹಳಷ್ಟು ಮಂದಿ ಜನರು ಬರುವುದರಿಂದ ಅವರಿಗೆಲ್ಲಾ ಇದರಿಂದ ತುಂಬ ತೊಂದರೆಯಾಗುತ್ತದೆ. ಆದ್ದರಿಂದ, ದಯವಿಟ್ಟು ಇಂಥ ಘಟನೆಗಳು ನಡೆಯುವುದಕ್ಕೆ ಅವಕಾಶಕೊಡದ ಹಾಗೆ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ವರ್ತಿಸುವಂತೆ ಸೂಕ್ತ ಆದೇಶವನ್ನು ಕೊಡುವುದು ಒಳ್ಳೆಯದು.

ಶ್ರೀ ಎಂ. ಚಂದ್ರಶೇಖರ್.— ಮಾನ್ಯ ಮಂತ್ರಿಗಳು, ಜನಗಳ ಕಷ್ಟವನ್ನು ಅನುಭವಿಸಲಿ ಎಂಬ ಮಾತನ್ನು ಹೇಳಿದರು. ಹಿಂದೆ ಒಂದು ಪತ್ರಿಕಾ ಹೇಳಿಕೆಯಲ್ಲಿ ವಿದ್ಯಾರ್ಥಿಗಳು ಬಸ್ಸುಗಳನ್ನು ಸುಡುವುದಕ್ಕೆ ಮಾಡುತ್ತಿದ್ದಾರೆ. ಅವರ ಮೇಲೆ ಮುಂಡುಗಂಡಾಯವನ್ನು ಹಾಕಬೇಕೆಂದು ಹೇಳಿದ್ದರು. ಜನಗಳು ಮುಂಡುಗಂಡಾಯವನ್ನು ಕೊಡತಕ್ಕ ಸ್ಥಿತಿ ಬರಬೇಕೆಂದು ಹೇಳಿದ್ದಾರೆ. ಬೆಂಗಳೂರು ನಗರದಲ್ಲಿ ಯಾವುದೋ ಒಂದು ವರ್ಷ ತಮ್ಮ ಪಕ್ಷಕ್ಕೆ ವಿರುದ್ಧವಾಗಿ ಜನಗಳು ಮತ ನೀಡಿದರೆಂಬುವನ್ನು ಮನಸ್ಸಿನಲ್ಲಿಟ್ಟುಕೊಂಡು ವಿದ್ಯಾರ್ಥಿಗಳಾಗಲೀ ಜನಸಾಮಾನ್ಯರಾಗಲೀ ಕಷ್ಟವನ್ನು ಅನುಭವಿಸಲಿ ಎಂದು ಈ ರೀತಿ ವರ್ತಿಸುತ್ತಿದ್ದಾರೆ ಜನ ಅನುಭವಿಸಲಿ ಎಂದರೆ ಏನು ಅರ್ಥ ? ಆ ರೀತಿಯಾಗಿ ಜವಾಬ್ದಾರಿಯುತವಾದ ಮಾನ್ಯ ಮಂತ್ರಿಗಳು ಮಾತನಾಡಬಹುದೆ ?

ಶ್ರೀ ಆರ್. ಗುಂಡುರಾವ್.— ಮಾನ್ಯ ದೇವೇಗೌಡರು ಮತ್ತು ಅನೇಕ ಮಾನ್ಯ ಮಿತ್ರರು ಹೇಳಿದ ಪ್ರಕಾರ ಸರ್ಕಾರದ ಅಭಿಪ್ರಾಯದಲ್ಲಿ ಆ ಉದ್ದೇಶ ಇಲ್ಲ. ಬೆಂಗಳೂರು ನಗರದಲ್ಲಿ ಜನರು ಕೇವಲ ವಿರೋಧ ಪಕ್ಷಕ್ಕೇ ಮತ ಕೊಟ್ಟಿಲ್ಲ, ಆಡಳಿತ ಪಕ್ಷಕ್ಕೂ ಕೂಡ ಮತ ಕೊಟ್ಟಿದ್ದಾರೆ. ಸ್ವಲ್ಪ ವ್ಯತ್ಯಾಸ ಆಗಿರಬಹುದು. ಪೂರ್ತಿ ವಿರೋಧ ಪಕ್ಷಕ್ಕೆ ಮತ ಕೊಟ್ಟಿದ್ದಾರೆಂದ ಅಲ್ಲ. ಬಿ. ಟಿ. ಎಸ್. ಬಸ್ಸುಗಳಲ್ಲಿ ಕೇವಲ ಬೆಂಗಳೂರಿನ ನಾಗರೀಕರೇ ಪ್ರಯಾಣ ಮಾಡುತ್ತಿದ್ದಾರೆಂದರೆ ತಪ್ಪು. ಎಲ್ಲಾ ಕಡೆಯ ಜನರೂ ಬೆಂಗಳೂರು ನಗರಕ್ಕೆ ಬರುತ್ತಾರೆ ಮತ್ತು ಪ್ರಯಾಣ ಮಾಡುತ್ತಾರೆ. ಮುಖ್ಯವಾಗಿ ಹೇಳುವುದೇನೆಂದರೆ, ಜನಗಳಿಗೆ ತೊಂದರೆ ಮಾಡಬೇಕೆಂದು ಯಾವ ಅಧಿಕಾರಿಗಳಿಗೂ ಸರ್ಕಾರ ಆದೇಶ ಕೊಟ್ಟಿಲ್ಲ. ಈಗ ನಾನು ಹಾಲಿನ ಇಲಾಖೆಯ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ, ಸಾರಿಗೆ ಇಲಾಖೆಯ ಬಗ್ಗೆ ಹೇಳುವುದಾದರೆ, ದಿನನಿತ್ಯ ಎಲ್ಲ ವರ್ಗದ ಜನರೂ ಪ್ರಯಾಣ ಮಾಡಿ ಸಣ್ಣ ಮಿಸ್ಟೇಕ್ ಆದರೂ ಸಹ ನೇರವಾಗಿ ಸರ್ಕಾರಕ್ಕೆ ದೂರನ್ನು ನೀಡುತ್ತಾರೆ. ಜನಗಳಿಗೆ ತೊಂದರೆಯೇನೋ ಆಗುತ್ತಿದೆ ನಿಜ. ಆದರೆ ಇಲ್ಲಿ ನಮ್ಮ ಇನ್ನೊಬ್ಬರು ಮಾನ್ಯ ಸದಸ್ಯರು ಹೇಳಿದಂತೆ ಮುಂಡುಗಂಡಾಯ ಹಾಕುತ್ತೇವೆಂದು ಪತ್ರಿಕಾ ಹೇಳಿಕೆ ಕೊಟ್ಟಿರಲಿಲ್ಲ. ಯಾವುದೇ ಪ್ರಕರಣ ಬೆಂಗಳೂರಿನಲ್ಲಿ ನಡೆದರೂ. ಅದು ಫ್ಯಾಕ್ಟರಿ ಸತ್ಯಾಗ್ರಹವಾಗಿರಲಿ, ಶಾಲಾ ಸತ್ಯಾಗ್ರಹವಾಗಲಿ, ಉಪಾಧ್ಯಾಯರ ಸತ್ಯಾಗ್ರಹವಾಗಿರಲಿ, ಯಾವುದೇ ಸತ್ಯಾಗ್ರಹವಾಗಿರಲಿ ಮೊದಲು ಬಲಿಯಾಗುವುದು ಬಸ್ಸು. ಇವತ್ತಿನ ದಿವಸ ಒಂದು ಬಸ್ಸಿಗೆ ಒಂದು ಲಕ್ಷದ ೭೫ ಸಾವಿರ ರೂಪಾಯಿ ಬೆಲೆಯಾಗುತ್ತದೆ. ಇವತ್ತು ಏಕೆ ಈ ಪರಿಸ್ಥಿತಿ ಬಂದಿದೆ ಎಂದರೆ......

ಶ್ರೀ ಎಸ್. ಆರ್. ಬೊಮ್ಮಾಯಿ.— ನಾವು ಚಳುವಳಿ ಮಾಡಿದಾಗಲೂ ಅದೇ.

ಶ್ರೀ ಆರ್. ಗುಂಡೂರಾವ್.—ಆದ್ದರಿಂದ ನಾನು ಹೇಳುವುದೇನೆಂದರೆ, ಸಾರ್ವಜನಿಕರಿಗೆ ತೊಂದರೆ ಯಾಗಬಾರದೆಂದು ಬಸ್ಸುಗಳಿರುವುದು, ನೀವು ಆ ಬಸ್ಸುಗಳಿಗೆ ತೊಂದರೆ ಮಾಡಿದರೆ ಆ ಬಸ್ಸುಗಳನ್ನು ಕೂಡಲೇ ರೀ ಪ್ಲೇಸ್ ಮಾಡುವುದಕ್ಕಾಗುವುದಿಲ್ಲ. ಅದರ ಕಷ್ಟವನ್ನು ಯಾರು ಅನುಭವಿಸಬೇಕೆಂದರೆ ಜನತೆ ಅನುಭವಿಸಬೇಕು. ಆ ರೀತಿ ಸೇಡನ್ನು ತೀರಿಸಿಕೊಳ್ಳುವುದಕ್ಕೆ ಹೋದರೆ ಸಾರ್ವಜನಿಕರಿಗೆ ಹೆಚ್ಚಿನ ತೊಂದರೆಯಾಗುತ್ತದೆ. ಹತ್ತು ಬಸ್ಸುಗಳಿಗೆ ತೊಂದರೆಯಾಯಿತೆಂದರೆ ಬೆಂಗಳೂರು ನಗರದ ಎಲ್ಲ ಬಸ್ಸುಗಳನ್ನು ವಾಪಸ್ಸು ಕರೆಸಬೇಕಾಗುತ್ತದೆ. ಏಕೆಂದರೆ, ಹೀಗಾಗಿ ಎಲ್ಲ ಬಸ್ಸುಗಳು ಹೋದರೆ ನಾಳೆ ದಿವಸ ಬಸ್ಸುಗಳನ್ನು ಓಡಿಸುವುದಕ್ಕೆ ಆಗುವುದಿಲ್ಲ, ಮಾನ್ಯ ರಾಮ್‌ದೇವ್‌ರವರಿಗೆ ಗೊತ್ತಿರುವ ಹಾಗೆ, ಹಿಂದೊಮ್ಮೆ ವಿಧಾನಸಭೆಯಲ್ಲಿ ಹೇಳಿದಾಗ ಕೂಡಲೇ ಅಧಿಕಾರಿಗಳನ್ನು ಕಳುಹಿಸಿಕೊಟ್ಟು ಸಮಸ್ಯೆಗಳನ್ನು ಪರಿಹರಿಸಿ ಬಸ್ಸುಗಳನ್ನು ಓಡಿಸುವುದಕ್ಕೆ ಎರಡೇ ದಿನಗಳಲ್ಲಿ ಪ್ರಾರಂಭ ಮಾಡಿದೆವು. ಒಮ್ಮೆ ತಾಂತ್ರಿಕ ಶಾಲಾ ವಿದ್ಯಾರ್ಥಿಗಳು ಬಸ್ಸನ್ನು ತೆಗೆದುಕೊಂಡು ಹೋದರು. ಹೀಗೆ ನಾವು ಪ್ರತಿಯೊಂದು ಸಮಯ ದಲ್ಲಿಯೂ ಬಸ್ಸುಗಳನ್ನು ಈ ರೀತಿ ತೊಂದರೆಗೆ ಒಳಪಡಿಸಿದ್ದೇ ಆದರೆ ಜನತೆಗೆ ಸೌಲಭ್ಯನ್ನು ಒದಗಿಸಿ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಆ ದೃಷ್ಟಿಯಿಂದ ನಾನು ಹೇಳುವುದೇನೆಂದರೆ. ಸಬ್ ಇನ್ಸ್‌ಪೆಕ್ಟರ್ ರವರು ಹೊಡೆದರು, ನಿಜ. ಅದು ನನಗೂ ಗೊತ್ತಾಗುವುದಿಲ್ಲ, ತಮಗೂ ಗೊತ್ತಾಗುವುದಿಲ್ಲ. ಇಂಥ ಸಂದರ್ಭದಲ್ಲಿ ಸಾರ್ವಜನಿಕರು ತೊಂದರೆಯನ್ನು ಅನುಭವಿಸಬೇಕಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಯಾವ ಕಂಪನಿಯವರೂ ಸಹ ಒಮ್ಮೆಲೇ ೫೦–೧೦೦ ಬಸ್ಸುಗಳು ಬೇಕೆಂದರೆ ಒದಗಿಸುವುದಕ್ಕೆ ಸಾಧ್ಯವಾಗು ವುದಿಲ್ಲ. ಆದ್ದರಿಂದ, ನಾನು ಎಲ್ಲ ಸದಸ್ಯರಲ್ಲೂ ಕೇಳಿಕೊಳ್ಳುವುದೇನೆಂದರೆ, ಈ ಇಲಾಖೆಗೆ ಎಲ್ಲರ ಸಹಕಾರವೂ ಮುಖ್ಯ. ಇದು ಕೇವಲ ಆಡಳಿತ ಪಕ್ಷದವರಿಗಾಗಲೀ, ವಿರೋಧ ಪಕ್ಷದವರಿಗಾಗಲೀ ಸಂಬಂಧಿಸಿದ್ದಲ್ಲ, ಎಲ್ಲರಿಗೂ ಸಂಬಂಧಿಸಿದ್ದು. ಎಲ್ಲರೂ ಬಸ್ಸಿನಲ್ಲಿ ಪ್ರಯಾಣ ಮಾಡುವವರೆ. ಯಾರೇ ಯಾರೇ ಒಂದು ಸಣ್ಣ ತಪ್ಪನ್ನು ಮಾಡಿದರೂ ಕೂಡ ಅದರ ಪರಿಣಾಮವನ್ನು ಎಲ್ಲರೂ ಅನುಭವಿಸ ಬೇಕು, ನಾನು ಅನುಭವಿಸಬೇಕು, ತಾವು ಅನುಭವಿಸಬೇಕು, ಸಾರ್ವಜನಿಕರೂ ಅನುಭವಿಸಬೇಕು. ಆ ದೃಷ್ಟಿಯಿಂದ ತಾವುಗಳೆಲ್ಲ ಇದಕ್ಕೆ ಸಹಕಾರ ನೀಡಬೇಕೆಂದು ನನ ಪ್ರಾರ್ಥನೆ.

ಶ್ರೀ ಪಿ. ರಾಮದೇವ್.— ತಾವು ಈಗ ಮಿಂಚಿನ ವೇಗದಿಂದ ಆ ಮುಷ್ಕರವನ್ನು ಪರಿಹಾರ ಮಾಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.— ಈಗಾಗಲೇ ಸಾಯಂಕಾಲವಾಗಿದೆ, ಕಛೇರಿಯಿಂದ ಮನೆಗಳಿಗೆ ಹೋಗತಕ್ಕ ಸರ್ಕಾರಿ ನೌಕರರಿದ್ದಾರೆ ಹಾಗೂ ಬೇರೆ ಜನರೂ ಕೂಡ ಇದ್ದಾರೆ. ಈಗ ಆಗಿರತಕ್ಕ ಪರಿಸ್ಥಿ ತಿಯನ್ನು ಹೇಗೆ ಬಗೆಹರಿಸುತ್ತೀರಿ ? ಹೀಗೆಯೇ ಕಳೆದ ಕೆಲವಾರು ತಿಂಗಳುಗಳಿಂದ ಪದೇ ಪದೇ ಆಗುತ್ತಿರತಕ್ಕ ತೊಂದರೆಗೆ ಪರಿಹಾರ ಸಿಕ್ಕಿಲ್ಲ, ಅದಕ್ಕೆ ಏನು ಮಾಡುತ್ತೀರಿ ? ಈ ಸಾರಿಗೆ ಸಂಸ್ಥೆಯನ್ನು ಸರ್ಕಾರ ನಡೆಸುವುದರಿಂದ ಇದಕ್ಕೆ ಪರಿಹಾರ ನೀವು ಹುಡುಕಬೇಕು ಎಂದು ಹೇಳುತ್ತೇನೆ.

ಶ್ರೀ ಸಿ. ಎಂ. ಇಬ್ರಾಹಿಂ.—ಮಾನ್ಯ ಮಂತ್ರಿಗಳು ಹೇಳಿದರು ಈ ಒಂದು ಸ್ಟ್ರೈಕ್ ಹಟಾತ್ತನೆ ಆಗಿದೆ ಎಂದು ನಾನು ಹೇಳುತ್ತೇನೆ. ಈ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಸ್ಟ್ರೈಕ್ ಆಗುತ್ತಾ ಇರುವುದು ಪದೇ ಪದೇ ಆಗುತ್ತಾ ಇದೆ. ತಮಗೆ ಉದಾಹರಣೆ ಹೇಳಬೇಕಾದರೆ ರಾಯಚೂರ್ ಡಿವಿಜನ್‌ನಲ್ಲಿ ಹೋದ ತಿಂಗಳು ಅಲ್ಲಿನ ಕಾರ್ಮಿಕರು ಸತ್ಯಾಗ್ರಹ ಮಾಡಿ ಶಂಖ ಹೊಡೆದುಕೊಂಡರು, ಅದಕ್ಕೆ ಏನು ಕ್ರಮ ತೆಗೆದುಕೊಂಡಿರಿ ತಾವು ? ಅವರು ಟೆಲಿಗ್ರಾಂ ಕೊಟ್ಟರು, ನಾವು ಕೂಡ ಹೇಳಿದೆವು ಅದಕ್ಕೆ ಏನು ಕ್ರಮ ತೆಗೆದುಕೊಂಡಿರಿ ? ತಿಂಗಳಾನುಗಟ್ಟಲೆಯಾದರೂ ಕೂಡ ಕ್ರಮ ತೆಗೆದುಕೊಳ್ಳಲಿಲ್ಲ. ಹಾಗೆಯೇ ಕೋಲಾರ ಡಿವಿಜನ್‌ನಲ್ಲಿ ಸ್ಟ್ರೈಕ್ ಆಯಿತು, ೩ ತಿಂಗಳಾದರೂ ಕೂಡ ಏನೂ ಕ್ರಮ ತೆಗೆದುಕೊಂಡಿಲ್ಲ. ಈಗ ಬೆಂಗಳೂರಿನಲ್ಲಿ ಆಗಿದೆ ಅಷ್ಟೆ. ೭ ಗಂಟೆಗೆ ಹೊರಡುವ ಬಸ್ಸು ಮಧ್ಯಾಹ್ನ ಒಂದು ಗಂಟೆಗೆ ಹೊರಡುತ್ತದೆ ಎಂದು ದೂರುಗಳು ಬರೆದರೂ ಕೂಡ ಏನೂ ಕ್ರಮ ತೆಗೆದುಕೊಂಡಿಲ್ಲ. ಜನತೆ ಬಸ್‌ಸ್ಟ್ಯಾಂಡ್‌ನಲ್ಲಿ ಆ ಬಸ್ಸುಗಳಿಗೆ ಕಾದು ಕಾದು ಕಾಯುತ್ತಾ ಇದ್ದರೂ ಕೂಡ ಏನು ಕ್ರಮ ತೆಗೆದುಕೊಂಡಿಲ್ಲಾ.

ಶ್ರೀ ಆರ್. ಗುಂಡೂರಾವ್—ಮಾನ್ಯ ಸದಸ್ಯರಿಗೆ ರಾಯಚೂರ್ ಡಿವಿಜನ್ ಬಗ್ಗೆ ಹೇಳುವು ದಾದರೆ ಅವರು ಸತ್ಯಾಗ್ರಹ ಪ್ರಾರಂಭಿಸಿದ ಮಾರನೇ ದಿವಸವೇ ನಮ್ಮ ಅಧಿಕಾರಿಗಳನ್ನು ಅಲ್ಲಿಗೆ

ಕಳುಹಿಸಿ ಅಲ್ಲಿನ ಕಾರ್ಮಿಕ ನಾಯಕರೊಂದಿಗೆ ವಿಚಾರ ವಿನಿಮಯ ನಡೆಸಿದೆವು. ಅವರು ೧೦ ದಿವಸದ ನಂತರ ಸತ್ಯಾಗ್ರಹವನ್ನು ವಾಪಸ್ಸು ತೆಗೆದುಕೊಂಡರು. ಮತ್ತೆ ನಾವು ಅವರನ್ನು ಬಂದು ಭೇಟಿ ಮಾಡಬೇಕು ಎಂದು ತಿಳಿಸಿದ್ದೇವೆ. ಅವರು ನಾಳೆ ಬಂದು ಭೇಟಿ ಮಾಡುವುದು ಮಾನ್ಯ ಸದಸ್ಯರಿಗೆ ಈ ವಿಷಯ ಗೊತ್ತಿಲ್ಲ ಎಂದು ಕಾಣುತ್ತದೆ, ಆದುದರಿಂದ ಅವರು ಈ ರೀತಿ ಹೇಳಿದ್ದಾರೆ. ನಾನೂ ಕೂಡ ಬೇಕಾದರೆ ಮಾನ್ಯ ಸದಸ್ಯರಿಗಿಂತಲೂ ಹೆಚ್ಚು ರಭಸದಿಂದ ಮಾತನಾಡಲು ಶಕ್ತಿ ಇದೆ. ಆದರೆ ನಾನು ಈಗ ಮಾತನಾಡುವುದಿಲ್ಲ. ಸಾರಿಗೆ ಸಂಸ್ಥೆಯ ಡಿಮ್ಯಾಂಡ್ ಬಂದಾಗ ಯಾರ್ಯಾರು ಏನೇನು ತಪ್ಪು ಮಾಡಿದ್ದಾರೆ, ಯಾರ್ಯಾರು ಈ ರಂಗದಲ್ಲಿ ಪ್ರವೇಶ ಮಾಡಿದ್ದಾರೆ ಅದರ ಒಂದು ವಿವರವನ್ನು ತಿಳಿಸಲಿಕ್ಕೆ ಕಾತುರನಾಗಿದ್ದೇನೆ. ೧೪ ವರ್ಷಗಳ ಕಾಲದಲ್ಲಿ ಈ ಇಲಾಖೆಯಲ್ಲಿ ಏನು ನಡೆದಿದೆ ಅನ್ನುವ ಒಂದು ಸ್ಪಷ್ಟ ಚಿತ್ರೀಕರಣವನ್ನು ಮಾನ್ಯ ಸಭೆಗೆ ತಿಳಿಸುವುದಕ್ಕೆ ನಾನು ಕಾತುರನಾಗಿದ್ದೇನೆ. ತಮಗೆ ಈ ಸಂದರ್ಭದಲ್ಲಿ ಒಂದು ವಿಷಯ ತಿಳಿಸುವುದೇನೆಂದರೆ ಕಳೆದ ೧೫ ೨೦ ದಿವಸದಲ್ಲಿ ರೈಲ್ವೆ ಸತ್ಯಾಗ್ರಹ ಆದಾಗ ಬೆಂಗಳೂರಿನಿಂದ ಮೈಸೂರು ಮತ್ತಿತರ ಕಡೆಗೆ ಹೋಗುವ ರೈಲನ್ನು ನಿಲ್ಲಿಸಿದರು. ಇದರಿಂದ ಜನರು ಏನು ನಿರೀಕ್ಷಿಸಿದ್ದರೋ ಅವರಿಗೆ ಬಹಳ ನಿರಾಶೆಯಾಯಿತು. ೪-೫ ಪಟ್ಟು ಜನರು ಬಂದು ಕೇಳಿದರು. ಅವರು ಆ ಊರುಗಳಿಗೆ ಪ್ರಯಾಣ ಮಾಡುವುದಕ್ಕೆ ಬಹಳ ಕಷ್ಟವಾಗಿತ್ತು. ಆವಾಗ ಮೈಸೂರು ಕಡೆಗೆ ಅರ್ಧ ಗಂಟೆಗೆ ಓಡಿಸುವಂಥಾ ಬಸ್ಸುಗಳನ್ನು ೧೦-೧೦ ನಿಮಿಷಕ್ಕೆ ರಾತ್ರಿ ೧೧ ಗಂಟೆಯವರೆಗೂ ಓಡಿಸಿದೆವು. ಸುಮಾರು ೧೫೦ ಬಸ್ಸುಗಳನ್ನು ಓಡಿಸಿದರೂ ಸಹ ಜನಗಳ ಹೆಚ್ಚಳ ಇನ್ನೂ ಇತ್ತು. ಅಷ್ಟೊಂದು ಜನರನ್ನು ನಾವು ಸಾಗಾಣಿಕೆ ಮಾಡಿದ್ದೇವೆ. ಮಾನ್ಯ ಸದಸ್ಯರು ಈಗ ಏನು ರಭಸದಿಂದ ಮಾತನಾಡುತ್ತಾರೋ ಅದಕ್ಕಿಂತಲೂ ಹೆಚ್ಚಿನ ರಭಸದಿಂದ ಮಾತನಾಡಲು ನನಗೆ ಶಕ್ತಿ ಇದೆ. ಆದರೆ ಅವರು ನಾವು ಏನೇನು ಮಾಡಿದ್ದೇವೆ ಅದನ್ನು ಕೇಳುವುದಕ್ಕಾದರೂ ಕೂಡ ಸ್ವಲ್ಪ ತಾಳ್ಮೆ ಇರಬೇಕು ಎಂದು ನಾನು ಕೇಳುತ್ತೇನೆ.

ಇನ್ನು ಈಗತಾನೇ ಬಂದಿರುವ ಸುದ್ದಿ ಪ್ರಕಾರ ಈ ಒಂದು ಸ್ಟ್ರೈಕ್ ಮೆಜೆಸ್ಟಿಕ್ ಸರ್ಕಲ್‌ನಲ್ಲಿ ನಡೆ ನಡೆದಿದ್ದು, ಈಗ ಅವರೊಂದಿಗೆ ವಿಚಾರ ವಿನಿಮಯ ನಡೆಸಿದ್ದಾರೆ. ಅವರು ಆದಷ್ಟು ಬೇಗ ಡ್ಯೂಟಿಗೆ ಹೋಗುತ್ತೇವೆ ಅನ್ನುವ ಸಮಾಚಾರ ಈಗ ಬಂದಿದೆ. ಆದುದರಿಂದ ಈ ವಿಷಯ ಇಲ್ಲಿಗೇನೇ ಮುಕ್ತಾಯ ಮಾಡಬೇಕೆಂದು ನಾನು ಕೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಮಧ್ಯಂತರ ಸ್ಟ್ರೈಕ್ ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳಲ್ಲೂ ಆಯಿತು. ಈ ವಿಶ್ವವಿದ್ಯಾನಿಲಯದ ಸ್ವಾಯತ್ವದ ಬಗ್ಗೆ ಅದರ ಡಿಮ್ಯಾಂಡ್ ಬಂದಾಗ ಹೆಚ್ಚು ವಿಷಯಗಳನ್ನು ಹೇಳಲಿಕ್ಕೆ ಬಯಸುತ್ತೇನೆ, ಈಗ ಆ ವಿಷಯಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಇದರ ಬಗ್ಗೆ ಅವಶ್ಯಕವಾದ ತಿದ್ದುಪಡಿಗಳನ್ನು ಮಾಡಬೇಕು. ಯು.ಜಿ.ಸಿಯವರೂ ಸಹ ಸಲಹೆ ಕೊಟ್ಟಿದ್ದಾರೆ. ಆ ಬಗ್ಗೆ ಸರ್ಕಾರ ಆಲೋಚನೆ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಮೈಸೂರು ವಿಶ್ವವಿದ್ಯಾನಿಲಯದ ಬಗ್ಗೆ ಹೇಳುವುದಾದರೆ ಅವರ ಮೇಲೆ ಆಪಾದನೆ ಬಂದಾಗ ಹೈಕೋರ್ಟ್ ನ್ಯಾಯಾಧೀಶರಾದ ಶ್ರೀ ವೆಂಕಟಸ್ವಾಮಿಯವರೊಬ್ಬರನ್ನು ಎನ್‌ಕ್ವೈರಿ ಕಮಿಷನ್ ಆಗಿ ನೇಮಿಸಿದರು. ಅವರು ಆ ಬಗ್ಗೆ ಒಂದು ರಿಪೋರ್ಟ್ ಕೂಡ ಕೊಟ್ಟಿದ್ದಾರೆ. ಸರ್ಕಾರ ಆ ರಿಪೋರ್ಟ್ ಅನ್ನು ಕೂಡಲೇ ಈ ಮನೆಯ ಮುಂದೆ ಇಡಬೇಕು, ಅದರ ಜೊತೆಗೆ ಆ ರಿಪೋರ್ಟ್ ಬಗ್ಗೆ ಸರ್ಕಾರದ ನಿಲುವು ಏನು ಮತ್ತು ಅದರ ಮುಂದಿನ ಕಾರ್ಯಕ್ರಮ ಏನು ಅನ್ನುವುದನ್ನೂ ಸಹ ತಿಳಿಸಬೇಕು. ಆ ರಿಪೋರ್ಟ್ ಬಂದಮೇಲೆ ಅದನ್ನು ಹಾಗೇಯೇ ಇಟ್ಟುಬಿಟ್ಟರೆ ಯಾರು ಈ ಬಗ್ಗೆ ತಪ್ಪಿತಸ್ಥರು ಇದ್ದಾರೊ ಅವರನ್ನು ಸಂರಕ್ಷಣೆ ಮಾಡುವುದಕ್ಕೆ ಈ ರೀತಿಯಾದ ಒಂದು ಧೋರಣೆಯನ್ನು ಸರ್ಕಾರ ತಾಳಿದೆ ಎಂದು ನಾವು ತಿಳಿಯಬೇಕಾಗುತ್ತದೆ. ಆದುದರಿಂದ ಸರ್ಕಾರದ ಆ ಒಂದು ರಿಪೋರ್ಟನ್ನು ಕೂಡಲೇ ಈ ಮನೆಗೆ ಒದಗಿಸಿಕೊಟ್ಟು ಇದಕ್ಕೆ ಯಾರು ತಪ್ಪಿತಸ್ಥರಾಗಿದ್ದಾರೋ ಅವರ ಮೇಲೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

ಇನ್ನು ಕೆ.ಎಸ್.ಆರ್.ಟಿ.ಸಿ. ಬಗ್ಗೆ ಸ್ಟ್ರೈಕ್ ಆಗುತ್ತಾ ಇರುವುದನ್ನು ನೋಡಿದರೆ ನನಗೂ ಕೂಡ ಒಂದು ರೀತಿಯ ಪ್ರಚೋದನೆಯಾಗಿದೆ. ಮಾನ್ಯ ಸಾರಿಗೆ ಮಂತ್ರಿಗಳು ಬಹಳ ಉತ್ಸಾಹಶಾಲಿಗಳಾಗಿದ್ದಾರೆ ಅಲ್ಲದೆ ಬಹಳ ಅನುಭವ ಉಳ್ಳವರಾಗಿದ್ದಾರೆ ಅನ್ನುವುದನ್ನು ನಾನು ಒಪ್ಪುತ್ತೇನೆ. ಅವರಿಗೆ ಉತ್ಸಾಹ ಬಹಳ ಹೆಚ್ಚಿದೆ. ಕೆಲವು ವಿಚಾರಗಳನ್ನು ಬಹಳ ಉತ್ಸಾಹದಿಂದ ಹೇಳಿದ್ದಾರೆ. ಅದು

ಸರ್ಕಾರದ ಧೋರಣೆಯೋ ಎಂದು ನಾನು ತಿಳಿಯಬಯಸುತ್ತೇನೆ. ಸಾರ್ವಜನಿಕರೂ ಕೂಡ ಒಪ್ಪಲಿ. ಅವರು ಒಂದು ಮಾತು ಹೇಳಲಿ. ಏನೆಂದರೆ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥಾ ಸಾರಿಗೆ ವ್ಯವಸ್ಥೆಯನ್ನು ಖಾಸಗೀ ಮಾಲೀಕರುಗಳಿಗೆ ಕೊಡುವಂಥಾ ವಿಚಾರವನ್ನು ಅವರೇ ಎತ್ತಿದ್ದಾರೆ, ಅದರ ಜೊತೆಗೆ ಬೆಂಗಳೂರಿನಲ್ಲಿರತಕ್ಕಂಥಾ ಬಸ್ಸುಗಳನ್ನು ಬೆಂಗಳೂರು ನಗರ ಕಾರ್ಪೊರೇಷನ್ನಿಗೆ ವಹಿಸಿಕೊಡುತ್ತೇವೆ ಮತ್ತು ಅದರ ನಷ್ಟವನ್ನು ಅವರು ತುಂಬಿಕೊಡಬೇಕಾಗುತ್ತದೆ ಎಂದು ಹೇಳಿದ್ದಾರೆ. ಈ ವಿಚಾರ ವಿವಾದಾತ್ಮಕವಾದ ವಿಚಾರಗಳು ಅದೇನೇ ಇರಲಿ ಆ ವಿಚಾರ ಸರಿಯೋ ತಪ್ಪೋ ಅನ್ನುವ ವಿಚಾರ ಬೇರೆ. ಈ ಬಗ್ಗೆ ಸರ್ಕಾರದ ಧೋರಣೆ ಏನು ಅನ್ನುವುದನ್ನು ನಾವು ತಿಳಿಯಬಯಸುತ್ತೇವೆ. ಈವೊತ್ತು ಸಮಾಜವಾದದಲ್ಲಿ ಇರತಕ್ಕಂಥಾ ಈ ಸರ್ಕಾರ, ರಾಷ್ಟ್ರೀಕರಣಕ್ಕೆ ಬದ್ಧವಾಗಿರತಕ್ಕಂಥ ಈ ಸರ್ಕಾರ ಈ ಒಂದು ತತ್ವವನ್ನು ಕೈಬಿಟ್ಟಂತಾಗುವುದಿಲ್ಲವೇ ? ೧೯೭೭ನೇ ಇಸವಿಯಲ್ಲಿ ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಇಲ್ಲಿಯವರೆಗೆ ಏನೇನು ನಡೆದಿದೆ ಅದರ ಹಿನ್ನೆಲೆ ನೋಡಿದರೆ ಮಾನ್ಯ ಮಂತ್ರಿಗಳು ಈಗ ಹೇಳಿರುವ ಮಾತಿನಲ್ಲಿ ಅರ್ಥ ಇದೆ ಎಂದು ಗೊತ್ತಾಗುತ್ತದೆ. ಈವೊತ್ತು ಸಮಾಜವಾದದಲ್ಲಿ ನಂಬಿಕೆ ಇರತಕ್ಕಂಥಾ ಸರ್ಕಾರಕ್ಕೆ ರಾಷ್ಟ್ರೀಕರಣದಲ್ಲಿ ನಂಬಿಕೆ ಇಲ್ಲ ಅನ್ನುವುದು ತೋರಿಕೆಗೆ ಮಾತ್ರ ಅನ್ನುವುದು ಗೊತ್ತಾಗುತ್ತದೆ. ಅಧ್ಯಕ್ಷರೇ ಈ ಸಂದರ್ಭದಲ್ಲಿ ಒಂದು ಮಾತು ಹೇಳಬಯಸುತ್ತೇನೆ. ೧೯೫೬ರಲ್ಲಿ ಮುಂಬೈ ರಾಜ್ಯ ಈಗಿನ ಕರ್ನಾಟಕ. ಗುಜರಾತ್ ಮತ್ತು ಮುಂಬೈ ಸೇರಿ ೩ ರಾಜ್ಯಗಳನ್ನೊಳಗೊಂಡ ಒಂದು ರಾಜ್ಯವಾಗಿತ್ತು. ಆವಾಗ ಆ ರಾಜ್ಯದಲ್ಲಿ ಬಸ್‌ರಾಷ್ಟ್ರೀಕರಣ ಮಾಡಿದ್ದು ನಮ್ಮ ಮುಂದೆ ಒಂದು ಉದಾಹರಣೆ ಇದೆ. ಆವೊತ್ತು ಮಹಾರಾಷ್ಟ್ರ ಸರ್ಕಾರ ಒಂದು ನಿರ್ಣಯ ತೆಗೆದುಕೊಂಡು ಎಲ್ಲ ಬಸ್‌ಗಳನ್ನೂ ರಾಷ್ಟ್ರೀಕರಣ ಮಾಡಿದರು. ಅಂಥಾ ಒಂದು ಖಾಸಗೀ ಸಾರಿಗೆ ಸಂಸ್ಥೆಯನ್ನು ರಾಷ್ಟ್ರೀಕರಣ ಮಾಡಿದರು. ಈವೊತ್ತಿನ ದಿವಸ ಮಹಾರಾಷ್ಟ್ರದಲ್ಲಿ ಖಾಸಗೀ ಸಾರಿಗೆ ಸಂಸ್ಥೆ ಇಲ್ಲ, ಗುಜರಾತ್‌ನಲ್ಲೂ ಇಲ್ಲ. ಅದೇ ರೀತಿ ಕರ್ನಾಟಕದಲ್ಲೂ ಕೂಡ ಮಾಡಬೇಕು ಎಂದು ಮಾಡಿದರು. ಖಾಸಗೀ ಸಾರಿಗೆ ಸಂಸ್ಥೆ ಇದ್ದರೆ ಒಳ್ಳೆಯದು ಅನ್ನುವ ಮಾತು ಬೇರೆ. ಆದರೆ ಈ ಒಂದು ತತ್ವಕ್ಕೆ ಬದ್ಧರಾಗಿದ್ದಾರೆಯೋ ಅನ್ನುವುದನ್ನು ನಾನು ಕೇಳುತ್ತೇನೆ. ರಾಷ್ಟ್ರೀಕರಣ ನೀತಿಯನ್ನು ಸರ್ಕಾರದವರು ಸ್ವೀಕಾರ ಮಾಡಿದ್ದಾರೆ ಸ್ವೀಕಾರ ಮಾಡಿದಂಥ ನೀತಿಯನ್ನು ಪಾಲಿಸದೆ ಅದಕ್ಕೆ ಶರಣು ಹೊಡೆದು ಅದನ್ನು ಕೈ ಬಿಡುತ್ತಿದ್ದಾರೆ. ಈ ಸರ್ಕಾರದವರು ಅಧಿಕಾರಕ್ಕೆ ಬಂದಮೇಲೆ ೭೭ನೇ ಇಸವಿಯಿಂದ ಇವತ್ತಿನವರೆಗೆ ಒಂದು ಮೈಲಿ ರಸ್ತೆಯನ್ನೂ ರಾಷ್ಟ್ರೀಕರಣ ಮಾಡಿಲ್ಲ. ರಾಷ್ಟ್ರೀಕರಣದ ಧೋರಣೆಗೆ ಬದ್ಧವಾದಂಥ ಸರ್ಕಾರ ಈಗ ಡೀ ನ್ಯಾಷನಲೈಸ್ ಮಾಡತಕ್ಕ ಧೋರಣೆಯನ್ನು ತೆಗೆದುಕೊಂಡಿದೆ. ಮೂರು ವರ್ಷಗಳ ಹಿಂದೆ ರಾಜ್ಯದಲ್ಲಿ ಎಮರ್ಜನ್ಸಿ ಇದ್ದಾಗ ರಾಷ್ಟ್ರೀಕರಣ ನೀತಿಯನ್ನು ಕೈಬಿಡುತ್ತಾ ಬಂದು ಪ್ರೈವೇಟಿನ ಕಾಂಟ್ರಾಕ್ಟ್ ಕ್ಯಾರೇಜಸ್‌ನವರಿಗೆ ಪರ್ಮಿಷನ್ ಕೊಡುತ್ತಾ ಬಂದರು. ಅನೇಕ ಕಡೆಗಳಲ್ಲಿ ಪ್ರೈವೇಟಿನವರ ಸಂಖ್ಯೆಯು ಜಾಸ್ತಿಯಾಗುತ್ತಾ ಬಂತು. ಒಂದು ರೀತಿಯಲ್ಲಿ ಅವರುಗಳು ಚೆನ್ನಾಗಿ ನಡೆಸಿಕೊಂಡು ಪ್ಯಾಸೆಂಜರ್ಸ್‌ನ್ನೂ ಸಹ ಚೆನ್ನಾಗಿ ನೋಡಿಕೊಂಡು, ಚೆನ್ನಾಗಿ ನಡೆಸಿದರು. ಆದರೂ ಮೊದಲು ಈ ಕೆಲಸವನ್ನು ಪ್ರೈವೇಟಿನವರಿಗೆ ಕೊಟ್ಟದ್ದು ತಪ್ಪು ಇದನ್ನು ತಮಗೆ ಬೇಕಾದವರಿಗೆ ಅನುಕೂಲ ಮಾಡಿಕೊಡುವುದಕ್ಕೋಸರ ಜಾರಿಗೆ ತಂದು ಒಂದು ರೀತಿಯ ಅವ್ಯವಹಾರವನ್ನೇ ನಡೆಸಿದರು, ಮುಂದು ಹಠಾತ್ತಾಗಿ ಲಕ್ಷಾಂತರ ರೂಪಾಯಿಗಳ ಬೆಲೆ ಬಾಳುವಂಥ ಬಸ್ಸುಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡು ಬಸ್ ಮಾಲೀಕರಿಗೆ ಪರಿಹಾರವನ್ನೂ ಕೊಡಲಿಲ್ಲ. ಈ ವಿಚಾರ ಸುಪ್ರೀಂ ಕೋರ್ಟ್‌ನವರಿಗೂ ಹೋಗಿ ಬಂದಿದೆ. ಕೆಲವರು ಸಾಲಮಾಡಿ, ತಮ್ಮ ಹೆಂಡರ ಮಕ್ಕಳ ಒಡವೆಗಳನ್ನು ಮಾರಿ ಬಸ್ಸುಗಳನ್ನು ತೆಗೆದುಕೊಂಡು ಓಡಿಸುತ್ತಿದ್ದರು. ರಾಷ್ಟ್ರೀಕರಣದ ಧೋರಣೆಗೆ ಅನುಗುಣವಾಗಿ ಬಸ್ಸುಗಳನ್ನು ತೆಗೆದುಕೊಂಡಿದ್ದರೆ ಅವರಿಗೆ ಸೂಕ್ತ ಪರಿಹಾರವನ್ನು ಕೊಡಬೇಕು. ಸರ್ಕಾರದವರು ಇವರಿಗೆ ಪರಿಹಾರವನ್ನು ಕೊಡದೆ ಇದ್ದುದರಿಂದ ಕೆಲವರು ನಿರುದ್ಯೋಗಿಗಳಾಗಿ ಬೀದಿ ಬೀದಿಯನ್ನು ಅಲೆಯುವಂಥ ಪರಿಸ್ಥಿತಿ ಬಂದಿದೆ. ಆದ್ದರಿಂದ ಸರ್ಕಾರದವರು ಇವರಿಗೆ ತಕ್ಷಣ ಪರಿಹಾರವನ್ನು ಕೊಡತಕ್ಕ ಯೋಚನೆಯನ್ನು ಮಾಡಬೇಕು ಎಂದು ನಾನು ಹೇಳುತ್ತೇನೆ. ಇದರ ಬಗ್ಗೆ ಸುಪ್ರೀಂ ಕೋರ್ಟಿನವರು ಒಂದು ಟ್ರಿಬ್ಯುನಲ್ ಮಾಡಬೇಕು ಎಂದು ಸಲಹೆ ಮಾಡಿದ್ದಾರೆ. ಟ್ರಿಬ್ಯುನಲ್ಲು ಮಾಡುವಾಗ, ಇದಕ್ಕೆ ಒಳ್ಳೆಯ ನ್ಯಾಯಾಧೀಶರನ್ನು ನೇಮಕ ಮಾಡಿದರೆ ಒಳ್ಳೆಯದು ಎಂದು ನಾನು ಸಲಹೆ ಮಾಡುತ್ತೇನೆ. ಅವರು ಸರಿಯಾದ ರೀತಿಯಲ್ಲಿ ವಿಚಾರಣೆ ಮಾಡಿ ನ್ಯಾಯ ಕೊಡತಕ್ಕ ವ್ಯವಸ್ಥೆಯಾಗಬೇಕು; ಇದರಲ್ಲಿ ಬಸ್ ಮಾಲೀಕರು ತಮಗೆ ತೊಂದರೆಯಾದರೆ ಹೈಕೋರ್ಟಿಗೆ ಅಪೀಲು ಹೋಗುವ ಅವಕಾಶವೂ ಇದೆ. ಒಟ್ಟಿನಲ್ಲಿ ಅವರಿಗೆ ಕೊಡತಕ್ಕ ವ್ಯವಸ್ಥೆ ಕೂಡಲೇ ಆಗಬೇಕು. ಮಾನ್ಯ ಮಂತ್ರಿಗಳು ಇತ್ತೀಚಿಗೆ ಕೆಲವು ರೂಟ್‌ಗಳನ್ನು ಪ್ರೈವೇಟಿನವರಿಗೆ ಕೊಡತಕ್ಕ ವಿಚಾರವಾಗಿ ಹೇಳಿದ್ದಾರೆ. ಇದಕ್ಕೆ

ಕಾರಣ ಹೊಸ ಬಸ್ಸುಗಳನ್ನು ತೆಗೆದುಕೊಳ್ಳುವುದಕ್ಕೆ ನಮಗೆ ಶಕ್ತಿ ಇಲ್ಲ ಎನ್ನುವ ಮಾತನ್ನು ಹೇಳ ಬಹುದು. ಆದರೆ ಇದು ಕಾರಣವಲ್ಲ, ಮನಸ್ಸಿದ್ದರೆ ಮಾರ್ಗ ಇದೆ. ಎಲ್ಲಾ ರೂಟುಗಳನ್ನು ನ್ಯಾಷನಲೈಸ್ ಮಾಡುವುದಕ್ಕೆ ಸರ್ಕಾರಕ್ಕೆ ಇರುವ ತೊಂದರೆಯಾದರೂ ಏನು ? ಕಾಂಟ್ರ್ಯಾಕ್ಟ್ ಕ್ಯಾರೇಜ್‌ಗಳನ್ನು ಸರ್ಕಾರದವರ ವಶಕ್ಕೆ ತೆಗೆದುಕೊಂಡ ಮೇಲೆ ಎಲ್ಲಾ ರೂಟ್‌ಗಳನ್ನು ನ್ಯಾಷನಲೈಸ್ ಮಾಡುವುದಕ್ಕೆ ಸರ್ಕಾರದವರು ಏಕೆ ಹಿಂದು ಮುಂದು ನೋಡುತ್ತಿದ್ದಾರೆ ? ಇವರು ನ್ಯಾಷನಲೈಸ್ ಮಾಡತಕ್ಕ ಕೆಲಸ ವನ್ನು ಏಕೆ ಮಾಡುತ್ತಿಲ್ಲ ? ನಮಗೆ ಇವರ ಹಿಂದೆ ಯಾರೋ ಇದ್ದಾರೆ, ಪಟ್ಟಭದ್ರ ಶಕ್ತಿಗಳು ತಮ್ಮ ರಾಜಕೀಯ ಪ್ರಭಾವವನ್ನು ಬೀರಿ ನ್ಯಾಷನಲೈಸ್ ಧೋರಣೆಗೆ ಅಡ್ಡಿ ಮಾಡುತ್ತಿದ್ದಾರೆಂದು ಶಂಕೆ ಬರು ತ್ತಿದೆ. ಅವರ ಪರ್ಚೇಸ್ ನಿಮ್ಮ ಮೇಲೆ ಇದೆ. ನಮ್ಮ ಕಡೆ ಸಾಮಾನ್ಯವಾಗಿ ಎಲ್ಲಾ ರೂಟ್‌ಗಳೂ ನ್ಯಾಷನಲೈಸ್ ಆಗಿವೆ, ಆದರೆ ಈ ಕಡೆ ಮಾತ್ರ ತಾವು ಏಕೋ ಮೀನಾಮೇಷ ಮಾಡುತ್ತಿದ್ದೀರಿ. ಎಲ್ಲಾ ರೂಟ್‌ಗಳನ್ನು ನ್ಯಾಷನಲೈಸ್ ಮಾಡಿದರೆ ಆಡಳಿತ ಒಂದು ಮಟ್ಟಕ್ಕೆ ಬರುತ್ತದೆ. ಇಲ್ಲಿ ಬಸ್ ಮಾಲೀಕರಿಗೆ ಪರಿಹಾರ ಕೊಡದೆ ತೊಂದರೆ ಕೊಟ್ಟಿದ್ದೀರಿ, ಗ್ರಮಪಟ್ಟು ಜಮೀನು ಮಾಡಿದಂಥವರಿಂದ ಜಮೀನನ್ನು ಕಿತ್ತುಕೊಂಡು ಅವರಿಗೂ ಪರಿಹಾರ ಕೊಟ್ಟಿಲ್ಲ. ಆದ್ದರಿಂದ ಖಾಸಗೀಯವರು ನಡೆಸತಕ್ಕ ಬಸ್ಸುಗಳನ್ನು ತೆಗೆದುಕೊಂಡು ರಾಷ್ಟ್ರೀಕರಣ ಮಾಡಿ. ತಮಗೆ ಪ್ರಜಾ ಪ್ರಭುತ್ವದಲ್ಲಿ ನಂಬಿಕೆ ಇದ್ದರೆ ರಾಷ್ಟ್ರೀಕರಣ ನೀತಿಯನ್ನು ಜಾರಿಯಲ್ಲಿ ತನ್ನಿ. ಇಲ್ಲದೆ ಹೋದರೆ; ಕೆಲವು ಹಳ್ಳಿಗಳ ರಸ್ತೆಗಳನ್ನು ಖಾಸಗೀಯವರಿಗೆ ಬಸ್ ಓಡಿಸುವುದಕ್ಕೆ ಕೊಡುವುದಾದರೆ ಮತ್ತೊಂದು ಅವ್ಯವಹಾರಕ್ಕೆ ನಾಂದಿಯಾಗುತ್ತದೆ. ಆದ್ದರಿಂದ ತಮಗೆ ಸಮಾಜವಾದದಲ್ಲಿ ವಿಶ್ವಾಸ ಇದ್ದರೆ, ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದ್ದರೆ ಈ ವಿಚಾರವನ್ನು ಕೈಬಿಡಬೇಕು ಎಂದು ನಾನು ಹೇಳುತ್ತೇನೆ.

ಇನ್ನು ಕೆ.ಎಸ್.ಆರ್.ಟಿ.ಸಿ. ಬಗ್ಗೆ ನಾನು ಟ್ರಾನ್ಸ್‌ಪೋರ್ಟ್ ಡಿಮ್ಯಾಂಡ್ ಬಂದಾಗ ಮಾತನಾಡು ತ್ತೇನೆ. ಬಸ್‌ಗಳ ಸ್ಥಿತಿ ಗತಿ, ಪ್ರಯಾಣಿಕರಿಗೆ ಆಗತಕ್ಕ ತೊಂದರೆ, ಅಲ್ಲಿ ನಡೆಯುತಕ್ಕ ಅವ್ಯವಹಾರದ ಬಗ್ಗೆ, ಆಮೇಲೆ ಮಾತನಾಡುತ್ತೇನೆ. ಮುಖ್ಯವಾಗಿ ಟ್ರಾನ್ಸ್‌ಪೋರ್ಟ್ ಕಾರ್ಮಿಕರ ಸಮಸ್ಯೆಗಳನ್ನು ಬಿಡಿಸಲಿಕ್ಕೆ ತಾವು ಕೂಡಲೆ ಮನಸ್ಸು ಮಾಡಬೇಕು. ಅವರು ಅನೇಕ ಬೇಡಿಕೆಗಳನ್ನು ಇಟ್ಟಿದ್ದಾರೆ. ಅವುಗಳನ್ನು ತಾವು ಪರಿಶೀಲಿಸಿ ಪರಿಹಾರ ಕೊಟ್ಟರೆ ಅವರಲ್ಲಿ ನೆಮ್ಮದಿ ಬರುತ್ತದೆ. ಮತ್ತು ನಮ್ಮ ಕಾರ್ಯಗಳೂ ಸುಗಮವಾಗಿ ನಡೆಯಲಿಕ್ಕೆ ಅನುಕೂಲವಾಗುತ್ತದೆ. ಅಲ್ಲಿ ಆಗತಕ್ಕ ಲೀಕೇಜ್ ನಿಲ್ಲಿಸಲಿಕ್ಕೆ ತಕ್ಷಣ ಕಾರ್ಯಕ್ರಮ ತೆಗೆದುಕೊಳ್ಳಬೇಕು. ನಾನು ಪಬ್ಲಿಕ್ ಅಂಡರ್‌ಟೇಕಿಂಗ್ ಕಮಿಟಿಯ ಸದಸ್ಯ ನಾಗಿದ್ದಾಗ ಇದರ ವ್ಯವಹಾರಗಳನ್ನು ನೋಡಿದ್ದೇನೆ. ಸರ್‌ಪ್ರೈಸ್ ಚೆಕ್ ಮಾಡಿದಾಗ ಇನಕಂ ಕೂಡ ಜಾಸ್ತಿಯಾಗಿದೆ, ಚೆಕ್ ಇಲ್ಲ ಅಂದರೆ ಆದಾಯ ಸೋರಿ ಹೋಗಿದೆ. ಆದ್ದರಿಂದ ತಾವು ಒಂದು ಸ್ಕ್ವಾಡ್‌ನ್ನೇ ಇಲ್ಲಿ ಮಾಡಬೇಕು ಎಂದು ಹೇಳುತ್ತೇನೆ. ಇನ್ನು ಹೆಚ್ಚಿನ ವಿವರಗಳನ್ನು ನಾನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಆರ್. ಗುಂಡೂರಾವ್.—ನಾನು ಒದಗಿಸುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ತಮಗೆ ನಾನು ಈ ಸಲಹೆಯನ್ನು ಕೊಟ್ಟಿದ್ದೇನೆ. ದಯವಿಟ್ಟು ಪ್ರೈವೇಟ್ ಜನರಿಗೆ ಈ ವಿಚಾರವನ್ನು ಕೊಡತಕ್ಕ ಯೋಚನೆ ಮಾಡಬೇಕು. ನಿಮಗೆ ಧೈರ್ಯ ಇದ್ದರೆ ಎಲ್ಲಾ ರೂಟ್‌ಗಳನ್ನು ನ್ಯಾಷನಲೈಸ್ ಮಾಡಿ.

ನಮ್ಮ ಮುಖ್ಯ ಮಂತ್ರಿಗಳು ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡು ಹೋದ ಹೋದಲ್ಲೆಲ್ಲಾ ಲ್ಯಾಂಡ್ ರಿಫಾರಂಸ್ ಬಗ್ಗೆ ಕರ್ನಾಟಕದಲ್ಲಿ ನಾವು ಕೈಗೊಂಡಂಥ ಕಾರ್ಯಕ್ರಮಗಳನ್ನು ಬೇರೆ ಯಾವ ರಾಜ್ಯದಲ್ಲಿಯೂ ಕೈಗೊಂಡಿಲ್ಲ ಎನ್ನುವ ಮಾತನ್ನು ಹೇಳಿಕೊಳ್ಳುತ್ತಿದ್ದಾರೆ. ಇದು ಮೋಸ್ಟ್ ಪ್ರಾಗ್ರೆಸ್ಸಿವ್ ಲೆಜಿಸ್ಲೇಷನ್ ಎಂದು ಹೇಳುತ್ತಿದ್ದಾರೆ. ನಾನು ಅವರಲ್ಲಿ ಒಂದು ವಿನಯ ಪ್ರಾರ್ಥನೆ ಮಾಡು ತ್ತೇನೆ, ಏಕೆಂದರೆ, ಉಳಿದ ರಾಜ್ಯಗಳಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನು ಅವರೂ ಸ್ವಲ್ಪ ತಿಳಿದು ಕೊಂಡು ಹೇಳಿದ್ದರೆ ಇದು ಚೆನ್ನಾಗಿತ್ತು. ಅವರು ಈಗ ಇಂಟರ್‌ನ್ಯಾಷನಲ್ ಲೀಡರ್ ಆಗುವುದಕ್ಕೆ ಹೊರಟಿದ್ದಾರೆ, ಸಭೆಯಲ್ಲಿದ್ದರೆ ಚೆನ್ನಾಗಿತ್ತು.

ಶ್ರೀ ಆರ್. ಗುಂಡೂರಾವ್.—ಅವರಿಗೆ ಮೈಯಲ್ಲಿ ಸರಿಯಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ಲ್ಯಾಂಡ್ ರಿಫಾರಂ ಬಗ್ಗೆ ಹೇಳುವಾಗ ಮೊದಲು ೧೯೭೨ನೇ ಇಸವಿಯಲ್ಲಿ ಚುನಾವಣೆಗಳಿಗಿಂತ ಮುಂಚೆಯೇ ಟಿಲ್ಲರ್ ವುಡ್ ಬಿ ದಿ ಓನರ್ ಆಫ್ ದಿ ಸಾಯಿಲ್‌ಮಾಡುತ್ತೇವೆಂದು ಹೇಳಿದರು. ಬೀದಿ ಬೀದಿಯಲ್ಲಿ ಈ ಮಾತನ್ನು ಹೇಳಿದ್ದಾರೆ. ಆದರೆ ಆದದ್ದು ಏನು? ಆಕ್ಟನ್ನು ತಮ್ಮ ಧೋರಣೆಗೆ ಅನುಗುಣವಾಗಿ ತಂದದ್ದು ೨-೧೦-೭೪ರಲ್ಲಿ. ಈ ಆಕ್ಟನ್ನು ಪಾಸ್ ಮಾಡಲಿಕ್ಕೆ ಎರಡು ವರ್ಷವಾಗಿದೆ. ಮಾನ್ಯ ರೆವಿನ್ಯೂ ಮಂತ್ರಿಗಳೂ ಸುಮಾರು ೮ ಲಕ್ಷ ಟೆನೆಂಟ್ಸ್‌ಗಳಿಂದ ಅರ್ಜಿಗಳು ಬಂದಿವೆ, ಇದರಲ್ಲಿ ಮೂರು ಲಕ್ಷ ಅರ್ಜಿಗಳು ನಿರ್ಣಯವಾಗಿವೆ, ಇನ್ನೂ ನಾಲ್ಕು ಲಕ್ಷ ಅರ್ಜಿಗಳು ವಿಚಾರಣೆಯಾಗಬೇಕು ಎಂದು ಹೇಳಿದ್ದಾರೆ.

ಕಳೆದ ನಾಲ್ಕು ವರ್ಷಗಳಲ್ಲಿ ೩ ಲಕ್ಷ ಅರ್ಜಿಗಳು ಈ ಟ್ರಿಬ್ಯುನಲಗಳ ಮುಖಾಂತರ ಇತ್ಯರ್ಥವಾಗಿವೆ ಇವುಗಳ ಪೈಕಿ ನನ್ನ ಒಂದು ಮಾಹಿತಿ ಪ್ರಕಾರ ಹೆಚ್ಚಾಗಿ ಅಂದರೆ ೭೫ ಪರ್ಸೆಂಟಿನಷ್ಟು ಅಡ್ಮಿಟೆಡ್ ಟೆನನ್ಸಿಸ್ ಭೂ ಒಡೆಯರೇ ಇವರು ತಮ್ಮ ಬಳಿ ಇದ್ದ ರೈತರು ಎಂದು ಒಪ್ಪಿಕೊಂಡಿದ್ದಾರೆ. ಡಿಸ್‌ಪ್ಯೂಟೆಡ್ ಕೇಸಸ್ ೨೫ ಪರ್ಸೆಂಟಿನಿಂದ ೩೦ ಪರ್ಸೆಂಟಿವರೆಗೆ ಇದೆ. ಆದರೆ ಇಷ್ಟೇ ಸಂಖ್ಯೆಯಲ್ಲಿ ಅಂದರೆ ೨೫ ಪರ್ಸೆಂಟಿನಿಂದ ೩೦ ಪರ್ಸೆಂಟ ವರೆಗೆ ಹೈಕೋರ್ಟ್‌ನಲ್ಲಿ ರಿಟ್ ಹಾಕಲಾಗಿದೆ. ಈ ಸಂಬಂಧದಲ್ಲಿ ಒಂದು ಲಕ್ಷದವರೆಗೆ ರಿಟ್ ಅರ್ಜಿಗಳನ್ನು ಹಾಕಲಾಗಿದೆ, ಈ ಅರ್ಜಿಗಳು ಮತ್ತೆ ನಿರ್ಣಯವಾಗಬೇಕಾಗಿದೆ.

5-30 P.M.

ಶ್ರೀ ವಿ.ಎಂ. ಕುಸನೂರ್.—ಒಂದು ಲಕ್ಷ ಅಲ್ಲ, ೧೬ ಸಾವಿರ ಮಾತ್ರ ರಿಟ್‌ಗಳನ್ನು ಹಾಕಿರುವುದು.

ಶ್ರೀ ಎಸ್.ಆರ್.ಬೊಮ್ಮಾಯಿ.—ತಾವು ಬೇಕಾದರೆ ಮತ್ತೊಂದು ಸಲ ವೆರಿಫೈ ಮಾಡಿ ನೋಡಿ; ನಮ್ಮ ಜಿಲ್ಲೆಯಲ್ಲಿಯೇ ೫ ಸಾವಿರ ರಿಟ್ ಅರ್ಜಿಗಳನ್ನು ಹಾಕಿದ್ದಾರೆ. ಇಷ್ಟೊಂದು ರಿಟ್ ಅರ್ಜಿಗಳನ್ನು ತೀರ್ಮಾನ ಮಾಡಲು ಮತ್ತೆ ೫-೬ ಜನ ಹೈಕೋರ್ಟ್ ಜಡ್ಜ್‌ಗಳನ್ನು ಹೊಸದಾಗಿ ನೇಮಕ ಮಾಡಬೇಕಾಗುತ್ತದೆ. ಈಗ ಟ್ರಿಬ್ಯುನಲಗಳ ಮುಂದೆ ಉಳಿದಿರುವ ಅರ್ಜಿಗಳನ್ನು ಇತ್ಯರ್ಥ್ಯಮಾಡಲು ಇನ್ನು ಎಷ್ಟು ವರ್ಷಗಳು ಬೇಕೋ ಗೊತ್ತಿಲ್ಲ. ಭೂ ಸುಧಾರಣೆಯ ಮೂಲಕ ರೈತರಿಗೆ ನ್ಯಾಯ ಕೊಟ್ಟಿದ್ದೇವೆಂದು ಹೇಳುತ್ತಾರೆ. ಆದರೆ ಜಮೀನೆಲ್ಲಾ ಸರ್ಕಾರದ ವಶದಲ್ಲಿಯೇ ಇದೆ. ರೈತರನ್ನೇ ಭೂ ಒಡೆಯರನ್ನಾಗಿ ಮಾಡಿಲ್ಲ. ಈಗಿನ ಆಕ್ಟ ಪ್ರಕಾರ ರೈತ ಇನ್ನೂ ಭೂ ಒಡೆಯನಾಗಿಲ್ಲ. ನಾನು ವಿಧಾನ ಪರಿಷತ್ತಿನ ಸದಸ್ಯನಾಗಿದ್ದಾಗ ಸಹ ಪದೇ ಪದೇ ಸಲಹೆಗಳನ್ನು ಈ ಬಗ್ಗೆ ಕೊಡುತ್ತಿದ್ದೆ. ಈಗಲೂ ಕೊಡುತ್ತಿದ್ದೇನೆ. ಏನೆಂದರೆ ಕೇರಳಾ ಮತ್ತು ಮಹಾರಾಷ್ಟ್ರದಲ್ಲಿ ಮಾಡಿರುವಂತೆ ಇಲ್ಲಿಯೂ ಸಹ let the tenant be declared as owner. Land should vest with the tiller. ಭೂ ನ್ಯಾಯಮಂಡಲಿಯವರು ಇವನೇ ಟೆನೆಂಟ್ ಎಂದು ತೀರ್ಮಾನ ಮಾಡಿದ ಕೂಡಲೇ ಅವನನ್ನು ಭೂ ಒಡೆಯನನ್ನಾಗಿ ಮಾಡಬೇಕು. ಏನಾದರೂ ಡಿಸಪ್ಯೂಟ್ ಇದ್ದರೆ ಅದನ್ನು ಆಗಲೇ ತೀರ್ಮಾನ ಮಾಡಬೇಕು. ಏನಿದ್ದರೂ ಆತನಿಂದ ಪರಿಹಾರದ ಹಣವನ್ನು ಮಾತ್ರ ಕಂತಿನ ರೂಪದಲ್ಲಿ ತೆಗೆದುಕೊಳ್ಳಬೇಕು. ಆಗ ಆತನಿಗೆ ತಾನೇ ಭೂ ಒಡೆಯ ಎಂಬ ಭಾವನೆ ಬರುತ್ತದೆ. We want to bring a psychological change in the tenant. Let him be declared as the owner. ನಂತರ ಪರಿಹಾರವನ್ನು ಕಂತಿನ ರೂಪದಲ್ಲಿ ಕೊಡುವ ವ್ಯವಸ್ಥೆ ಮಾಡಿ. ಈ ಮೊದಲು ಸೆಕ್ಷನ್ ೫೫ರ ಪ್ರಕಾರ ಪರಿಹಾರದ ಹಣವನ್ನು ಕಂತಿನ ರೂಪದಲ್ಲಿ ಕೊಡುವುದಕ್ಕೆ ವ್ಯವಸ್ಥೆ ಇತ್ತು. ಈಗ ಅದನ್ನು ತಿದ್ದುಪಡಿ ಮಾಡುವುದರ ಮೂಲಕ ಒಂದೇ ಗಂಟಿನಲ್ಲಿ ಕೊಡಬೇಕೆಂದು ಮಾಡಿದ್ದೀರಿ. ಮತ್ತು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನ ಮೂಲಕ ಸಾಲ ತೆಗೆದುಕೊಂಡು ಒಂದೇ ಗಂಟಿನಲ್ಲಿ ಕೊಡುವಂತಹ ವ್ಯವಸ್ಥೆಯನ್ನು ಸಹ ಮಾಡಿದ್ದೀರಿ. ಇದಕ್ಕೆ ಒಂದು ತಿದ್ದುಪಡಿ ಮಾಡಿದ್ದೀರಿ. ಈ ಹಣಕ್ಕೆ ರೈತನು ೧೧ ಪರ್ಸೆಂಟ್ ಬಡ್ಡಿ ಕೊಡಬೇಕು. ಪರಿಹಾರದ ಹಣ ಅದರ ಮೇಲಿನ ಬಡ್ಡಿ ಮತ್ತು ಭೂ ಕಂದಾಯ ಈ ಮೂರನ್ನು ಸಹ ಕೊಡಬೇಕೆಂದರೆ ರೈತರಿಗೆ ಸಾಧ್ಯವಾಗುವುದಿಲ್ಲ. It is impossible for him to pay. He will be a defaulter, ಆಗ ರೈತನಾದವನು ಎಂದಿಗೂ ಭೂ ಒಡೆಯನಾಗುವುದಕ್ಕೆ ಸಾಧ್ಯವಾಗುವುದಿಲ್ಲ. If he fails to pay the instalments, he loses his land. ಇದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಉದ್ವೇಗದಲ್ಲಿ ತಾವು ಜನಕ್ಕೆ ಏನೂ ಬೇಕಾದರೂ ಪ್ರಚಾರ ಮಾಡಿಬಿಡಬಹುದು. ಆದರೆ ಅದನ್ನು ಕಾರ್ಯರೂಪಕ್ಕೆ ತರುವುದು ಅಷ್ಟು ಸುಲಭದ

ಕೆಲಸವಲ್ಲ. ಕಂತು ಬಡ್ಡಿ ಮತ್ತು ಭೂ ಕಂದಾಯ ಈ ಮೂರನ್ನು ತಪ್ಪದೆ ಕಟ್ಟಬೇಕು. ಕಟ್ಟದಿದ್ದರೆ ಈ ನಿಮ್ಮ ಕಾಯಿದೆಯ ಪ್ರಕಾರ ಆತ ಭೂ ಒಡೆಯನಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಆದಕಾರಣ ಇದನ್ನು ಪ್ರಗತಿಪರವಾದಂಥ ಭೂ ಸುಧಾರಣಾ ಮಸೂದೆ ಎಂದು ಯಾವ ರೀತಿ ಕರೆಯುತ್ತೀರಿ ?

ಶ್ರೀ ಎಸ್. ಎಂ. ಯಾಹ್ಯಾ.—ರೈತರು ಆ ಒಂದು ಸ್ಥಿತಿಗೆ ಬರುವುದಕ್ಕೆ ನಾವು ಬಿಡುವುದಿಲ್ಲ. ರೈತರಿಗೆ ಸಹಾಯ ಮಾಡಬೇಕೆಂಬುದೇ ಸರ್ಕಾರದ ಮುಖ್ಯ ಗುರಿಯಾಗಿದೆ. ಈ ಬಗ್ಗೆ ಏನಾದರೂ ತೊಂದರೆಗಳು ಬಂದರೆ ಅದಕ್ಕೆ ಸೂಕ್ತ ತಿದ್ದುಪಡಿಗಳನ್ನು ತಂದಾದರೂ ಸಹ ರೈತರಿಗೆ ಸಹಾಯ ಮಾಡುತ್ತೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗಿನ ಆಕ್ಟ್ ಪ್ರಕಾರ ರೈತರಿಗೆ ಇದೊಂದು ದೊಡ್ಡ ಭಾರವಾಗಿದೆ. ಇದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ಸಾಲ ತೆಗೆದುಕೊಳ್ಳಲು ರೈತರಿಗೆ ಎಷ್ಟು ಕಷ್ಟವಾಗುತ್ತದೆಂಬುದನ್ನು ತಾವು ನೋಡಬೇಕು. ರೆಕಾರ್ಡ್ ಆಫ್ ರೈಟ್ಸ್ ತೆಗೆದುಕೊಳ್ಳಲು ರೈತನು ವಿಲೇಜ್ ಅಕೌಂಟೆಂಟಿಗೆ ದುಡ್ಡು ಕೊಡಬೇಕು. ನಂತರ ಸಾಲ ಪಡೆದುಕೊಳ್ಳಲು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನ ಸೆಕ್ರೆಟರಿಗೆ ಹಣ ಕೊಡಬೇಕು,

ಒಬ್ಬ ಸದಸ್ಯರು.—ಎಲ್ಲ ಹಣವನ್ನು ಸಹ ಒಂದೇ ಗಂಟಿನಲ್ಲಿ ಕೊಡಬೇಕಾಗಿಲ್ಲ. ಎರಡು ಸಾವಿರ ರೂ.ಗಳನ್ನು ಕೊಟ್ಟು ಉಳಿದಿರುವ ಹಣವನ್ನು ಕಂತಿನಲ್ಲಿ ಕೊಡುವುದಕ್ಕೆ ಅವಕಾಶವಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗಿನ ಆಕ್ಟ್‌ನಲ್ಲಿ ಒಂದೇ ಗಂಟಿನಲ್ಲಿ ಹಣ ಕೊಡಬೇಕಾಗುತ್ತದೆ. ಭೂಮಿಯನ್ನು ಕಳೆದುಕೊಂಡವರಿಗೆ ಭೂಮಿಯನ್ನು ಪಡೆದವರು ಒಂದೇ ಗಂಟಿನಲ್ಲಿ ೧೫ರಿಂದ ೨೦ ಸಾವಿರ ರೂಪಾಯಿಗಳನ್ನು ಪರಿಹಾರದ ರೂಪದಲ್ಲಿ ಕೊಡುವುದು ಬಹಳ ಕಷ್ಟದ ಕೆಲಸ.

ಶ್ರೀಮತಿ ರೇಣುಕಾರಾಜೇಂದ್ರನ್.—ಬೆಲೆ ಬಾಳುವ ಜಮೀನಾದರೆ ಜಾಸ್ತಿ ಕೊಡಬೇಕಾಗುತ್ತದೆ. ಆದರೆ ಹೊಲ ಆದರೆ ಕಡಿಮೆ ಪರಿಹಾರವನ್ನು ನಿಗದಿ ಮಾಡುತ್ತಾರೆ. ಆದಕಾರಣ ರೈತರಿಗೆ ಪಿ.ಎಲ್.ಡಿ. ಬ್ಯಾಂಕ್‌ನವರು ಕೊಡುವ ಹಣ ಸಾಕಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಮ್ಮ ಭಾಗದಲ್ಲಿ ಜಮೀನಿನ ಬೆಲೆ ಎಷ್ಟಿದೆಯೋ ನನಗೆ ಗೊತ್ತಿಲ್ಲ. ಆದರೆ ಒಳ್ಳೆಯ ಜಮೀನಾದರೆ ಪರಿಹಾರದ ಹಣ ಜಾಸ್ತಿ ಇರುತ್ತದೆ. ಇದಕ್ಕೆ ಬಡ್ಡಿ ಬೇರೆ ಕೊಡಬೇಕು. ಪರಿಹಾರದ ಹಣ ಎಷ್ಟು ನಿಗದಿ ಮಾಡುತ್ತಾರೆಂಬುದರ ಬಗ್ಗೆ ನಾನು ಹೇಳುವುದಿಲ್ಲ. ಆದರೆ ರೈತರು ಒಂದೇಗಂಟಿನಲ್ಲಿ ಹಣವನ್ನು ಬ್ಯಾಂಕಿನಲ್ಲಿ ಸಾಲ ಪಡೆದು ಕೊಡುವುದು ಬಹಳ ಕಷ್ಟವಾಗುತ್ತದೆ. ಅದಕ್ಕೆ ಏನು ಮಾಡಬೇಕೆಂದರೆ, ಎಲ್ಲ ಭೂಮಾಲೀಕರಿಗೂ ಸರ್ಕಾರದವರೇ ನೇರವಾಗಿ ಒಂದೇ ಗಂಟಿನಲ್ಲಿ ಪರಿಹಾರವನ್ನು ಕೊಡಬೇಕು. ನಂತರ ರೈತರಿಂದ ಕಂತಿನ ರೂಪದಲ್ಲಿ ಸರ್ಕಾರದವರು ವಸೂಲಿ ಮಾಡಬೇಕು. ಮಾನ್ಯ ಶೀರ್ನಾಳಿ ಚಂದ್ರಶೇಖರ್ ಅವರು ಹೇಳಿದಂತೆ ಇದಕ್ಕೆ ೪೦ ಕೋಟಿ ರೂಪಾಯಿಗಳು ಬೇಕಾಗಬಹುದು. ಒಂದು ಸಲ ಸರ್ಕಾರೀ ನೌಕರರಿಗೆ ಟಿ.ಎ. ಮತ್ತು ಡಿ.ಎ. ಜಾಸ್ತಿ ಮಾಡಿದರೆ ಸರ್ಕಾರಕ್ಕೆ ೩೦ ಕೋಟಿ ರೂ. ಗಳವರೆಗೆ ಹೆಚ್ಚಿನ ಖರ್ಚು ಬರುವಾಗ ಇದಕ್ಕಾಗಿ ಹಣ ಒದಗಿಸುವುದು ಅಷ್ಟೇನೂ ಕಷ್ಟದ ಕೆಲಸವಲ್ಲ. ಇದಕ್ಕಾಗಿ ವರ್ಷಕ್ಕೆ ೩-೪ ಕೋಟಿ ರೂಪಾಯಿಗಳಂತೆ ಒದಗಿಸಿದರೆ, ಅದರಿಂದ ರೈತರನ್ನು ಉದ್ಧಾರ ಮಾಡಿದಂತಾಗುವುದಿಲ್ಲ. ಆದ್ದರಿಂದ ಸರ್ಕಾರ ಧೈರ್ಯ ಮಾಡಿ ಇದಕ್ಕೆ ೩೦-೪೦ ಕೋಟಿ ರೂಪಾಯಿಗಳನ್ನಾದರೂ ಒದಗಿಸಬೇಕು.

ಶ್ರೀ ಎಸ್. ಎಂ. ಯಾಹ್ಯಾ.—೩೦-೪೦ ಕೋಟಿ ರೂಪಾಯಿ ಅಲ್ಲ, ೧೦೦ ಕೋಟಿ ರೂಪಾಯಿಗಿಂತ ಹೆಚ್ಚು ಹಣ ಇದಕ್ಕೆ ಬೇಕಾಗುತ್ತದೆ. ನೀವು ಹೇಳತಕ್ಕಂಥ ಸಲಹೆ ಚೆನ್ನಾಗಿದೆ. ಆದರೆ ಇದಕ್ಕೆ ಹೆಚ್ಚಿನ ಹಣ ಬೇಕಾಗುತ್ತದೆ. ಈಗಿನ ನಮ್ಮ ಈ ಪ್ರೋಗ್ರಾಮ್ ಏನಿದೆ, ಇದು ಪ್ರೋಗ್ರೆಸೀವ್ ಅಷ್ಟೇ ಅಲ್ಲ ರೆವಲ್ಯೂಷನರಿ ಕೂಡ ಆಗಿದೆ. ಇಂತಹ ಒಂದು ಪ್ರೋಗ್ರಾಮನ್ನು ಇಡೀ ದೇಶದಲ್ಲಿ ಎಲ್ಲಿಯೂ ಜಾರಿಗೆ ತರಲಿಲ್ಲ. ಈ ಬಗ್ಗೆ ನಮ್ಮ ರಾಜ್ಯದಲ್ಲಿಯೂ ಸಹ ಮಾತನಾಡುತ್ತಿದ್ದರೇ ಹೊರತು ಯಾರೂ ಜಾರಿಗೆ ತಂದಿರಲಿಲ್ಲ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಇದನ್ನು ಜಾರಿಗೆ ತರಲಾಗಿದೆ. ಅದಕ್ಕಾಗಿಯೇ ಕಳೆದ ಕೆಲವು ದಿವಸಗಳ ಹಿಂದೇ ಕೇಂದ್ರದ ಒಂದು ಕಮಿಟಿಯವರು ಈ ಯೋಜನೆಯ ಬಗ್ಗೆ ತಿಳಿದುಕೊಳ್ಳಲು ಇಲ್ಲಿಗೆ ಬಂದಿದ್ದರು. ಈ ಯೋಜನೆ ಇಷ್ಟೊಂದು ಪ್ರಗತಿದಾಯಕವಾಗಿರುವುದಕ್ಕೆ ಕಾರಣ ಏನು, ನಮ್ಮ ಆಕ್ಟ್ ಯಾವ ರೀತಿ ಇದೆ ಎಂಬುದನ್ನೆಲ್ಲಾ ತಿಳಿದುಕೊಳ್ಳಲು ಐ.ಎ.ಎಸ್. ಆಫೀಸರ್

ಗಳು ಇಲ್ಲಿಗೆ ಬಂದು ಎಲ್ಲವನ್ನೂ ನೋಡಿಕೊಂಡು ಹೋಗಿದ್ದಾರೆ. ಇಂತಹ ಒಂದು ರೆವಲೂಷನರಿ ಲೆಜಿಸ್ಲೇಷನ ಮಾಡುವಾಗ ಕೆಲವು ತೊಂದರೆಗಳು ಇರಬಹುದು. ನಾನು ಇಲ್ಲವೆಂದು ಹೇಳುವುದಿಲ್ಲ. ಆದಷ್ಟು ಬೇಗ ಇದು ಸುಧಾರಣೆಯಾಗ ಬೇಕಾಗಿದೆ. ಅದಕ್ಕಾಗಿಯೇ ನಾವು ಕೆಲವು ತಿದ್ದುಪಡಿಗಳನ್ನು ಇದಕ್ಕೆ ತರುತ್ತಿದ್ದೇವೆ. ತಾವು ಹಣ ಕೊಡುವ ವಿಚಾರದಲ್ಲಿ ಏನು ಸಲಹೆ ಕೊಡುತ್ತಿದ್ದೀರಿ, ಅದು ಖಂಡಿತವಾಗಿಯೂ ವಿಚಾರಣೆ ಮಾಡುವ ಸಲಹೆಯಾಗಿದೆ ಎಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮಂತ್ರಿಗಳು ಕೇರಳಕ್ಕೆ ಹೋಗಿ ಬಂದರೆ ಗೊತ್ತಾಗುತ್ತದೆ, ಅಲ್ಲಿ ಕಮ್ಯುನಿಸ್ಟ್ ಗವರ್ನಮೆಂಟ್‌ನ್ನು ಯಾವರೀತಿ ಟ್ಯಾಕಲ್ ಮಾಡಿದ್ದಾರೆ ಎಂದು ಗೊತ್ತಾಗುತ್ತದೆ. ಆಲ್ ಇಂಡಿಯಾ ಕಮಿಟಿ ಬಂದಾಗ ಅವರನ್ನು ಗ್ರಾಮಾಂತರ ಪ್ರದೇಶಗಳಿಗೆ ಕಳುಹಿಸಿ. ಬೇಕಾದರೆ ನಾನು ಅವರನ್ನು ಕರೆದುಕೊಂಡು ಹೋಗುತ್ತೇನೆ. I will take a challenge. We will pick up 100 tenants and take their evidence. ಯಾವುದೇ ತಾಲ್ಲೂಕಿನ ೧೦೦ ಜನ ಟೆನೆಂಟ್ಸ್‌ನಿಂದ ಎವಿಡೆನ್ಸ್ ತೆಗೆದುಕೊಳ್ಳೋಣ. ಟ್ರಿಬ್ಯುನಲ್ಸ್ ಆದಮೇಲೆ ಅವರು ಕೇಸ್ ಸಲುವಾಗಿ ಎಷ್ಟು ಸಲ ಹೋಗಿದ್ದಾರೆ, ಎಷ್ಟು ಹಣವನ್ನು ಖರ್ಚುಮಾಡಿದ್ದಾರೆ, ಎಷ್ಟು ಲಂಚ ಕೊಟ್ಟಿದ್ದಾರೆ, ಎಷ್ಟು ಭ್ರಷ್ಟಾಚಾರ ನಡೆದಿದೆ, ಪ್ರತಿಯೊಬ್ಬ ರೈತನಿಗೂ ಟ್ರಿಬ್ಯುನಲ್ಸ್ ಆದಮೇಲೆ ಎಷ್ಟು ಹಣ ವ್ಯಯವಾಗಿದೆ ಎನ್ನುವುದನ್ನು ಸರ್ವೆ ಮಾಡೋಣ. ರೈತ ಕೇಸ್ ಸಲುವಾಗಿ ತನ್ನ ಜಮೀನಿನ ೩ ಪಟ್ಟು ಹಣವನ್ನು ಕೊಟ್ಟಿದ್ದಾನೆ.

ಶ್ರೀ ಎಸ್. ಎಂ. ಯಾಹ್ಯಾ.—ಟ್ರಿಬ್ಯುನಲ್ಸ್ ವಿಚಾರದಲ್ಲಿ ಹೇಳುವುದಾದರೆ ಇವನ್ನು ಪೀಪಲ್ಸ್ ಕಾನ್‌ಸೆಪ್ಟ್‌ನಿಂದ ಮಾಡಿರತಕ್ಕಂಥಾದ್ದು. ಇಷ್ಟು ದೊಡ್ಡ ಪ್ರಮಾಣದಲ್ಲಿ ಇಂಪ್ಲಿಮೆಂಟ್ ಮಾಡುವಾಗ ಒಂದೆರಡು ಕಡೆ ತೊಂದರೆಯಾಗಿರಬಹುದು, ಖಂಡಿತವಾಗಿ ತೊಂದರೆಯಾಗಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಜನರಲ್ಲಿ ನಂಬಿಕೆ ಉಳಿಸಿಕೊಂಡಿರತಕ್ಕಂಥಾದ್ದು ಈ ಟ್ರಿಬ್ಯುನಲ್‌ಗಳು. ಅದನ್ನು ತಾವು ತಿಳಿದುಕೊಳ್ಳಬೇಕು. ಇದರಿಂದ ಲಕ್ಷಾಂತರ ಫ್ಯಾಮಿಲೀಸ್‌ಗೆ ಎಫೆಕ್ಟ್ ಆಗಿದೆ. ಮಾಲೀಕರಾಗತಕ್ಕ ರೈತರು ಒಂದೆರಡು ಸಾವಿರ ಅಲ್ಲ, ೭ ಲಕ್ಷಕ್ಕಿಂತ ಹೆಚ್ಚು ಅರ್ಜಿಗಳು ಇವೆ. ೩ ಲಕ್ಷ ಅರ್ಜಿಗಳನ್ನು ಈಗಾಗಲೇ ತೀರ್ಮಾನ ಮಾಡಿದ್ದಾರೆ. ಒಂದೊಂದು ಕೇಸಿಗೂ ಯಾವ ಕೋರ್ಟಿಗೆ ಹೋದರು ಎಷ್ಟು ವರ್ಷಗಳು ಆಗುತ್ತದೆ ಎನ್ನುವುದು ತಮಗೆ ಗೊತ್ತಿದೆ. ಈ ಟ್ರಿಬ್ಯುನಲ್ಸ್‌ನವರು ಲಕ್ಷಾಂತರ ಕೇಸುಗಳನ್ನು ಉತ್ತಮ ರೀತಿಯಲ್ಲಿ ತೀರ್ಮಾನ ಮಾಡಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಯಾವುದೇ ತಾಲ್ಲೂಕಿನಲ್ಲಿ ೧೦೦ ಜನ ಟೆನೆಂಟ್ಸ್‌ನ್ನು ತೆಗೆದುಕೊಂಡು ಎಗ್ಸಾಮಿನ್ ಮಾಡೋಣ, ಸರ್ವೆ ಮಾಡೋಣ. ಇದಕ್ಕೆ ತಾವು ಒಪ್ಪಿಕೊಳ್ಳಿ. ಲ್ಯಾಂಡ್ ಟ್ರಿಬ್ಯುನಲ್ಸ್‌ನಿಂದ ಎಷ್ಟು ನಿರ್ಣಯಗಳಾಗಿವೆ ಎಂದು ಎಗ್ಸಾಮಿನ್ ಮಾಡೋಣ. ರೈತರಿಗೆ ಟ್ರಿಬ್ಯುನಲ್ಸ್‌ಗ ಹೋಗಲಿಕ್ಕೆ, ಕೇಸ್ ಮಾಡಲಿಕ್ಕೆ ಎಷ್ಟು ಹಣ ಖರ್ಚಾಗಿದೆ, ಎಷ್ಟು ತೊಂದರೆಯಾಗಿದೆ ಎನ್ನುವುದನ್ನು ಅರ್ಥಮಾಡಿಕೊಳ್ಳಿ. ಜನ ಓಟು ಕೊಟ್ಟಿದ್ದಾರೆ, ಅದರ ಬಗ್ಗೆ ಚರ್ಚೆ ಮಾಡುವುದು ಪಾಲಿಸಿ ಮ್ಯಾಟರ್ ಆಗುತ್ತದೆ. ಲ್ಯಾಂಡ್ ರಿಫಾರ್ಮ್ಸ್ ಒಂದಕ್ಕೆ ಜನ ಓಟು ಕೊಟ್ಟಿದ್ದಾರೆ ಎನ್ನುವ ಮಾತನ್ನು ನಾನು ಒಪ್ಪುವುದಿಲ್ಲ. ಯಾವುದೇ ತಾಲ್ಲೂಕನ್ನು ತೆಗೆದುಕೊಂಡು ಸರ್ವೆ ಮಾಡೋಣ. ನಿಮ್ಮ ಆಫೀಸರನ್ನು ಕಳುಹಿಸಿಕೊಡಿ, ಇದಕ್ಕೆ ನೀವು ಒಪ್ಪಿಕೊಳ್ಳಿ. I give a challenge to the Government.

ಶ್ರೀ ಎಸ್. ಎಂ. ಯಾಹ್ಯಾ.—ಚಾಲೆಂಜ್, ಕೌಂಟರ್ ಚಾಲೆಂಜ್ ಬೇಡ. ನಾನೂ ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ಬಂದಿದ್ದೇನೆ. ನನಗೂ ಅನುಭವ ಇದೆ. ಹೆಚ್ಚು ಹೆಚ್ಚು ಹಳ್ಳಿಗಳಿಗೆ ಹೋಗುವವರಲ್ಲಿ ನಾನೂ ಒಬ್ಬ, ನಾನೂ ಕೂಡ ಹೋಗಿ ಬಂದವನೇ, ನನಗೂ ಸ್ವಲ್ಪ ಅನುಭವ ಇದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕೆಲವು ಟ್ರಿಬ್ಯುನಲ್‌ಗಳಲ್ಲಿ ಒಳ್ಳೆಯ ಸದಸ್ಯರಿದ್ದಾರೆ, ಒಳ್ಳೆಯ ಸದಸ್ಯರು ಎಲ್ಲೆಲ್ಲಿದ್ದಾರೆ ಅಲ್ಲಿ ಒಳ್ಳೆಯ ಕೆಲಸವಾಗಿದೆ. ಆದರೆ ಕೆಲವು ಕಡೆ ಟೆನೆಂಟ್ಸ್‌ಗೆ ಹೆಚ್ಚು ತೊಂದರೆಯಾಗಿದೆಯೆನ್ನುವುದನ್ನು ಅರ್ಥಮಾಡಿಕೊಳ್ಳಿ. ತಾವು ಕೋರ್ಟಿಗೆ ಹೋಗಿದ್ದರೆ ಎಷ್ಟೋ ವರ್ಷಗಳಾಗುತ್ತಿತ್ತು ಎನ್ನುವ ಮಾತನ್ನು ಹೇಳಿದಿರಿ. ಅಂಕಿಸಂಖ್ಯೆಗಳನ್ನು ತೆಗೆದುಕೊಂಡು ನೋಡೋಣ, ಸರ್ಕಾರದ ಫೈಲ್ ತೆಗೆದುಕೊಂಡು ನೋಡೋಣ. ೧೯೭೪ರಲ್ಲಿ ಈ ಆಕ್ಟ್ ಬಂತು. ಆಗ ೬ ಲಕ್ಷ ಅರ್ಜಿಗಳು ಇದ್ದವು. Those applications were filed before the Munsiffs.

But 1/10 of the total applications were pending and 90 percent of the applications were decided by the Munsiffs. According to 1965 Act when the compensation was paid he becomes the owner of the land. Rent was payable to the Land-lord then, but now the rent is paid to the Government. ಹಿಂದಿನ ಆಕ್ಟಿಗೂ ಇದಕ್ಕೂ ಏನು ವ್ಯತ್ಯಾಸ ಇಲ್ಲ. Most of the cases *i.e.* 80 percent were decided in favour of tenants. ಇದರಲ್ಲಿ ಒಂದು ಬದಲಾವಣೆ ಮಾಡಿದ್ದೀರಿ. Even then also 90 percent of the applications of land-lords were dismissed. ಆದುದರಿಂದ ಹಿಂದೆ ಕೆಲಸ ಮಾಡಿದಂಥ ನ್ಯಾಯಾಧೀಶರಿಗೆ ಅಪಚಾರ ಮಾಡಬೇಡಿ.

ಶ್ರೀ ಎಸ್. ಎಂ. ಯಾಹ್ಯಾ.—ನಿಮ್ಮ ಧಾರವಾಡ ಜಿಲ್ಲೆಯಲ್ಲಿ ಎಷ್ಟು ಜನ ರೈತರು ಭೂಮಾಲೀಕರಾಗಿದ್ದಾರೆ? ಟ್ರಿಬ್ಯುನಲ್ಸ್ ಆದ ಮೇಲೆ ಎಷ್ಟು ಜನ ರೈತರು ಭೂಮಾಲೀಕರಾಗಿದ್ದಾರೆ? ಹಿಂದೆ ಭೂಮಾಲೀಕರ ಪರವಾಗಿ ತೀರ್ಮಾನಗಳು ಆಗಿವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮುನ್ಸಿಫರ್ ಡಿಸೈಡ್ ಮಾಡಿದವರು. ತಾವು ಮಂತ್ರಿಗಳಾಗಿದ್ದೀರಿ, ಆ ರೀತಿ ಹೇಳಬಾರದು. Then nearly 80 percent of the cases were decided in favour of tenants.

ONE HON. MEMBER.—No Sir, it is a wrong figure.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ವಿಧಾನ ಪರಿಷತ್ತಿನ ಸದಸ್ಯನಾಗಿದ್ದಾಗ ಪ್ರಶ್ನೆಯನ್ನು ಕೇಳಿದ್ದೇನೆ. Munsiffs ಇದ್ದಾಗ ಆದಂಥ ತೀರ್ಮಾನವನ್ನು ಹೇಳಿ, ರಿಕಾರ್ಡ್ ಇಲ್ಲದೇ ಇದ್ದರೆ ನಾಳೆ ನೋಡಿದ್ದು ಹೇಳಿ. ತಪ್ಪಾಗಿದ್ದರೆ ನಾನು ಕರೆಕ್ಷನ್ ಮಾಡಿಕೊಳ್ಳುತ್ತೇನೆ. ೯೦ ಪರ್ಸೆಂಟ್ ಡಿಸ್‌ಮಿಸ್ ಆಗಿದೆ. ಇದಕ್ಕೆ ನಾನು ಸಲಹೆ ಕೊಡುತ್ತೇನೆ. ಏನೆಂದರೆ, ಟ್ರಿಬ್ಯುನಲ್ಸ್ ಮಾಡುವ ಬಗ್ಗೆ ಸರ್ಕಾರ ಕೊಟ್ಟಂಥ ಆಶ್ವಾಸನೆ ಏನಿದೆ ಅದರಂತೆ ಕೂಡಲೇ ಟ್ರಿಬ್ಯುನಲ್‌ಗಳನ್ನು ಮಾಡಬೇಕು. ಕಳೆದ ೨ ತಿಂಗಳುಗಳಿಂದ ಟ್ರಿಬ್ಯುನಲ್ಸ್ ಇಲ್ಲದೆ ಅನೇಕ ಜನರಿಗೆ ತೊಂದರೆಯಾಗುತ್ತಾ ಇದೆ. ಯಾವನೇ ಒಬ್ಬ ಟೆನೆಂಟ್ ಸಿವಿಲ್ ಕೋರ್ಟಿಗೆ ಹೋಗುವುದಕ್ಕಾಗುವುದಿಲ್ಲ. ಅನೇಕ ಕಡೆ ಜಮೀನಿನ ಬಗ್ಗೆ ಹೊಡೆದಾಟಗಳಾಗಿವೆ, ಇಂತಹ ಸಂದರ್ಭಗಳಲ್ಲಿ ಅವರು ಎಲ್ಲಿಗೆ ಹೋಗಬೇಕು. ಟ್ರಿಬ್ಯುನಲ್ಸ್‌ಗೆ ಹೋಗಿ ಇನ್‌ಜಂಕ್ಷನ್ ತೆಗೆದುಕೊಳ್ಳತಕ್ಕ ಅವಕಾಶವಿಲ್ಲ. ಆದುದರಿಂದ ಟ್ರಿಬ್ಯುನಲ್‌ಗಳನ್ನು ಕೂಡಲೇ ಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ಕೊಟ್ಟ ಮಾತಿನಂತೆ ಪ್ರತಿಪಕ್ಷದ ಸದಸ್ಯರನ್ನು ಟ್ರಿಬ್ಯುನಲ್‌ನಲ್ಲಿ ಹಾಕಬೇಕು. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ರೆವಿನ್ಯೂ ಮಂತ್ರಿಗಳು ಮಾತು ಕೊಟ್ಟಿದ್ದಾರೆ. ಪ್ರತಿಪಕ್ಷದ ಒಬ್ಬ ಸದಸ್ಯರನ್ನು ಟ್ರಿಬ್ಯುನಲ್ಸ್‌ನಲ್ಲಿ ಹಾಕುವುದಕ್ಕೆ ಒಪ್ಪಿಕೊಂಡಿದ್ದಾರೆ. ಇದನ್ನು ಆದಷ್ಟು ಬೇಗ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಇನ್ನು ಬ್ಯಾಕ್‌ವರ್ಡ್ ಕ್ಲಾಸ್, ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಹಿಂದುಳಿದ ವರ್ಗಗಳ ಬಗ್ಗೆ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡಿರುವ ಬಗ್ಗೆ ಬಜೆಟ್‌ನಲ್ಲಿ ಉಲ್ಲೇಖವಿದೆ. ಜನತಾ ಮನೆಗಳ ಬಗ್ಗೆ ಸೈಟುಗಳನ್ನು ಹಂಚತಕ್ಕ ಬಗ್ಗೆ ಮತ್ತು ಸ್ಕಾಲರ್‌ಶಿಪ್ ಕೊಡತಕ್ಕ ಬಗ್ಗೆ ವಿಚಾರಗಳನ್ನು ಹೇಳಿದ್ದಾರೆ. ಜನತಾ ಮನೆಗಳ ಯೋಜನೆ ಒಂದು ಒಳ್ಳೆಯ ಕಾರ್ಯ. ಈ ಮನೆಗಳನ್ನು ಕಟ್ಟತಕ್ಕ ವಿಧಾನ, ಕಟ್ಟತಕ್ಕ ರೀತಿ ಮತ್ತು ಕಟ್ಟಡದ ವ್ಯವಸ್ಥೆಯನ್ನು ನೋಡಿದಾಗ ಮಾತ್ರ ಮನಸ್ಸಿಗೆ ಬಹಳ ವೇದನೆಯಾಗುತ್ತದೆ. ಅನೇಕ ಕಡೆ ಮನೆಗಳನ್ನು ಕಟ್ಟಲು ಕಾಂಟ್ರಾಕ್ಟಿಗೆ ಕೊಟ್ಟಿದ್ದಾರೆ. ಕಂಟ್ರಾಕ್ಟ್‌ದಾರರು ಇವರು ಕೊಡತಕ್ಕ ೨,೦೦೦ ರೂಪಾಯಿ ಹಣದಲ್ಲಿ ತನಗೆ ಉಳಿಸಿಕೊಂಡು, ಅಧಿಕಾರಿಗಳಿಗೆ ಕೊಟ್ಟು ಇನ್ನೆಂತಹ ಮನೆಗಳನ್ನು ಕಟ್ಟಬಹುದು. ಇವತ್ತು ಅನೇಕ ಕಡೆ ಮನೆಗಳು ಬೀಳುತ್ತಾ ಇವೆ, ವಾಸಕ್ಕೆ ಸರಿಯಾದ ವ್ಯವಸ್ಥೆಯಿಲ್ಲ. ಕನಿಷ್ಟಪಕ್ಷ ೧೦ ವರ್ಷಗಳಾದರೂ ವಾಸಕ್ಕೆ ಅನುಕೂಲವಾಗುವ ರೀತಿ ಮನೆಗಳನ್ನು ಕಟ್ಟಬೇಕು ಎಂದು ನಾನು ಅನೇಕ ಸಲ ಹೇಳಿದ್ದೇನೆ. ಈ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಕಳೆದ ೬ ವರ್ಷಗಳಲ್ಲಿ ಹರಿಜನರ ಗಿರಿಜನರ ಮತ್ತು ಹಿಂದುಳಿದವರ ಆರ್ಥಿಕಮಟ್ಟ ಏನಾದರೂ ಸುಧಾರಣೆಯಾಗಿದೆಯೋ ಎಂದು ನಾನು ಕೇಳುತ್ತಾ ಇದ್ದೇನೆ.

ಕಳೆದ ೬ ವರ್ಷಗಳಲ್ಲಿ ಈ ಜನರ ನಿರುದ್ಯೋಗ ಸಮಸ್ಯೆ ಬಿಡುಗಡೆ ಆಗಿದೆಯೇ ? ಇವತ್ತು ಹಳ್ಳಿಗಳಿಗೆ ಹೋಗಿ ನೋಡಿದರೆ, ಪಟ್ಟಣಗಳಲ್ಲಿ ನೋಡಿದರೆ ಆ ಜನರು ಇನ್ನೂ ಬಡವರು ಆಗುತ್ತಾ ಹೋಗುತ್ತಿದ್ದಾರೆ ಶ್ರೀಮಂತರು ಇನ್ನೂ ಶ್ರೀಮಂತರಾಗುತ್ತಾ ಹೋಗುತ್ತಿದ್ದಾರೆ. ಹಳ್ಳಿಗಳಲ್ಲಿಯ ಪರಿಸ್ಥಿತಿಯನ್ನು ತಾವು ನೋಡಿದಾಗ ಬಡವರು ಇನ್ನೂ ಬಡವರಾಗುತ್ತಾ ಹೋಗುತ್ತಿದಾರೆ. ಶ್ರೀಮಂತರು ಶ್ರೀಮಂತರಾಗುತ್ತಾ ಹೋಗುತ್ತಿದ್ದಾರೆ. ಕೆಲವರು ಮಾತ್ರ ಜಮೀನುಗಳನ್ನು ಇಟ್ಟುಕೊಂಡು ವ್ಯವಹಾರಗಳನ್ನು ಮಾಡುತ್ತಾ, ಬಡ್ಡಿ ವ್ಯವಹಾರಗಳನ್ನು ಮಾಡುತ್ತಾ ಇವರು ಇನ್ನೂ ಶ್ರೀಮಂತರಾಗುತ್ತಿದ್ದಾರೆ. ರಾಜಕೀಯ ಪಟ್ಟಭದ್ರ ಹಿತಾಸಕ್ತಿಗಳೆಂದು ಏನು ಹೇಳುತ್ತೀರಿ ಅವರು ಸರ್ಕಾರದಿಂದ ಬರತಕ್ಕ ಎಲ್ಲಾ ಸೌಕರ್ಯಗಳನ್ನು ಒಂದಲ್ಲ ಒಂದು ರೀತಿಯಲ್ಲಿ ಪಡೆದುಕೊಳ್ಳುತ್ತಿದ್ದಾರೆ, ಅದು ಬಡವರಿಗೆ ಸಿಗದ ಹಾಗೆ ತಾವೇ ಎಲ್ಲಾ ಸೌಕರ್ಯವನ್ನು ಪಡೆದುಕೊಳ್ಳುತ್ತಿದ್ದಾರೆ. ಸರ್ಕಾರದವರು ಯಾವುದೇ ಒಂದು ಯೋಜನೆ ಹಾಕಿದರೆ ಅದು ಸಾಮಾನ್ಯ ಜನತೆಗೆ ತಲುಪುವುದಿಲ್ಲ, ಈ ಪಟ್ಟಭದ್ರ ಹಿತಾಸಕ್ತಿಗಳೇನಿದ್ದಾರೆ ಅವರು ನಮ್ಮ ಪಕ್ಷದಲ್ಲಿಯೂ ಇದ್ದಾರೆ ನಿಮ್ಮ ಪಕ್ಷದಲ್ಲಿಯೂ ಇದ್ದಾರೆ, ಇದನ್ನು ರಾಜಕೀಯ ದೃಷ್ಟಿಯಿಂದ ಹೇಳುತ್ತಿಲ್ಲ, ಅವರೇ ಎಲ್ಲಾ ಸೌಕರ್ಯವನ್ನು ಪಡೆದುಕೊಳ್ಳುತ್ತಿದ್ದಾರೆ. ಆದುದರಿಂದ ಅದು ಆಗದ ಹಾಗೆ ವ್ಯವಸ್ಥೆಯನ್ನು ಮಾಡಬೇಕಾಗಿದೆಂದು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ.

ಇನ್ನು ಕೊನೆಯದಾಗಿ, ಪ್ರಾಹಿಬಿಷನ್ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳವರು ತಮಿಳುನಾಡಿನಲ್ಲಿ ಪ್ರವಾಸ ಮಾಡುವಾಗ ಒಂದು ಹೇಳಿಕೆ ಕೊಟ್ಟಿದ್ದಾರೆ. ನಮ್ಮ ಸಂವಿಧಾನದಲ್ಲಿ ಒಪ್ಪಿಕೊಂಡಿದ್ದೇವೆ, ಪಾನನಿರೋಧವನ್ನು ಜಾರಿಗೆ ತರಬೇಕು ಎನ್ನುವುದಕ್ಕೆ ಬದ್ಧರಾಗಿದ್ದೇವೆ, ಅದನ್ನು ಹಂತಹಂತವಾಗಿ ತರಬೇಕು ಎನ್ನುವಾಗ ಅದು ರಾಜ್ಯರಾಜ್ಯಗಳ ಆರ್ಥಿಕ ಸ್ಥಿತಿಗಳ ಮೇಲೆ ಅವಲಂಬಿತವಾಗಿರುತ್ತದೆ ಆದರೆ ಇವತ್ತು ನಮ್ಮ ಮುಖ್ಯಮಂತ್ರಿಗಳವರು ಈ ರೀತಿ ಹೇಳಿದ್ದಾರೆ.

"Prohibition would not succeed in India and added many countries had failed in this venture. Talking to newsmen at the Grant Anicut, near here, he said anything could be converted into alcohol, right from fruits to nuts and anybody could manufacture it at any place. the Government could not post policemen in front of every house. he said.

Mr. Urs said in the U.S. they tried it and failed. The Soviet Union too wanted to enforce prohibition, but later dropped the idea......"

ಇದನ್ನು ಏತಕ್ಕೆ ಉಲ್ಲೇಖ ಮಾಡುತ್ತಿದ್ದೇನೆಂದರೆ. ನಾವು ಸಂವಿಧಾನಕ್ಕೆ ಬದ್ಧರಾಗಿದ್ದೇವೆ. ಇದರ ಜೊತೆಗೆ ನನಗೆ ಜ್ಞಾಪಕ ಇದ್ದಮಟ್ಟಿಗೆ ಹೇಳುವುದಾದರೆ ಮಾನ್ಯ ಮುಖ್ಯಮಂತ್ರಿಗಳವರು ಕಾಂಗ್ರೆಸ್ (ಐ) ಪಕ್ಷದ ಅಧ್ಯಕ್ಷರಾಗಿದ್ದಾರೆ. ಕಾಂಗ್ರೆಸ್ ಪಕ್ಷದ ಸದಸ್ಯರು ಆಗಬೇಕಾದರೆ ಒಂದು ಫಾರಂ ಇದೆ ಅದರಲ್ಲಿ ಒಂದು ಪ್ರತಿಜ್ಞೆ ಇದೆ. ಅದರಲ್ಲಿಏನು ಹೇಳಿದ ಎಂದರೆ ಪಾನನಿರೋಧದ ನೀತಿಯಲ್ಲಿ ನನಗೆ ಸಂಪೂರ್ಣ ವಿಶ್ವಾಸ ನಂಬಿಕೆ ಇದೆ ಎನ್ನುವ ಮಾತುಗಳು ಅದರಲ್ಲಿ ಇದೆ.

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್ :– ತಾವು ಪಾನನಿರೋಧವನ್ನು ಜಾರಿಗೆ ತರಬೇಕೆಂದು ಹೇಳುತ್ತಿದ್ದೀರಿ, ಆದರೆ ನಮ್ಮ ಪ್ರಜಾಪ್ರಭುತ್ವದಲ್ಲಿ ಆ ರೀತಿ ನೀವು ಕಡ್ಡಾಯಮಾಡಿದರೆ ಆ ರೀತಿ ಕುಡಿಯುವ ಮನುಷ್ಯನ ನೈತಿಕ ಹಕ್ಕಿಗೆ ಲೋಪ ಮಾಡಿದಂತೆ ಆಗಲಿಲ್ಲವೇ ? ಮೂಲಭೂತ ಹಕ್ಕಿಗೆ ಕುಂದು ಉಂಟಾಗುವುದಿಲ್ಲವೇ ?

ಶ್ರೀ ಮೈಕಲ್ ಬಿ. ಫರ್ನಾಂಡೀಸ್ :– ಹಾಗಿದ್ದರೆ ಸಂವಿಧಾನದಲ್ಲಿ ತಿದ್ದುಪಡಿ ತನ್ನಿ.

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್:–ಮಾನ್ಯ ಮಿತ್ರರಾದ ಶ್ರೀ ಮೈಕಲ್ ಬಿ. ಫರ್ನಾಂಡಿಸ್‌ರವರು ಒಂದು ಮಾತನ್ನು ಹೇಳಿದರು ಅದನ್ನು ನಾನು ಒಪ್ಪುತ್ತೇನೆ. ಪ್ರಜಾಪ್ರಭುತ್ವದಲ್ಲಿ ಮನುಷ್ಯನಿಗೆ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೂ ಸ್ವಾತಂತ್ರ್ಯವಿರಬೇಕು ಎಂದು ತಾವು ಹೇಳಿದ ಹಾಗೆ ಆಗುತ್ತದೆ. ತಾವು ಹೇಳುವ ಪ್ರಕಾರ ಸಂವಿಧಾನದಲ್ಲಿ ಆತ್ಮಹತ್ಯೆ ಕೂಡ ಮಾಡಿಕೊಳ್ಳಬಹುದೆಂದು ಸೇರಿಸಬೇಕಾಗುತ್ತದೆ.

ಶ್ರೀ ಸಿ. ಎಂ. ಇಬ್ರಾಹಿಂ. – ಕಾಂಗ್ರೆಸ್ (ಐ) ಫಾರಂ ಇನ್ನೂ ಪ್ರಿಂಟ್ ಆಗಿಲ್ಲವೆಂದು ಕಾಣುತ್ತದೆ.

ಶ್ರೀ ಆರ್. ಗುಂಡೂರಾವ್. – ನಾನು ಮೀಟಿಂಗ್‌ಗೆ ಹೋಗಬೇಕಾಗಿರುವುದರಿಂದ ತಮ್ಮ ಅಪ್ಪಣೆಯ ಮೇರೆಗೆ ಒಂದು ವಿಷಯವನ್ನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ. ಪ್ರಾಹಿಬಿಷನ್ ವಿಷಯ ಹೇಳುತ್ತಿಲ್ಲ. ಬಿ.ಟಿ.ಎಸ್.ನವರು ಏನು ಸತ್ಯಾಗ್ರಹ ಮಾಡುತ್ತಿದ್ದರು ಅದನ್ನು ಹಿಂದಕ್ಕೆ ತೆಗೆದು ಕೊಂಡಿದ್ದಾರೆ. ಈಗ ಬಸ್ಸುಗಳು ಮಾಮೂಲಿನಂತೆ ಓಡಾಡುತ್ತಿವೆ.

ಶ್ರೀ ಎಸ್.ಆರ್. ಬೊಮ್ಮಾಯಿ. – ಆಟೋರಿಕ್ಷಾಗಳ ಬಗ್ಗೆ ಹೇಳಲಿಲ್ಲ ?

ಶ್ರೀ ಆರ್. ಗುಂಡೂರಾವ್. – ನಾಳೆ ಸ್ಟೇಟ್‌ಮೆಂಟ್ ಮಾಡುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ. – ಸ್ವಾಮಿ, ನಾನು ಕೊನೆಯದಾಗಿ ಈ ಪ್ರಾಹಿಬಿಷನ್ ಬಗ್ಗೆ ಹೇಳಿ ಬಾಕಿಯ ವಿಷಯವನ್ನು ನಾಳೆಯ ದಿವಸ ಹೇಳುತ್ತೇನೆ. ಈ ಪ್ರಾಹಿಬಿಷನನ್ನು ಏತಕ್ಕೆ ನಮ್ಮ ಹಿರಿಯರು ಸಂವಿಧಾನದಲ್ಲಿ ಅಳವಡಿಸಿದ್ದಾರೆಂದರೆ ತಾವು ಅರ್ಥಮಾಡಿಕೊಳ್ಳಬೇಕು. ನಮ್ಮ ರಾಷ್ಟ್ರದಲ್ಲಿ ನೂರಕ್ಕೆ ತೊಂಬತ್ತರಷ್ಟು ಬಡವರಾಗಿದ್ದ, ಈ ಕುಡಿತದಿಂದ ಆ ಬಡಜನರೆಲ್ಲಾ ನಷ್ಟಕ್ಕೆ ಒಳಗಾಗಿದ್ದಾರೆ ಇದರಿಂದ ಅವರ ಬೆಳವಣಿಗೆಯಾಗಲೀ, ಅಭಿವೃದ್ಧಿಯಾಗಲೀ ಆಗುತ್ತಿಲ್ಲ. ಆದುದರಿಂದ ಅದನ್ನು ತಡೆಗಟ್ಟಬೇಕು ಎನ್ನುವ ದೃಷ್ಟಿಯಿಂದ ಹೇಳಿದ್ದಾರೆ.

ಒಬ್ಬ ಸದಸ್ಯರು. – ನೀವು ಸಹ ಹಿಂದೆ ಕಾಂಗ್ರೆಸ್‌ನಲ್ಲಿಯೇ ಇದ್ದೀರಿ ಆಗ ಇದನ್ನು ಏತಕ್ಕೆ ಜಾರಿಗೆ ತರಲಿಲ್ಲ ?

ಶ್ರೀ ಎಸ್.ಆರ್. ಬೊಮ್ಮಾಯಿ :– ನಾನು ಕಾಂಗ್ರೆಸ್‌ನಲ್ಲಿ ಇರಲಿಲ್ಲ. ನಾನು ಮೊದಲಿನಿಂದಲೂ ವಿರೋಧ ಪಕ್ಷದಲ್ಲಿಯೇ ಇದ್ದೇನೆ. ಆಗಿನಿಂದಲೂ ಇದನ್ನು ವಿರೋಧ ಮಾಡುತ್ತಾ ಬಂದಿದ್ದೇನೆ. ನಾನು ಯಾವ ಪಕ್ಷಕ್ಕೆ ಹೋಗುತ್ತೇನೋ ಅದು ವಿರೋಧ ಪಕ್ಷವಾಗಿರುತ್ತದೆ. ಅದು ನನ್ನ ಹಣೆಬರಹ. ಆ ವಿಚಾರ ಇಲ್ಲಿ ಬೇಡ. ಪ್ರಾಹಿಬಿಷನ್ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳವರೇ ಅದು ಸಕ್ಸಸ್‌ಫುಲ್ ಆಗುವುದಿಲ್ಲವೆಂದು ಹೇಳಿ ಬಿಟ್ಟರೆ, ಪಾನನಿರೋಧವನ್ನು ಜಾರಿಗೆ ತರತಕ್ಕಂಥ ಕಾರ್ಯಕ್ರಮದ ಉದ್ದೇಶವೇನಾಗಬೇಕು ? ಅದನ್ನು ಕೈ ಬಿಟ್ಟಹಾಗೆಯೇ ಆಗುತ್ತದೆ.

ಶ್ರೀ ಎಸ್.ಎಂ. ಯಾಹ್ಯಾ. – ಮಾನ್ಯ ಅಧ್ಯಕ್ಷರೇ. ಮಾನ್ಯ ವಿರೋಧ ಪಕ್ಷದ ನಾಯಕರವರು ಮಾನ್ಯ ಮುಖ್ಯಮಂತ್ರಿಗಳವರು ಹೇಳದತಕ್ಕಂಥ ಸ್ಟೇಟ್‌ಮೆಂಟನ್ನು ತಪ್ಪಾಗಿ ತಿಳಿದುಕೊಂಡ ಹಾಗೆ ಕಾಣುತ್ತದೆ. He never said 'I don't have faith in Prohibition'. ಪ್ರಾಕ್ಟಿಕಲ್ ಆಗಿ ಈಗಿನ ಪರಿಸ್ಥಿತಿಯಲ್ಲಿ ಕಾನೂನು ಪ್ರಕಾರ ಪ್ರಾಹಿಬಿಷನ್ ತಂದು ಬಿಟ್ಟರೆ ಅದು ಫಲಪ್ರದ ಆಗುವುದಿಲ್ಲ ವೆಂದು ಹೇಳಿದ್ದಾರೆ.

(Mr. Speaker in the Chair)

The first sentence is that Prohibition would not succeed. That does not mean he has no belief in Prohibition. Success of Prohibition is one thing and accepting the policy of Prohibition is another. That he has made clear.

6–00 P.M.

MR. SPEAKER. – The Hon. Finance Minister can kindly note down the points for which he wants to reply and he can cover them all during his reply.

ಶ್ರೀ ಎಸ್.ಆರ್. ಬೊಮ್ಮಾಯಿ :– ಸ್ವಾಮಿ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ. ಇದಕ್ಕೆ ಬೇರೆ ಅರ್ಥವಿಲ್ಲ. ಮಾನ್ಯ ಅರ್ಥ ಸಚಿವರ ಅನಾವಶ್ಯಕವಾಗಿ ಅದನ್ನು ಬೇರೆ ರೀತಿ ಹೇಳಲು ಹೋಗುವುದು ಸರಿಯಲ್ಲ. ನಾಳೆ ಮಾನ್ಯ ಮುಖ್ಯಮಂತ್ರಿಗಳು ಬರುತ್ತಾರೆ ಅವರೇ ಹೇಳಲಿ.ಅವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ.

The press statement says as follows :-

"The Karnataka Chief Minister Sri. Devaraj Urs said to-day that the prohibition would not succeed in India and many countries have failed..."

ಮಾನ್ಯ ಮುಖ್ಯಮಂತ್ರಿಗಳಾದ ಎಂ.ಜಿ.ರಾಮಚಂದ್ರನ್ ಹೇಳಿದ್ದಾರೆ. ಕರ್ನಾಟಕದ ಮುಖ್ಯಮಂತ್ರಿಗಳು ಯಾರೋ ಹೇಳಿದ ಮಾತನ್ನು ಕೇಳಿ ಈ ರೀತಿ ಹೇಳಿರುವುದು ಸರಿಯಲ್ಲವೆಂದು. ನನಗೆ ಇದರಿಂದ ಮತ್ತೊಬ್ಬ ಮುಖ್ಯಮಂತ್ರಿಗಳನ್ನು ಟೀಕೆ ಮಾಡುವ ರೀತಿಯಲ್ಲಿ ಅವಕಾಶ ಕೊಟ್ಟರಲ್ಲ ಎಂದು ವ್ಯಥೆಯಾಗುತ್ತದೆ.

The Tamil Nadu Chief Minister Sri M.G. Ramachandran has said that the Chief Minister Sri Devaraj Urs had no guts or no capacity to implement it. He has further stated that he will show how it should be implemented successfully. Therefore, I would like to say that prohibition is an accepted policy of the Government. It is a part of our Constitution. Implementation is quite essential in the interest of the back ward people, Harijans and the poorer people of this country. ಇದು ಹೇಳದೆ ಹೋದರೆ ನಮ್ಮ ಯೋಜನೆ ಹಾಗೂ ಹಣ ಪೋಲಾಗಿ ಹೋಗುತ್ತದೆ ಇದನ್ನು ಯಾವರೀತಿ ಮಾಡಬೇಕು ಎನ್ನುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾದ ಒಂದು ನೀತಿಯನ್ನು ಹಾಕಿಕೊಂಡು ಕಾರ್ಯ ಮಾಡಬೇಕಾಗುತ್ತದೆ ಆದ್ದರಿಂದ ನಾಳೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಲಿ. ಇಲ್ಲದೆ ಹೋದರೆ ಹರಿಜನ ಗಿರಿಜನರು ಹಾಗೂ ಹಿಂದುಳಿದವರಿಗೆ ದೊಡ್ಡ ಅನ್ಯಾಯವಾಗುತ್ತದೆ ಎಂದು ಹೇಳಿ ತಮ್ಮ ಅಪ್ಪಣೆಯನ್ನು ಪಡೆದು ನನ್ನ ಇಂದಿನ ಮಾತನ್ನು ಮುಗಿಸುತ್ತೇನೆ.

Pamphlets thrown from the visitors Gallery

(Some persons in the Visitors Gallery threw pamphlets shouting).

MR. SPEAKER – This is not proper. They should not do like this in this Hon. House.

Now the House stands adjourned to meet tomorrow at 9-00 A.M.

The House adjourned at Five Minutes Past Six of the Clock to meet again at Nine of the Clock on Thursday the 15th June 1978.

ANNEXURE

THE KARNATAKA INDUSTRIAL AREAS DEVELOPMENT (AMENDMENT) BILL, 1978

(L. A. BILL No. 8 OF 1978)

A Bill further to amend the Karnataka Industrial Areas Development Act, 1966.

Whereas it is expedient further to amend the Karnataka Industrial Areas Development Act, 1966 (Karnataka Act 18 of 1966):

Be it enacted by the Karnataka State Legislature in the Twenty-ninth Year of the republic of India as follows :

1. **Short title and commencement.**— (1) This Act may be called the Karnataka Industrial Areas Development (Amendment) Act, 1978.

(2) It shall come into force at once.

2. **Insertion of new section 34A.**—After section 34 of the Karnataka Industrial Areas Development Act, 1966 (Karnataka Act 18 of 1966 the following section shall be inserted, namely,—

"**34A Demolition or alteration of unauthorised construction or alteration.**—(1) If any person constructs or alters any building or commences or carries on such construction or alteration in contravention of the Act or rules made thereunder or of any regulation or condition subject to which permission has been given for such construction or alteration, the Executive Member may, whether or not offeneder be prosecuted under this Act, by notice.—,

(a) require the offender to show sufficient cause by a written statement signed by him and sent to the Executive Member on or before such date as may be specified in the notice, why such construcction or alteration should not be demolished or altered : or

(b) require the offender to appear before the Executive Member either personally or by a duly authorised agent on such date and at such time and place as may be specified in the notice and show cause as aforesaid.

(2) If any person on whom such notice is served fails to show sufficient cause to the satisfaction of the Executive Member why the construction or alteration should not be so demolished or altered the Executive Member may pass an order directing such demolition or alteration by such period not exceeding two months as may be specified in the order.

(3) If the person against whom an order for demolition or alteration is made under sub-section (2) fails to comply with the said order, the Execution Member may cause such demolition or alteration to be made and may order that the expenses incurred therefor shall be recoverable from the person concerned as arrears of land revenue.

(4) No order to recover the expenses incurred for demolition or alteration as arrears of land revenue shall be passed under sub-section (3) unless the person concerned is required by notice to show cause why the expenses should not be so recovered and is given an opportunity of being heard.

(5) Any person aggrieved by an order under sub-section (2) may within thirty days of the said order appeal to the Board which, after hearing the parties to the appeal may either allow or dismiss the appeal or vary any part of the said order.

(6) Any person aggrieved by the order passed in appeal under sub-section (5), may institute a suit within three months of the said order as regards the quantum of the amount ordered to be recovered as expenses. The time requisite for obtainining the copy of the order shall be excluded while computing the said period of three months.

(7) No Court shall entertain such suit unless the plaintiff has produced a receipt for having paid or deposited the entire amount to be recovered according to the order passed under sub-section (5). Subject to the result of the suit the order passed under sub-section (3) or sub-section (5), as the cese may be for recovey of expenses shall be final.

(8) A copy of the order under sub-section (3) or (5) or a copy of the Judgement or both, as the case may be, shall be forwarded to the Deputy Commissoner having jurisdiction, who shall thereupon proceed to recover the amount from the person concerned as if it were an arrears of land revenue.